Committee has taken note of this and criticised the Government in regard to this particular aspect. Under these circumstances, I think you, Madam, should not permit them to place these notifications on the table today. As the Hon'ble Member Sri Kagodu Thimmappa has already stated, the question has already gone to the High Court and the High Court has struck it down. The only reason for bringing them in at this stage appears to be that they want to circumvent and bring them back from the back door which we cannot accept; it is totally a wrong position. This must be the ruling of the Hon'ble Speaker

SRI H. M. CHANNABASAPPA (Minister for Health).—I quite see the force of the agrument of Sri Kagodu Thimmappa and Sri Krishnan. Straightaway I cannot say the circumstances under which they were not placed on the table immediatly after they were issued. The facts are not before me. I shall, however, make a submission in this behalf tomorrow.

SRI M. S. KRISHNAN.—If the Government may make a statement tomorrow saying that there has been a delay for some reason or the other, my submission is that such a delay should not be condoned because already our Subordinate Legislation Committee has taken note of it and castigated the Government for that lapse.

MADAM SPEAKER.—Let us hear the Government.

PAPERS LAID ON THE TABLE

SRI M. MOHAMMED ALI (Minister for Transport and Tourism).—Madam I beg to lay :

"Notification No. HD 60 TMR 76 dated 10th January 1977 Corrigendum to Notification No. HD 60 TMR 76 dated 10th January 1977 as required under sub-section (3) of section 132 of the Motor Vehicles Act, 1939".

MADAM SPEAKER.—The notifications are laid on the Table of the House.

Budget Estimates for 1977-78 Demands for grant (Vote on Account demand No. 1 to 59.

II Supplementary Estimates for 1976-77 demands for grants (Second and final Instalment)

Demand Nos. 2, 3 5, 6, 9, 10, 12, 16, 17. 19, 21, 22, 26, to 30. 35, to 39, 41, 42, 44, 45, 48 to 55.

2-00 P. M.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ)—ಮಾನ್ಯ ಅಧ್ಯಕ್ಷರೇ, ನಿನ್ನೆ ಆಡಿದಂತಹ ಮಾತನ್ನು ಪೂರ್ಣಗೊಳಿಸುವ ಸಲುವಾಗಿ ಹೇಳುವುದಾದರೆ ಈ ಅಕ್ರಾನಟ್ ಮಾರ್ಕೆಟಿಂಗ್ ಫೆಡರೇಷನ್‌ಗೆ ಹಣವನ್ನು ಕೊಟ್ಟಂಥ ಸಂದರ್ಭದಲ್ಲಿ ಸರ್ಕಾರದವರು ಇದರ ಬಗ್ಗೆ ಮಾಡಬೇಕಾದಂತಹ ಕೆಲಸವನ್ನು ಮಾಡಬೇಕು

ಎಂದು ಹೇಳಬೇಕಾಗಿದೆ. ಇದನ್ನು ಎರಡೇ ಮಾತಿನಲ್ಲಿ ಹೇಳುತ್ತೇನೆ. ಈ ಅಡಿಕೆ ಬೆಳೆಗಾರರ ರಕ್ಷಣೆ ಆಗಬೇಕು, ಅವರು ಬೆಳೆದಂತ ಫಸಲಿಗೆ ನ್ಯಾಯವಾದ ಬೆಲೆ ಸಿಗಬೇಕು ಎನ್ನುವ ಉದ್ದೇಶದಿಂದ ಅರ್ಕಾನಟ್ ಮಾರ್ಕೆಟಿಂಗ್ ಫೆಡರೇಷನ್ ಅನ್ನು ರಚನೆ ಮಾಡಿ ಅವರು ಅಡಿಕೆಯನ್ನು ಖರೀದಿ ಮಾಡುವುದಕ್ಕೆ ಕೊಳ್ಳುವುದಕ್ಕೆ ಮಾರಾಟ ಮಾಡುವುದಕ್ಕೆ ಯಾರನ್ನಾದರ ನೇಮಿಸಿ ಅವರಿಗೆ ಸರ್ಕಾರದವರು ಹಣವನ್ನು ಕೊಟ್ಟು ಅವರ ಮೂಲಕ ವ್ಯವಹಾರವನ್ನು ಮಾಡುತ್ತಾರೆ. ಈ ರೀತಿ ವ್ಯವಹಾರ ಮಾಡುವಾಗ ಅಂತಹ ಜನರ ಮೇಲೆ ಸರ್ಕಾರದವರು ಹತೋಟಿಯನ್ನು ಇಡದೇ ಹೋದರೆ ಸರ್ಕಾರದವರು ಕೊಟ್ಟಂತ ಹಣ ಅಪವ್ಯಯವಾಗುತ್ತದೆ. ಆದ್ದರಿಂದ ಸರ್ಕಾರದವರು ಅಂತವರ ಮೇಲೆ ಹತೋಟಿಯನ್ನು ಇಟುಕೊಳ್ಳಬೇಕು. ನಾನು ಆಗಲೇ ಹೇಳಿದಂತೆ ಈ ಫೆಡರೇಷನ್‌ನವರು ಸರ್ಕಾರದಿಂದ ಏನು ಹಣವನ್ನು ಪಡೆದಿದ್ದಾರೆ. ಅವರೇ ನೇರವಾಗಿ ಈ ಅಡಿಕೆ ಬೆಳೆಗಾರರ ಪ್ರದೇಶ ಎಲ್ಲೆಲ್ಲಿ ಇದೆ ಅಂತಹ ಪ್ರದೇಶದಲ್ಲಿ ಈ ಫೆಡರೇಷನ್‌ಗೆ ಸಂಬಂಧಪಟ್ಟಂಥ ಬ್ರಾಂಚ್‌ಗಳನ್ನು ತೆಗೆದು, ಅಂತಹ ಕಡೆಗಳಲ್ಲಿ ಅಡಿಕೆಯನ್ನು ಮಾರಾಟ ಮಾಡತಕ್ಕಂಥ ಕೆಲಸವನ್ನು ಅವರೇ ವಹಿಸಿಕೊಳ್ಳುವುದಾದರೆ ಈ ರೀತಿ ಹೆಚ್ಚುವರಿ ಹಣವನು ಕೊಡತಕ್ಕಂಥಾದ್ದು ಸಾರ್ಥಕವಾಗುತ್ತದೆ ಮತ್ತು ಈ ಅಡಿಕೆ ಬೆಳೆಗಾರರನ್ನು ರಕ್ಷಣೆ ಮಾಡಬೇಕು ಎನ್ನುವ ಉದ್ದೇಶದಿಂದ ಈ ಒಂದು ಫೆಡರೇಷನ್ ಅನ್ನು ಏನು ಸ್ಥಾಪನೆ ಮಾಡಿದ್ದಾರೆ ಇದೂ ಸಾರ್ಥಕವಾಗುತ್ತದೆ ಆದ್ದರಿಂದ ಸರ್ಕಾರದವರು ಈ ಕೆಲಸವನ್ನು ಫೆಡರೇಷನ್ ಮುಖಾಂತರ ಮಾಡಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೇ ಇವತ್ತು ಈ ಕೈಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ ಹೆಚ್ಚುವರಿ ಬೇಡಿಕೆಯನ್ನು ನಮ್ಮ ಮುಂದಿಟ್ಟಿದ್ದಾರೆ. ಇದರಲ್ಲಿ ಗಂಧದ ಎಣ್ಣೆಯ ಕಾರ್ಖಾನೆ ಬಹಳ ಮುಖ್ಯವಾದುದು. ಈ ಗಂಧದ ಎಣ್ಣೆಯ ಕಾರ್ಖಾನೆಗಳಲ್ಲಿ ಗಂಧದ ಮರದ ಕೊರತೆ ಹೆಚ್ಚು ಅದನ್ನು ತಮಿಳುನಾಡಿನಿಂದ ಖರೀದಿ ಮಾಡಬೇಕಾದರೆ ಹಣದ ಆಗತ್ಯವಿದೆ ಎಂದು ಇದನ್ನು ಮಾಡಿದ್ದಾರೆ. ಇದು ಬಹಳ ಒಳ್ಳೆಯದು ನಾನು ಇದನ್ನು ಇಲ್ಲವೆಂದು ಹೇಳುವುದಿಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ಈ ಗಂಧದ ಮರದ ಕೊರತೆ ಆಗುವುದಕ್ಕೆ ಕಾರಣವೇನೆಂದರೆ ಗಂಧದ ಮರ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಸ್ಮಗಲ್ ಆಗುತ್ತಾ ಇದೆ. ಇದು ಮುಖ್ಯವಾದ ಕಾರಣ. ಈ ಗಂಧದ ಮರದ ಕಳ್ಳಸಾಗಾಣಿಕೆಯನ್ನು ತಪ್ಪಿಸಬೇಕಾದರೆ ಉತ್ತರ ಪ್ರದೇಶದಲ್ಲಿ ಮತ್ತು ವೆಸ್ಟ್ ಬೆಂಗಾಲ್‌ನಲ್ಲಿ ಇರುವ ಗಂಧದ ಎಣ್ಣೆಯ ಕಾರ್ಖಾನೆಗಳನ್ನು ರದ್ದುಪಡಿಸಿ ಅವುಗಳನ್ನು ಕೇಂದ್ರ ಸರ್ಕಾರವೇ ತೆಗೆದುಕೊಳ್ಳುವುದಕ್ಕೆ ತಾವು ಕೇಂದ್ರ ಸರ್ಕಾರದವರನ್ನು ಒತ್ತಾಯ ಮಾಡಬೇಕೆಂದು ಹೇಳುತ್ತೇನೆ. ಈ ವಿಷಯದಲ್ಲಿ ಹಿಂದೆ ಕೇಂದ್ರ ಸರ್ಕಾರಕ್ಕೆ ತಮ್ಮ ಮುಖಾಂತರ ಇದಕ್ಕೆ ಮಣೆ ಹಾಕುವುದಕ್ಕೆ ಅವಕಾಶ ಸಿಗಲಿಲ್ಲ. ಆದ್ದರಿಂದ ಈಗಲಾದರೂ ಇದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು ಈ ಕೆಲಸವನ್ನು ಮಾಡಬೇಕು. ನಾವೂ ಸಹ ಅವರಿಗೆ ಹೇಳುತ್ತೇವೆ ಮಾನ್ಯ ಕೈಗಾರಿಕಾ ಸಚಿವರಾದ ಎಸ್. ಎಂ. ಕೃಷ್ಣ ಅವರು ಹಳೆಯ ಸ್ನೇಹಿತರು ಈಗ ಕೇಂದ್ರ ಸರ್ಕಾರದಲ್ಲಿ ಮಂತ್ರಿಗಳಾಗಿದ್ದಾರೆ. ಅವರೆಲ್ಲಾ ಜೈಲಿನಲ್ಲಿದ್ದಾಗ ಮಾನ್ಯ ಕೃಷ್ಣ ಅವರು ಅದರ ಬಗ್ಗೆ ಕನಿಕರವನ್ನು ತೋರಿಸತಕ್ಕಂಥ ಸೌಜನ್ಯ ಅವರಿಗೆ ಬಂದಿರಲಿಲ್ಲ. ಅದರ ಬಗ್ಗೆ ನಾವು ವ್ಯಥೆಪಡುವುದಿಲ್ಲ. ಈಗಲಾದರೂ ಸಹ ಅವರು ಹಳೆಯ ಸ್ನೇಹಿತರನ್ನು ನೆನಪು ಮಾಡಿಕೊಂಡು, ಅವರ ಹಳೆಯ ಭಾಂಧವ್ಯವನ್ನು ನೆನಪು ಮಾಡಿಕೊಂಡು ಕೇಂದ್ರ ಸರ್ಕಾರದ ಮಂತ್ರಿಗಳೊಡನೆ ಚರ್ಚೆಮಾಡಿ, ಈ ವ್ಯವಹಾರವನ್ನು ಅವರ ಗಮನಕ್ಕೆ ತರುವುದಾದರ ಕೇಂದ್ರ ಸರ್ಕಾರದವರು ಈ ಬಗ್ಗೆ ಸಹಾಯ ಮಾಡುತ್ತಾರೆ. ಗಂಧದ ಮರ ಬೆಳೆಯುತ್ತಾ ಇರತಕ್ಕಂಥ ಪ್ರದೇಶದಲ್ಲಿ ಗಂಧದ ಎಣ್ಣೆಯ ಕಾರ್ಖಾನೆ ಸ್ಥಾಪಿಸಿ, ಗಂಧದ ಮರದ ಕಳ್ಳಸಾಗಾಣಿಕೆ ಏನು ನಡೆಯುತ್ತಿದೆ ಅದನ್ನು ತಪ್ಪಿಸಿ ಅವುಗಳನ್ನೆಲ್ಲಾ ರಾಷ್ಟ್ರೀಕರಣ ಮಾಡುವಂತೆ ಒತ್ತಾಯಮಾಡಿ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ನಾವು ಸಹ ಹೇಳುತ್ತೇನೆ. ಈ ಕೆಲಸವನ್ನು ತಾವು ಮಾಡುವುದಾದರ ಇವತ್ತು ತಮಿಳುನಾಡಿನಲ್ಲಿರುವ ಗಂಧದ ಮರಗಳನ್ನು ಮತ್ತು ನಮ್ಮ ರಾಜ್ಯದಲ್ಲಿರತಕ್ಕಂಥ ಗಂಧದ ಮರಗಳನ್ನು ಉಳಿಸುವುದಕ್ಕೆ ಮತ್ತು ನಮ್ಮ ರಾಜ್ಯದಲ್ಲಿರತಕ್ಕಂಥ ಗಂಧದ ಎಣ್ಣೆಯ ಕಾರ್ಖಾನೆಗಳನ್ನು ನಡೆಸುವುದಕ್ಕೆ ಅನುಕೂಲವಾಗುತ್ತದೆ ಇವತ್ತು ತಮಿಳುನಾಡಿನಲ್ಲಿರತಕ್ಕಂಥ ಗಂಧದ ಮರಗಳನ್ನು ಕೊಂಡುಕೊಂಡು ಬಂದು ನಮ್ಮ ರಾಜ್ಯದಲ್ಲಿರತಕ್ಕಂಥ ಗಂಧದ ಎಣ್ಣೆ ಕಾರ್ಖಾನೆಗಳಿಗೆ ಸರಬರಾಜು ಮಾಡುತ್ತಿದ್ದಾರೆ. ಇದು ಎಂತಹ ಒಳ್ಳೆಯ ಕೆಲಸ ಎಂದು ಎಲ್ಲರಿಗೂ ಗೊತ್ತಿದೆ. ತಾವು ಇಲ್ಲಿ ಇವತ್ತಿನ ದಿವಸ ನೋಡಬಹುದು, ಸಾಗರ, ಸೊರಬ ಮತ್ತು ಕುಮಟಾಅಲ್ಲಿಂದ ಬಂದಂತಹ ಗಂಧದ ಮರದ ಕೆತ್ತನೆಗಾರರು ಇಲ್ಲಿಯ ಕಲಾಕೃತಿಗಳನ್ನು ಮಾಡಿದ್ದಾರೆ. ಈ ರೀತಿ ಗಂಧದ ಮರದ ಕೆತ್ತನೆ ಕೆಲಸವನ್ನು ಮಾಡಿ ಎಷ್ಟೋ ಮಂದಿ ಬದುಕುತ್ತಿದ್ದಾರೆ.

ಅಧ್ಯಕ್ಷರು.—ಈ ಕೆತ್ತನೆ ಕೆಲಸಗಳನ್ನೆಲ್ಲಾ ನಮ್ಮ ಊರಿನವರು, ಮೈಸೂರಿನವರು ಮಾಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಕೆತ್ತನೆ ಕೆಲಸಗಳನ್ನು ಮಾಡಿರುವವರು ಮೈಸೂರಿನವರು ಇರಬಹುದು ಅಥವಾ ಸೊರಬದವರೇ ಇರಬಹುದು. ಆದರೆ ಅವರು ಅಲ್ಲೊಬ್ಬರು ಇಲ್ಲೊಬ್ಬರು ಇದ್ದಾರೆ ಈ ಕೆತ್ತನೆ ಕೆಲಸವನ್ನು ಇನ್ನೊಬ್ಬರು ಮಾಡಬೇಕಾದರೆ ಬಹಳ ಕಷ್ಟ ಇದೆ. ಅದು ಏನೇ ಇದ್ದರೂ ಈ ಗಂಧದ ಮರದ ಕೆತ್ತನೆ ಕೆಲಸಗಾರರಿಗೆ ಗಂಧದ ಮರಗಳನ್ನು ಒದಗಿಸುವುದಕ್ಕಾಗಿ ಅವರಿಗೆ ಶೇಕಡ ೭೫ ಭಾಗದ ಹಣವನ್ನು ಸಬ್ಸಿಡಿ ರೂಪದಲ್ಲಿಯೂ ಮತ್ತು ಶೇಕಡ ೨೫ ಭಾಗದ ಹಣವನ್ನೂ ಅವರೂ ಕೊಡಬೇಕಾಗುತ್ತದೆ. ಈ ಬಗ್ಗೆ ೧೯೭೬ನೇ ಇಸವಿಯ ಮಾರ್ಚ್ ತಿಂಗಳಿನಲ್ಲಿ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದರು. ಈ ಆಜ್ಞೆ ಹೊರಟು ಅವರಿಗೆ ಗಂಧದ ಮರಗಳು ಹೋಗುವುದರೊಳಗಾಗಿ ಸುಮಾರು ಸೆಪ್ಟೆಂಬರ್ ತಿಂಗಳಾಯಿತು. ಈ ಬಗ್ಗೆ ನಾನು ಚೀಫ್ ಸೆಕ್ರೆಟರಿಯವರಿಗೆ ಒಂದು ಕಾಗದವನ್ನು ಬರೆದೆ. ಮತ್ತೆ ಏಪ್ರಿಲ್ ತಿಂಗಳಲ್ಲಿ ಒಂದು ಆಜ್ಞೆ ಹೊರಡಿಸಿದರು. ಆದರ ಸೌಲಭ್ಯ ಈ ಜನಕ್ಕೆ ಸಿಕ್ಕಬೇಕಾದರೆ ನವೆಂಬರ್ ತಿಂಗಳಾಯಿತು. ಆಗಲೂ ಅವರಿಗೆ ಸೌಲಭ್ಯ ಸಿಕ್ಕಲಿಲ್ಲ. ಇದು ಯಾವಾಗ ಕಾರ್ಯಗತವಾಗುತ್ತದೆ ಎಂದು ಕೇಳಿದರೆ ಅದಕ್ಕೆ ಉತ್ತರ ಇಲ್ಲ. ಅವರಿಗೆ ಒಂದನೇ ಕಂತಿನ ಗಂಧದ ಮರ ಪ್ರತಿ ತಿಂಗಳು ಬೇಕಾಗಿದ್ದು ಸುಮಾರು ೫೦೦ರಿಂದ ೧೦೦೦ ಕೆ.ಜಿ. ಮರ ಬೇಕಾಗುತ್ತದೆ. ಈ ಗಂಧದ ಎಣ್ಣೆ ಕಾರ್ಖಾನೆಗೆ ೨೦ ಸಾವಿರ ಟನ್ ಮರ ಬೇಕಾಗುತ್ತದೆ. ಅವರಿಗೆ ಗಂಧದ ಮರಗಳನ್ನು ಕೊಟ್ಟರೆ ಸಾಕು. ಆದರೆ ಒಂದನೇ ಕಂತಿನ ಮರಗಳನ್ನು ಡಿಸೆಂಬರ್ ತಿಂಗಳಲ್ಲಿ ಕೊಟ್ಟಿದ್ದಾರೆ. ಅವರಿಗೆ ಮೊದಲನೇ ಕಂತಿನಲ್ಲಿ ೧೦೦೦ ಕೆ.ಜಿ. ಮರಗಳು ಬೇಕಾಗಿದ್ದರೆ ಅವರು ಕೊಟ್ಟಿದ್ದು ೪೦೦ ಕೆ.ಜಿ. ಮಾತ್ರ ಎರಡನೆಯ ಕಂತಿನ ಮರಗಳನ್ನು ಕೇಳಿದರೆ ಮರವೇ ಇಲ್ಲವೆಂದು ಹೇಳಿದ್ದಾರೆ. ಚಿಕ್ಕಮಗಳೂರು ಡಿವಿಜನ್‌ನಿಂದ ಮರಗಳನ್ನು ತರಿಸಿಕೊಡಿರಿ ಎಂದು ಕೇಳಿದರೆ ಅಲ್ಲಿ ಮರವೇ ಇಲ್ಲವೆಂದು ಬರೆದಿದ್ದಾರೆ. ಅಲ್ಲದೇ ಈ ಸೌಲಭ್ಯವನ್ನು ಪಡೆದುಕೊಳ್ಳಲು ಇದನ್ನು ವರ್ಷಕ್ಕೆ ಮಾತ್ರ ರಿನ್ಯೂ ಮಾಡಿದ್ದಾರೆ. ಈ ಒಂದು ಆಜ್ಞೆಯನ್ನು ಹೊರಡಿಸಿದಾಗ ಇದರ ಸೌಲಭ್ಯವನ್ನು ನಡೆದುಕೊಳ್ಳಲು ಇದು ಕನಿಷ್ಟ ೫ ವರ್ಷಗಳಾದರೂ ಇರಬೇಕೇ ಬೇಡವೇ? ಇದನ್ನು ವರ್ಷವರ್ಷೇ ಮಾರ್ಚ್‌ನಿಂದ ಮಾರ್ಚ್‌ವರೆಗೆ ರಿನ್ಯೂ ಮಾಡಿ ನಂತರ ತೆಗೆದುಹಾಕುತ್ತಾರೆ. ಇದರಿಂದ ಅವರಿಗಿರುವ ಸೌಲಭ್ಯ ಲ್ಯಾಪ್ಸ್ ಆಗುತ್ತದೆ. ಬಡವರಿಗಾಗಿ ಇಷ್ಟು ವ್ಯವಹಾರವನ್ನು ಮಾಡತಕ್ಕಂಥ ಸರ್ಕಾರ ಏನಿದೆ ಇದು ಈ ಸಣ್ಣ ಕೈಗಾರಿಕೆಯಲ್ಲಿ ಕೆಲಸ ಮಾಡತಕ್ಕಂಥ ಜನರಿಗೆ ಸಹಾಯ ಮಾಡತಕ್ಕಂಥ ಕಾರ್ಯಾಲದಲ್ಲಿ ನಮ್ಮ ಹಣಕಾಸಿನ ಸಚಿವರಿಗೆ ಸ್ವಲ್ಪವಾದರೂ ಕನಿಕರ ಈ ಜನರ ಬಗ್ಗೆ ಬರಲಿಲ್ಲವೇಕೆ? ಯಾರ ಬಗ್ಗೆಯೂ ಕನಿಕರ ತೋರಿಸತಕ್ಕಂಥ ಹೃದಯವನ್ನು ಈ ಸರ್ಕಾರ ಕಳೆದುಕೊಂಡಿದೆ. ಈಗಾಗಲೇ ನಮ್ಮ ಸಣ್ಣ ಕೈಗಾರಿಕಾ ಮಂತ್ರಿಯವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಅಲ್ಲಿ ಸಣ್ಣ ಕೈಗಾರಿಕಾ ಗುಡಿಗಾರರ ಪರಿಸ್ಥಿತಿಯನ್ನು ತೋರಿಸಿದ್ದೇನೆ. ಅವರಿಗೆ ಸಹಾಯವನ್ನು ಮಾಡತಕ್ಕಂಥ ಪರಿಸ್ಥಿತಿಯಲ್ಲಿದ್ದು, ಹೆಚ್ಚು ಹಣವನ್ನು ಕೊಟ್ಟು ಅವರಿಗೆ ಸಹಾಯ ಮಾಡುವ ವ್ಯವಸ್ಥೆಯನ್ನು ಮಾನ್ಯ ಮಂತ್ರಿಯವರು ಮಾಡಿದರೆ ಒಳ್ಳೆಯದು ಈ ಗಂಧದ ಮರದಲ್ಲಿ ಕೆತ್ತನೆ ಕೆಲಸ ಮಾಡಬೇಕಾದರೆ ಅದು ಸೀಸನ್ ವುಡ್ ಆಗಬೇಕು. ಅದು ಸೀಸನ್ ವುಡ್ ಆಗಬೇಕಾದರೆ ೬ ತಿಂಗಳು ಬೇಕಾಗುತ್ತದೆ. ಈ ಮರವನ್ನು ೬ ತಿಂಗಳ ಕಾಲ ಇಟ್ಟರೆ ಅದರಲ್ಲಿರುವ ನೀರು ಬತ್ತಿಹೋಗಿ ಸೀಸನ್ ವುಡ್ ಆಗುತ್ತದೆ. ನಂತರ ಅದರಲ್ಲಿ ಕೆತ್ತನೆ ಕೆಲಸ ಮಾಡಿ ಇಟ್ಟರೆ ಅದರಲ್ಲಿ ಬಿರುಕು ಬಿಡುವುದಿಲ್ಲ. ಏಕೆಂದರೆ ಆ ಮರವನ್ನು ೬ ತಿಂಗಳ ಕಾಲ ಇಟ್ಟು ಸೀಸನ್ ವುಡ್ ಮಾಡುವುದರಿಂದ ಬಿರುಕು ಬಿಡುವುದಿಲ್ಲ. ಮರಗಳನ್ನು ಒಂದೊಂದು ವರ್ಷ ಸ್ಟ್ಯಾಕ್ ಮಾಡಿ ಇಟ್ಟು ಅದು ಸೀಸನ್ ವುಡ್ ಆದಿತೆ ಅದರಲ್ಲಿ ಗಂಧದ ಕೆತ್ತನೆ ಮಾಡುವುದಾದರೆ ಸಾವಿರಾರು ವರ್ಷಗಳು ಬಾಳಿಕೆ ಬರುತ್ತದೆ. ಯಾವ ಜಾಯಿಂಟ್ ಆಗಲೀ, ಬಿರುಕಾಗಲೀ ಬರುವುದಿಲ್ಲ ಆದುದರಿಂದ ಇದರಲ್ಲಿ ಕೆತ್ತನೆ ಕೆಲಸವನ್ನು ಮಾಡುವವರಿಗೆ ಮಾನ್ಯ ಹಣಕಾಸಿನ ಸಚಿವರು ೫ ಲಕ್ಷ ರೂಪಾಯಿಗಳನ್ನು ಏತಕ್ಕೆ ಕೊಡಬಾರದಾಗಿತ್ತು? ಇವತ್ತು ಒಂದು ಆಜ್ಞೆಯನ್ನು ಹೊರಡಿಸಿ ಅವರಿಗೆ ಏನು ಒಂದು ರಿಯಾಯಿತಿಯನ್ನು ಕೊಡುತ್ತಾರೆ ಅದು ೫ ವರ್ಷಗಳವರೆಗೆ ಇರಬೇಕು. ಮಾನ್ಯ ಮಂತ್ರಿಯವರಾದ ಶ್ರೀಮಾನ್ ಮೊಯಿಲಿ ಅವರನ್ನು ಕಂಡು ಈ ಬಗ್ಗೆ ಕೇಳಿದ್ದೇನೆ ಆದ್ದರಿಂದ ದಯವಿಟ್ಟು ಈ ಬಗ್ಗೆ ಆಜ್ಞೆಯನ್ನು ಹೊರಡಿಸಿದರೆ ಅದನ್ನು ೫ ವರ್ಷದವರೆಗೆ ಇಡಬೇಕು ಮತ್ತು ಅದನ್ನು ಪರಿಶೀಲನೆ ಮಾಡತಕ್ಕಂಥ ಕೆಲಸವನ್ನು ಮಾಡಿ ೫ ಲಕ್ಷ ರೂಪಾಯಿಗಳ ಬಂಡವಾಳವನ್ನು ಅವರಿಗೆ ಕೊಡಬೇಕು ಎಂದು ಹೇಳುತ್ತೇನೆ. ಈ ಗಂಧದ ಗುಡಿಗಾರರ ಸೊಸೈಟಿ ಸಾಗರದಲ್ಲಿ ಇದೆ. ಮಹಾತ್ಮ ಗಾಂಧೀಜಿಯವರು ೧೯೧೮ನೇ ಇಸವಿಯಲ್ಲಿ ಅಲ್ಲಿಗೆ ಭೇಟಿ ಕೊಟ್ಟು ತಮ್ಮ ಹಸ್ತಾಕ್ಷರದಲ್ಲಿ ಬರೆದಿದ್ದಾರೆ. ಮಾನ್ಯ ಹಣಕಾಸಿನ ಸಚಿವರು ಅಲ್ಲಿಗೆ ಬಂದು ನೋಡಿ

ಎಂದು ಹೇಳಿದರೆ ಅವರು ಬರುವುದಿಲ್ಲ. ಹಳೆಯ ಕಾಲದ ಸಂಪ್ರದಾಯವನ್ನು ಉಳಿಸಬೇಕು ಎಂದ ಅಶೋಕಾ ಹೋಟೆಲ್‌ನಲ್ಲಿ ಕುಳಿತುಕೊಂಡು ಭಾಷಣ ಮಾಡಿದರೆ ನಮ್ಮ ಹಳೆಯ ಕಾಲದ ಪರಿಸ್ಥಿ ಸಂಸ್ಕೃತಿ ಉಳಿಯುತ್ತದೆಯೇ ? ಸಾಗರದಲ್ಲಿರುವ ಗುಡಿಗಾರರ ಸಹಕಾರ ಸಂಘ ಏನಿದೆ ಅದು ಹಳೆಯ ಕಾಲದ ಸಹಕಾರ ಸಂಘ. ಅದಕ್ಕೆ ಒಂದು ಲಕ್ಷ ರೂಪಾಯಿ ಬಂಡವಾಳವನ್ನು ಕೊಟ್ಟರೆ, ಅಲ್ಲಿರತಕ್ಕಂ ಕೆಲಸಗಾರರಿಗೆ ಸಹಾಯ ಮಾಡಿದರೆ ಖಂಡಿತವಾಗಿಯೂ ಈ ಒಂದು ಕಲೆಯನ್ನು ಉಳಿಸುವುದಕ್ಕೆ ಸಾಧ ವಾಗುತ್ತದೆ. ಈ ಕೆಲಸವನ್ನು ಇವತ್ತಿನವರೆಗೂ ಮಾಡಿಲ್ಲ ಗಂಧದ ಎಣ್ಣೆಯ ಕಾರ್ಖಾನೆಯ ಬಗ್ಗೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯವರು ಹೇಳಿದ್ದಾರೆ. ಗಂಧದ ಮರವನ್ನು ಕೊಳ್ಳುವುದಕ್ಕೆ ದುಡ್ಡು ಕೊಟ್ಟಿದ್ದಾರೆ. ಡಿಟರ್‌ಜಂಟ್ ಪ್ಲಾಂಟ್ ವರ್ಕಿಂಗ್ ಕ್ಯಾಪಿಟಲ್‌ಗೋಸ್ಕರ ದುಡ್ಡು ಕೊಟ್ಟಿದ್ದಾರೆ ಇವತ್ತು ಸರ್ಕಾರದವರು ಗಂಧದ ಎಣ್ಣೆಯ ಕಾರ್ಖಾನೆಯನ್ನು ನಡೆಸುತ್ತಿದ್ದಾರೆ ಡಿಟರಜಂಟ್ ಪ್ಲಾಂಟನ್ನು ನಡೆಸುತ್ತಿದ್ದಾರೆ. ಇಲ್ಲಿ ಬುದ್ಧಿ ಇಲ್ಲದ ಜನರನ್ನು ಈ ಕಾರ್ಖಾನೆಯಲ್ಲಿ ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ಈ ಕಾರ್ಖಾನೆ ಉದ್ಧಾರವಾಗುತ್ತದೆಯೇ ?

ನಾವು ಅದನ್ನೇ ಹೇಳಿದ್ದೇವೆ ನಾವು ತಯಾರಿಸಿದ ವಸ್ತುಗಳಿಗೆ ಇನ್ನು ಸ್ವಲ್ಪ ಹೆಚ್ಚಿನ ದರವನ್ನು ಕೇಳುವುದಕ್ಕೆ ಹೋಗಿದ್ದಾರೆ. ನಾನು ಶ್ರೀಮಾನ್ ಮೊಯಿಲಿಯವರನ್ನು ನಮ್ಮ ಸಾಗರ ತಾಲ್ಲೂಕಿಗೆ ಬಂದು ಅದನ್ನೆಲ್ಲಾ ನೋಡಬೇಕೆಂದು ಹೇಳಿದ್ದೆ ಅವರು ಅಲ್ಲಿಗೆ ಬಂದಿಲ್ಲ. ಕಾರ್ಖಾನೆ ನಡೆಸುವುದಕ್ಕೆ, ಅವರು ಮಾಡಿರುವಂತಹ ಸಾಮಾನಿಗೆ ಸರಿಯಾದ ಖರೀದಿ ಕೊಡಿರಿ ಎಂದರೆ ಅದನ್ನು ಕೊಡುವುದನ್ನು ಬಿಟ್ಟು ಯಾರು ವ್ಯಾಪಾರ ಮಾಡುತ್ತಾರೆ ಅಂತಹ ದಳ್ಳಾಳಿಗಳಿಗೆ ಅವಕಾಶ ಮಾಡಿ ನಾವು ನಡೆಸಿಕೊಂಡು ಬರ ತಕ್ಕಂಥ ಗಂಧದ ಎಣ್ಣೆ ಕಾರ್ಖಾನೆಯನ್ನು ಲುಕ್ಸಾನಿಗೆ ಗುರಿಪಡಿಸುವುದಕ್ಕೆ ಹೊರಟಿದ್ದಾರೆ. ಯಾವುದೋ ಒಂದು ಡಿಟರ್‌ಜಂಟ್ ಎಂದು ಹೊಸದಾಗಿ ಪ್ರಾರಂಭ ಮಾಡಿರುವುದಕ್ಕೆ ತಾವು ಸರ್ಕಾರದಿಂದ ವರ್ಕಿಂಗ್ ಕ್ಯಾಪಿಟಲ್ ಕೊಟ್ಟಿದ್ದೀರಿ. ನಾಳೆ ಇದನ್ನು ನಾವು ಪರಿಶೀಲನೆ ಮಾಡಿ ನೋಡಬೇಕಾದ್ದಿದೆ. ತಾವು ಈ ರೀತಿಯಲ್ಲಿ ಹಣವನ್ನು ಖರ್ಚು ಮಾಡುವುದಕ್ಕೆ ಹೊರಟಿರುವುದನ್ನು ನೋಡದೆ ಹೋದರೆ ನಮ್ಮ ರಾಜ್ಯಕ್ಕೆ ಬಹಳ ಹಾನಿ ಆಗುತ್ತದೆ. ಮಾನ್ಯ ಹಣಕಾಸಿನ ಸಚಿವರು ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ನಮ್ಮ ಕೈಗಾರಿಕೆಯಲ್ಲಿ ಎಷ್ಟು ಹಣವನ್ನು ನಾವು ವಿನಿಯೋಗಿ ಸಿದ್ದೇವೆ ಅದನ್ನು ಲಕ್ಷ್ಯದಲ್ಲಿ ಇಟ್ಟುಕೊಳ್ಳಬೇಕು. ನಮ್ಮ ವಿಶ್ವೇಶ್ವರಯ್ಯ ಇಂಡಸ್ಟ್ರಿಯಲ್ ಪ್ಲಾಂಟ್ ಹಾಕುವುದಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದೀರಿ? ಕೈಗಾರಿಕೆ ಇಲಾಖೆಯಲ್ಲಿ ಮೊದಲು ಇದ್ದಂತಹ ಡೈರೆ ಕ್ಟರ್ ಶ್ರೀಮಾನ್ ಜಾಫರ್ ಸೈಫುಲ್ಲಾರವರ ಮೇಲೆ ಬೇಕಾದಷ್ಟು ಅಪಾದನೆಗಳು ಇದ್ದರೂ ಕೂಡ ಅಂತಹ ವರನ್ನು ಮತ್ತೆ ಭಧ್ರಾವತಿ ಪೇಪರ್ ಮಿಲ್‌ಗೆ ಹಾಕಿದ್ದೀರಿ. ಅವರನ್ನು ಬೇರೆ ಎಲ್ಲಿಯಾದರೂ ಹಾಕಿ ಸ್ವಲ್ಪ ದಿವಸ ಪುರುಷೋತ್ತು ಕೊಡಿ. ಅವರ ಕಾಲದಲ್ಲಿ ಹೆಚ್ಚು ಹಣ ಅಪವ್ಯಯವಾಗಿದೆ ಎಂದು ಬೇಕಾ ದಷ್ಟು ಅಪಾದನೆಗಳು ಇವೆ ಹಿಂದೆ ಸ್ಟೈನ್‌ಲೆಸ್ ಸ್ಟೀಲ್ ಹಂಚುವ ಪ್ರಕರಣದಲ್ಲಿ ಸಾಕಷ್ಟು ಅವ್ಯವ ಹಾರಗಳು ನಡೆದಿವೆ ಆದರೂ ಅಂತಹ ಜನರನ್ನೇ ಇಂತಹ ಜವಾಬ್ದಾರಿಯುತ ಸ್ಥಾನಗಳಿಗೆ ಹಾಕಿದರೆ ನಮ್ಮ ಸಂಸ್ಥೆಗಳು ಲಾಭ ಮಾಡತಕ್ಕಂಥ ಪ್ರವೃತ್ತಿ ಎಲ್ಲಿ ಬರುತ್ತದೆ.

ಇನ್ನು ಒಂದು ವಿಷಯವನ್ನು ಹೇಳಬೇಕೆಂದರೆ ಮಾನ್ಯ ಚೆನ್ನಬಸಪ್ಪನವರು ಬಹಳ ಅನುಭವಿಗಳು ಜೊತೆಗೆ ವಯಸ್ಸಾದವರು ಇವತ್ತಿನ ದಿವಸ ಅವರು ಎಂತಹ ಕಾರುಗಳಲ್ಲಿ ಓಡಾಡುತ್ತಿದ್ದಾರೆ? ಅಂಬಾ ಸಿಡರ್ ಕಾರ್. ತಾವು ಕೂಡ ದೊಡ್ಡ ದೊಡ್ಡ ಕಾರುಗಳಿಗೆ ಹೊರಟಿದ್ದೀರಿ. ಆದರೆ ಸದ್ಯದಲ್ಲಿ ಅದನ್ನು ಕೈಬಿಟ್ಟಿದ್ದೀರಿ. ಮಾನ್ಯ ಘೋರ್ಪಡೆಯವರು ಹಣಕಾಸಿನ ಸಚಿವರು ಅವರು ಸಹಿತ ಅಂಬಾಸಿಡರ್ ಕಾರಿ ನಲ್ಲಿ ಓಡಾಡುತ್ತಿದ್ದಾರೆ. ಅಂಥಾದ್ದರಲ್ಲಿ ನಮ್ಮ ಐ ಪಿ ಎಸ್. ಅಧಿಕಾರಿಗಳು ಏನು ಇದ್ದಾರೆ ಅದರಲ್ಲೂ ಕೈಗಾರಿಕಾ ಡೈರೆಕ್ಟರ್ ಆಗಿದ್ದ ಶ್ರೀಮಾನ್ ಸೈಫುಲ್ಲಾರವರು ಕ್ಯಾಡಿಲಾಕ್ ಕಾರಿನಲ್ಲಿ ಏಕೆ ಓಡಾಡ ಬೇಕು? ಇವರನ್ನೆಲ್ಲಾ ನಮ್ಮ ಜನತೆ ಮೇಲೆ ದರ್ಬಾರ ಮಾಡುವುದಕ್ಕೆ ಇಟ್ಟುಕೊಂಡಿದ್ದೇವೆಯೋ ಅಥವಾ ಕೆಲಸ ಮಾಡುವುದಕ್ಕೆ ಇಟ್ಟುಕೊಂಡಿದ್ದೇವೆಯೋ ಎನ್ನುವುದು ಮುಖ್ಯ ಪ್ರಶ್ನೆ. ಇರುವ ಕೆಲಸವನ್ನು ಆಸಕ್ತಿ ವಹಿಸಿ ಕೆಲಸಮಾಡಿ ನಮ್ಮ ಕಾರ್ಖಾನೆಗಳನ್ನು ಅಭಿವೃದ್ಧಿಪಡಿಸುವು ದನ್ನು ಬಿಟ್ಟು ಅವರ ಸ್ವಂತ ಭೋಗಕ್ಕೆ ಸರ್ಕಾರದ ಕಾರು ಮತ್ತು ಹಣವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ನಮ್ಮ ಕಾರ್ಖಾನೆಯಲ್ಲಿ ಉತ್ಪಾದನೆಯಾಗುವ ಸಕ್ಕರೆಯನ್ನು ಬೈ ಪ್ರಾಡೆಕ್ಟ್ ಎಂದೂ ಬಗಾಸೆಯನ್ನು ವೇಯಿಸ್ ಪ್ರಾಡಕ್ಟ್ ಎಂದು ಪರಿಗಣಿಸಿದ್ದಾರೆ. ಇದು ಬಹಳ ಚೆನ್ನಾಗಿ ಇದೆ. ಅಲ್ಲಿ ಕಾರ್ಖಾನೆ ಆಗಬಾರದು ಅನ್ನುವ ದೃಷ್ಟಿಯಿಂದ ಇವರು ಈ ರೀತಿ ಹೇಳುತ್ತಿದ್ದಾರೆ. ನಮ್ಮ

ಶಿವಮೊಗ್ಗಾದಲ್ಲಿ ಒಂದು ಪ್ರೈವೇಟ್ ಸಕ್ಕರೆ ಕಾರ್ಖಾನೆ ಇದೆ. ಅದಕ್ಕೆ ಶ್ರೀಮಾನ್ ಕೆ. ಹನುಮಂತಯ್ಯನವರು ಮೂರು ಸಾವಿರ ಎಕರೆ ಜಮೀನನ್ನು ಕೊಟ್ಟು ಈಗ ಅವರು ಅದರ ಜೊತೆಗೆ ಬೇಕಾದಷ್ಟು ಜಮೀನನ್ನು ಎನ್‌ಕ್ರೋಚ್ ಮಾಡಿಕೊಂಡು ಅವರ ಕಂಪನಿಯನ್ನು ದೊಡ್ಡದು ಮಾಡಿಕೊಳ್ಳುತ್ತಾ ಬಂದಿದ್ದಾರೆ. ನಮ್ಮ ಸಣ್ಣಪುಟ್ಟ ಭೂಮಾಲೀಕರು ತಮ್ಮ ಭೂಮಿಯನ್ನು ಕಳೆದುಕೊಂಡು ಅವರಿಗೆ ಸರ್ಕಾರದಿಂದ ಪರಿಹಾರ ಸಿಕ್ಕದೆ ಕಣ್ಣೀರು ಬಿಡುತ್ತಿದ್ದಾರೆ. ನಮ್ಮ ಸರ್ಕಾರದವರು ಸಹಾಯ ಮಾಡುತ್ತಿರುವುದು ಇಂತಹ ದೊಡ್ಡ ದೊಡ್ಡ ಸಾಹುಕಾರರಿಗೆ ಮಾತ್ರ. ಇಷ್ಟು ಜಮೀನು ಅವರು ಇಟ್ಟುಕೊಂಡಿದ್ದರೂ ಭೂಸುಧಾರಣಾ ಕಾನೂನಿನ ಪ್ರಕಾರ ಸರ್ಕಾರ ಅವರಿಂದ ಸ್ವಲ್ಪ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಶಕ್ತಿ ಇಲ್ಲ. ಇಂತಹವರು ಸರ್ಕಾರ ನಡೆಸುತ್ತಿದ್ದಾರೆ. ಅದರಲ್ಲೂ ಇಂತಹ ಸಕ್ಕರೆ ಕಾರ್ಖಾನೆಗೆ ಎಕ್ಸ್‌ಪ್ಯಾನ್‌ಷನ್ ಸ್ಕೀಮ್ ಎಂದು ಲೈಸೆನ್ಸ್ ಕೊಟ್ಟು ಅವಕಾಶಮಾಡಿ ಕೊಟ್ಟಿದ್ದಾರೆ.

ಇದೇ ಸಕ್ಕರೆ ಕಂಪನಿಯವರು ರೈತನು ಬೆಳೆದ ಕಬ್ಬಿಗೆ ಟನ್ ಒಂದಕ್ಕೆ ೧೨೦ ರೂಪಾಯಿ ಕೊಡುತ್ತಾರೆ ಅದೇ ನಮ್ಮ ಕೋ ಆಪರೇಟೀವ್ ಸಕ್ಕರೆ ಕಾರ್ಖಾನೆಗಳು ಟನ್‌ಗೆ ೧೩೫ ರೂಪಾಯಿನಿಂದ ಹಿಡಿದು ೧೫೦ ರೂಪಾಯಿಗಳವರೆಗೂ ಕೊಡುತ್ತಿದ್ದಾರೆ. ಅಂದರೆ ನಮ್ಮ ಸರ್ಕಾರದವರು ಇಂತಹ ಸಾಹುಕಾರರಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆಯೇ ಹೊರತು ಸಹಕಾರಿ ರಂಗದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಮಾಡುವುದಕ್ಕೆ ನಮ್ಮ ಶಿವಮೊಗ್ಗಾ ಜಿಲ್ಲೆಯಲ್ಲಿ ಇಲ್ಲಿಯವರೆಗೂ ಪ್ರಯತ್ನಮಾಡಿಲ್ಲ. ಇಲ್ಲಿ ಯಾರು ಪ್ರೈವೇಟ್ ಕಾರ್ಖಾನೆ ನಡೆಸುತ್ತಿದ್ದಾರೆ ಅವರಿಗೆ ನಮ್ಮ ಸಹಕಾರಿ ರಂಗದಲ್ಲಿ ಕಾರ್ಖಾನೆ ಬಂದರೆ ತೊಂದರೆಯಾಗಬಹುದು ಎಂದು ಸರ್ಕಾರ ಈ ಕಡೆಗೆ ಗಮನ ಕೊಡುತ್ತಿಲ್ಲವೆಂದು ಹೇಳಿದರೂ ತಪ್ಪಾಗುವುದಿಲ್ಲ. ಮಾನ್ಯ ಜಾಫರ್ ಷರೀಫುಲ್ಲಾರವರು ಸಹಕಾರಿ ಕ್ಷೇತ್ರದಲ್ಲಿ ಕಾರ್ಖಾನೆ ನಡೆಸುವ ಬಗ್ಗೆ ಸಾಕಷ್ಟು ವ್ಯಾಖ್ಯಾನ ಮಾಡಿ ಅದನ್ನು ನಿಲ್ಲಿಸಿದ್ದಾರೆ ಇನ್ನು ಉದಾಹರಣೆಗೆ ಹೇಳುವುದಾದರೆ ಮಣಿಪಾಲ್‌ನಲ್ಲಿ ಒಂದು ಹಾಲಿನ ಡೈರಿಯನ್ನು ನಡೆಸುವುದಕ್ಕೆ ಹಣವನ್ನು ಸರ್ಕಾರದವರು ಕೊಟ್ಟಿದ್ದಾರೆ. ಇದೇ ಜನ ಹೇಳುತ್ತಾರೆ ನಮ್ಮನ್ನು ವೆಸ್ಟೆಡ್ ಇಂಟರೆಸ್ಟ್ ಎಂದು ಏನು ನಮ್ಮ ಶಿವಮೊಗ್ಗಾ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆ ಸಾವುಕಾರ ಬೊಜ್ಜು ಬೆಳೆಯಿಸಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ನಮ್ಮ ಜಿಲ್ಲೆಯ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ನಿಲ್ಲಿಸಿದ್ದಾರೆ. ನಮ್ಮ ಹಣಕಾಸಿನ ಸಚಿವರನ್ನು ಕೇಳುತ್ತೇನೆ ನಿಮ್ಮ ಸರ್ಕಾರಕ್ಕೆ ನಾಚಿಕೆಯಾಗುವುದಿಲ್ಲವೇ?

ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಸಹಕಾರಿ ರಂಗದಲ್ಲಿ ಸಕ್ಕರೆ ಕಾರ್ಖಾನೆಗಳು ಬರುವುದಕ್ಕೆ ನಾವು ಎಂದೂ ಅಡ್ಡಿಬರುವುದಿಲ್ಲ. ಎಲ್ಲಿ ಸಕ್ಕರೆ ಕಾರ್ಖಾನೆ ನಡೆಸುತ್ತೇವೆಂದು ಖಾಸಗಿ ಜನರು ಬರುತ್ತಾರೆ ಅಲ್ಲಿ ನಾವು ಅವರಿಗೆ ಪ್ರೋತ್ಸಾಹ ಕೊಟ್ಟಿದ್ದೇವೆ. ಅದರಿಂದ ನಮ್ಮ ಜನರಿಗೂ ಸಹಾಯವಾಗುತ್ತದೆ ಮತ್ತು ಸರ್ಕಾರಕ್ಕೂ ಆದಾಯ ಬರುತ್ತದೆ. ಆದ್ದರಿಂದ ಇಂತಹ ಸಂದರ್ಭಗಳಲ್ಲಿ ಪ್ರೋತ್ಸಾಹ ಕೊಟ್ಟಿದ್ದೇವೆ, ಇದು ಸರ್ಕಾರದ ಧೋರಣೆಯೂ ಹೌದು. ಇದರ ಜೊತೆಗೆ ಹೆಚ್ಚು ಹೆಚ್ಚು ಸಕ್ಕರೆ ಕಾರ್ಖಾನೆ ಬರಬೇಕು ಎಂಬ ಉದ್ದಿಶ್ಯದಿಂದ ಕೂಡ ಕೊಟ್ಟಿದ್ದೇವೆ. ಇದಕ್ಕೆ ನಾಚಿಕೆಯಾಗುವುದಿಲ್ಲವೇ ಎನ್ನುವ ಧಾಟಿಯಲ್ಲಿ ಮಾತನಾಡುವುದು ಸಾಧುವಾದುದಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ನಮ್ಮ ಶಿವಮೊಗ್ಗಾ ಜಿಲ್ಲೆಯಲ್ಲಿ ಒಂದು ಸಹಕಾರಿ ಸಕ್ಕರೆ ಕಾರ್ಖಾನೆಗೆ ಅವಕಾಶ ಮಾಡಿಕೊಟ್ಟಿದ್ದರೆ, ನಮ್ಮ ಹಣಕಾಸಿನ ಸಚಿವರು ನಮ್ಮ ಶಿವಮೊಗ್ಗಾದ ಜನತೆ ಮತ್ತು ಅದರ ಪ್ರತಿನಿಧಿಗಳು ಕೇಳಿರುವುದು ನ್ಯಾಯವಾಗಿದೆ ಎಂದು ವಾದ ಮಾಡಿದ್ದರೆ ತಮಗೆ ನಾವು ಕೃತಜ್ಞತೆ ಸಲ್ಲಿಸುತ್ತಿದ್ದೆವು ನಿಜವಾಗಿಯೂ ನಿಮಗೆ ಮತ್ತು ಮುಖ್ಯ ಮಂತ್ರಿಗಳಿಗೆ ನಮ್ಮ ಬಗ್ಗೆ ಸಹಾನುಭೂತಿ ಇದ್ದರೆ ನಮ್ಮ ಶಿವಮೊಗ್ಗಾ ಜಿಲ್ಲೆಗೆ ಒಂದು ಸಹಕಾರಿ ಕ್ಷೇತ್ರದಲ್ಲಿ ಸಕ್ಕರೆ ಕಾರ್ಖಾನೆಯನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಚೆನ್ನಬಸಪ್ಪನವರು ಇಲ್ಲಿಯೇ ಇದ್ದಾರೆ. ಅವರು ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಓಡಾಡಿದ್ದಾರೆ, ವಾಗ್ದಾನ ಕೊಟ್ಟಿದ್ದಾರೆ. ಇಲ್ಲಿ ಕೂತು ಮಾತನಾಡುತ್ತಿದ್ದಾರೆ. ಇವರಾದರೂ ಕೂಡ ಶಿವಮೊಗ್ಗಾ ಬಗ್ಗೆ ಸಹಕಾರಿ ರಂಗದಲ್ಲಿ ಅಲ್ಲಿ ಸಕ್ಕರೆ ಕಾರ್ಖಾನೆ ಮಾಡತಕ್ಕಂಥ ಸಾಮರ್ಥ್ಯವಿಲ್ಲ ಎಂದರೆ ತಾವು ಒಬ್ಬ ಸ್ನೇಹಿತರು ಎಂದು ತಿಳಿದುಕೊಳ್ಳಬೇಕೇನ್ರಿ?

ಶ್ರೀ ಎಚ್. ಎಂ. ಚನ್ನಬಸಪ್ಪ — ಇವರು ಮಾತಿನ ಭರದಲ್ಲಿ ಏನೇನು ಬೇಕೋ ಅದನ್ನೆಲ್ಲಾ ಹೇಳುತ್ತಿದ್ದಾರೆ, ಬಹುಶಃ ಅದನ್ನೆಲ್ಲಾ ಪೇಪರಿನಲ್ಲಿ ಹಾಕಬಹುದು ಎನ್ನು ಅಭಿಪ್ರಾಯವೇನೋ?

ಶ್ರೀ ಕೋಣಂದೂರು ಲಿಂಗಪ್ಪ.— ಮಾನ್ಯ ಚನ್ನಬಸಪ್ಪನವರು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ಪೇಪರಿನಲ್ಲಿ ಹಾಕಬೇಕು ಎನ್ನುವ ಉದ್ದೇಶ ಒಂದೇ ಅಲ್ಲ .....

ಶ್ರೀ ಎಚ್. ಡಿ. ದೇವೇಗೌಡ.—ಆ ರೀತಿ ಆಸೆ ಇದ್ದರೆ ತಪ್ಪೇನೂ ಇಲ್ಲ' ಹಾಕ ಬೇಕಾದ್ದನ್ನು ನೀವು ಹೇಳಿದರೂ ಹಾಕುತ್ತಾರೆ ನಾವು ಹೇಳಿದರೂ ಹಾಕುತ್ತಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಬೆನ್ನು ಮೂಳೆ ಮುರಿದಿದೆ ಎಂದು ಹೇಳಿದರು, ಆ ರೀತಿ ಸುಳ್ಳು ಪಳ್ಳಂಗಳನ್ನೆಲ್ಲಾ ಏತಕ್ಕೆ ಹೇಳುತ್ತೀರಿ? ಗೌರವವಾಗಿ ಮಾತನಾಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಗೌರವ ಬೇಕು ಅಂತ ಹೇಳಿದರೆ, ಮಾನ್ಯ ಚನ್ನಬಸಪ್ಪನವರಿಗೆ, ಶಿವಮೊಗ್ಗ ಕ್ಷೇತ್ರದಲ್ಲಿ, ಗಂಡು ಮೆಟ್ಟಿದ ಭೂಮಿಯಲ್ಲಿ ಅನೇಕ ಸ್ನೇಹಿತರಿದ್ದಾರೆ. ಅವರಿಗೂ ಆ ಕ್ಷೇತ್ರದ ಪರಿಚಯವಿದೆ. ಅಂಥದರಲ್ಲಿ ಅವರು ಏತಕ್ಕೆ ಅಲ್ಲಿ ಒಂದು ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಮಾಡ ಬಾರದು?

ಶ್ರೀ ಎಚ್. ಎಂ. ಚನ್ನಬಸಪ್ಪ.— ಮಾಡೋಣ

ಶ್ರೀ ಕಾಗೋಡು ತಿಮ್ಮಪ್ಪ.— ಅದು ನಿಮ್ಮ ಸರ್ಕಾರದ ಮುಂದೆ ಇದೆ. ಎಷ್ಟು ದಿವಸಗಳಾದರೂ ಅದು ಇನ್ನೂ ತೀರ್ಮಾನವಾಗಿ ಬಂದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಏನಾದರೂ ತೊಂದರೆ ಇದ್ದರೆ ನಿವಾರಣೆ ಮಾಡೋಣ.

ಶ್ರೀ ಕಾಗೋಡು ತಿಮ್ಮಪ್ಪ.— ತೊಂದರೆ ಇದೆ. ಅದು ಒಬ್ಬ ಮಾನ್ಯ ಮುಖ್ಯ ಮಂತ್ರಿಗಳವರಿಂದ ಮಾನ್ಯ ಹಣಕಾಸಿನ ಮಂತ್ರಿಗಳವರಿಂದ, ಮತ್ತು ಒಬ್ಬ ಜಾಫರ್ ಸೈಫುಲ್ಲಾರವರಿಂದ. ಮಾನ್ಯ ಅಧ್ಯಕ್ಷರೇ ತಮ್ಮ ಮುಖಾಂತರ ಮಾನ್ಯ ಆರ್ಥಿಕ ಮಂತ್ರಿಗಳವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಹಣ ಕಾಸಿನ ಮಂತ್ರಿಗಳವರು ಆರ್ಥಿಕ ತಜ್ಞರೂ ಹೌದು ವ್ಯವಸಾಯದ ಬಗ್ಗೆ ಕಳಕಳಿಯನ್ನು ಇಟ್ಟುಕೊಂಡಿದ್ದಾರೆ ಹಾಗೂ ಮಾನ್ಯ ಶ್ರೀಮಾನ್ ಚನ್ನಬಸಪ್ಪನವರೂ ಕೂಡ ಇವತ್ತು ವ್ಯವಸಾಯಗಾರರ ಬಗ್ಗೆ ಮಾತನಾಡಿದರೆ ಅವರ ವಕಾಲತ್ತನ್ನು ಮೊದಲು ವಹಿಸುತ್ತೇನೆಂದು ಮೊದಲಿನಿಂದಲೂ ಹೇಳುತ್ತಲೇ ಬಂದಿದ್ದಾರೆ. ಇಂಥಾ ಜನರನ್ನು ಇಟ್ಟುಕೊಂಡು ಒಂದು ಸಣ್ಣ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಲಿಲ್ಲವೆಂದರೆ ಅದಕ್ಕೆ ಏನೆನ್ನಬೇಕು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀವು ಸಾಕಷ್ಟು ಪ್ರಯತ್ನ ನಡೆಸಿಲ್ಲವೆಂದು ಕಾಣಿಸುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.— ಸ್ವಾಮಿ, ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಸುಮಾರು ೧೦ ಸಾವಿರ ಎಕರೆ ಭೂಮಿಯಲ್ಲಿ ಕಬ್ಬನ್ನು ಬೆಳೆಯುತ್ತಿದ್ದಾರೆ. ಆ ರೀತಿ ಬೆಳೆದಂಥದ್ದೆಲ್ಲಾ ಸಕ್ಕರೆ ಕಂಪನಿಯವರೇ ತೆಗೆದುಕೊಂಡು ಹೋಗಿ ಮನಾಪಲಿ ಮಾಡಿಕೊಂಡು ಬಿಟ್ಟಿದ್ದಾರೆ. ಆದುದರಿಂದ ಇವತ್ತು ೬ ಸಾವಿರ ಎಕರೆಗೆ ಇಳಿದಿದೆ.

SRI H. M. CHANNABASAPPA.— It is the policy of the Government to encourage sugar factories on co-operative lines, wherever there is enough potentiality and quite understand that there is likelihood of a lot of potentiality in Shimoga District for various reasons, and it will be developed on phased programme. If for any reason it has been held up, we will try to locate the difficulties and we till try to push it trough.

ಶ್ರೀ ಕಾಗೋಡು ತಿಮ್ಮಪ್ಪ.— ಶ್ರೀಮಾನ್ ರುದ್ರಪ್ಪನವರ ಅಧ್ಯಕ್ಷತೆಯಲ್ಲಿ ಖಾಸಗಿ ಸಹಕಾರಿ ಕ್ಷೇತ್ರದಲ್ಲಿ ಮಾಡಬೇಕೆಂದು ಶೇರ್ ಸಂಗ್ರಹಣೆ ಮಾಡಿದ್ದಾರೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳವರು ಅಲ್ಲಿಗೆ ಹೋದಂಥ ಸಂದರ್ಭದಲ್ಲಿ ಅವರನ್ನು ಕರೆಸಿ ನೀವು ಮಾಡುವುದಕ್ಕೆ ಹೋಗಬೇಡಿ, ಸರ್ಕಾರ ಎಲ್ಲಾ ಸೇರಿ ಮಾಡೋಣವೆಂದು ಹೇಳಿ ಅದಕ್ಕೆ ಒಂದು ಬೋರ್ಡ್ ಆಫ್ ಡೈರೆಕ್ಟರನ್ನು ನೇಮಕ ಮಾಡಿದ್ದಾರೆ ಮತ್ತು ಆಡಿಷನಲ್ ಕಮಿಷನರ್‌ರವರು ಹಣ ಸಂಗ್ರಹಣೆ ಮಾಡಿ ೧೫ ಲಕ್ಷ ರೂಪಾಯಿಗಳವರೆಗೂ ಹಣವನ್ನು ಜಮಾವಣೆ ಮಾಡಿದ್ದಾರೆ ಇಂಥ ಸಂದರ್ಭದಲ್ಲಿ ಮಾನ್ಯ ಜಾಫರ್ ಸೈಫುಲ್ಲಾ ರವರು ಅದನ್ನು ಪುನರ್ ಪರಿಶೀಲನೆ ಮಾಡಲು ಬೇರೆ ಕಡೆಗೆ ಮಾಡಲು ಸಲಹೆ ಮಾಡಿದ್ದಾರೆ. ಅದು ಎಲ್ಲಿ ಎಂದರೆ ಪೇಪರ್ ಮಿಲ್‌ನಲ್ಲಿ ಬಾಯ್ಲರ್ ಇದೆ ಆದುದರಿಂದ ಅಲ್ಲಿ ಮಾಡೋಣವೆಂದು ಹೇಳಿದರೆ ಅದು ಎಷ್ಟರಮಟ್ಟಿನ ನ್ಯಾಯ ಸ್ವಾಮಿ ?

ಶ್ರೀ ಎಚ್. ಎಂ. ಚನ್ನಬಸಪ್ಪ —ಜಾಗ ಇಲ್ಲದೇ ಇರುವುದರಿಂದ ಬೇರೆ ಕಡೆಗೆ ಮಾಡಿ ಎಂದು ಹೇಳಿರಬಹುದು.

ಶ್ರೀ ಕಾಗೋಡು ತಿಮ್ಮಪ್ಪ,— ಸಹಕಾರ ಕ್ಷೇತ್ರದಲ್ಲಿ ಮಾಡುತ್ತೇವೆಂದು ಹೇಳಿ ಪೇಪರ್ ಮಿಲ್‌ನಲ್ಲಿ ಮಾಡುತ್ತೇವೆಂದು ಹೇಳಿದರೆ ಹೇಗೆ? ಸರ್ಕಾರದವರೇ ನೇರವಾಗಿ, ಸರ್ಕಾರದ ನೇತೃತ್ವದಲ್ಲಿ ಸಕ್ಕರೆ ಕಾರ್ಖಾನೆಯಾಗುವುದು ಅಗತ್ಯವಿದೆ. ಆದರಿಂದ ಆ ಕ್ಷೇತ್ರದಲ್ಲಿ ಕಬ್ಬನ್ನು ಬೆಳೆಯುವುದಕ್ಕೆ ವ್ಯವಸಾಯಗಾರರಿಗೆ ಅನುಕೂಲವಾಗುತ್ತದೆಂದು ಆದುದರಿಂದ ದಯವಿಟ್ಟು ಈ ಕೆಲಸವನ್ನು ಮಾಡಿಸಿಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ

ಇನ್ನು ತಾವು ಇವತ್ತು ಹೆಚ್ಚುವರಿ ಬೇಡಿಕೆಯಲ್ಲಿ ಇದಕ್ಕಾಗಿ ೫ ಲಕ್ಷದಿಂದ ೧೦ ಲಕ್ಷ ರೂಪಾಯಿಗಳ ವರೆಗೆ ಇಟ್ಟಿದೀರಿ ಅದನ್ನು ತಾವು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಒಂದು ವಿಷಯದ ಬಗ್ಗೆ ಮಾನ್ಯ ಹಣಕಾಸಿನ ಸಚಿವರು ದಯವಿಟ್ಟು ವಿಚಾರ ಮಾಡಬೇಕು. ನಮ್ಮ ಪರವಾಗಿ ವಕಾಲತ್ತು ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮುಂದಿನ ೪ ತಿಂಗಳ ಅವಧಿಗೆ, ಹೆಚ್ಚು ಹಣವನ್ನು ಖರ್ಚು ಮಾಡುವುದಕ್ಕೆ, ಒಟ್ ಆನ್ ಅಕೌಂಟ್ ಏನು ತಂದಿದ್ದೀರಿ, ಇದರಿಂದ ನಮಗೆ ಒಂದು ಅನುಮಾನ ಬರುತ್ತಿದೆ. ಅದು ಏನೆಂದರೆ ಇಷ್ಟು ವರ್ಷಗಳ ಕಾಲ ತಾವು ೩ ತಿಂಗಳಿಗಿಂತ ಹೆಚ್ಚು ಕಾಲ ಮಂಜೂರಾತಿಯನ್ನು ಪಡೆದಿರಲಿಲ್ಲ ಆದರೆ ಈ ಸಾರಿ ಮಾತ್ರ ೪ ತಿಂಗಳಿಗೆ ಹೆಚ್ಚಿನ ಬೇಡಿಕೆಯನ್ನು ಪಡೆಯುವುದಕ್ಕೆ ಹೊರಟ್ಟಿದ್ದೀರಿ. ಇದರಿಂದ ಒಂದು ಸಂಶಯ ಬರತಕ್ಕಂಥದ್ದು ಇದೆ. ಇದರ ಬಗ್ಗೆ ನಾನು ಇದಕ್ಕೆ ಮುಂಚೆ ಹೇಳಿದ್ದೇನೆ. ಚುನಾವಣೆ ಹಿಂದೆಯೂ ನಡೆದಿತ್ತು, ಈಗಲೂ ನಡೆಯಿತು ಆಗ ತಾವು ಅಧಿಕಾರಿಗಳನ್ನು ದುರುಪಯೋಗಪಡಿಸಿಕೊಂಡಿದ್ದೀರಿ, ನಾಳೆ ಶಾಸನ ಸಭೆಗೆ ಚುನಾವಣೆ ನಡೆಯುತ್ತದೆ, ಆದುದರಿಂದ ೪ ತಿಂಗಳಿಗೆ ಬೇಕಾದಂಥ ಹಣವನ್ನು ಮಂಜೂರಾತಿ ಪಡೆದರೆ, ಅದನ್ನು ನೀವು ಚುನಾವಣೆಯಲ್ಲಿ ಗೆಲ್ಲುವುದಕ್ಕೋಸ್ಕರ ಬಳಸಿ ನಮ್ಮ ಕರ್ನಾಟಕ ರಾಜ್ಯದ ಏಳಿಗೆಗೋಸ್ಕರ ಖರ್ಚು ಮಾಡುತ್ತೀರೋ ಇಲ್ಲವೋ ಎನ್ನುವ ಸಂಶಯ ಬಂದಿದೆ ಇಷ್ಟು ವರ್ಷಗಳಿಂದಲೂ ತಾವು ೩ ತಿಂಗಳಿಗೆ ಮಂಜೂರಾತಿಯನ್ನು ಪಡೆಯುತ್ತಿರುವ ಈಗ ಏಕಾ ಏಕಿ ೪ ತಿಂಗಳಿಗೆ ಹಣವನ್ನು ಮಂಜೂರು ಮಾಡಲು ಕೇಳುತ್ತಿದ್ದೀರಿ. ಇದರಲ್ಲಿ ಏನೋ ರಾಜಕೀಯವಾದ ಸಂಚು ಇದೆ ಎನ್ನತಕ್ಕಂಥ ಸದೇಹ ನಮಗೆ ಬರುತ್ತಿದೆ ಆದುದರಿಂದ ಅದು ಇವತ್ತು ಹೋಗಬೇಕು. ತಾವು ೪ ತಿಂಗಳಿಗ ಹಣ ಮಂಜೂರಾತಿ ಪಡೆದುಕೊಂಡು ಶಾಸನ ಸಭೆಯನ್ನು ಮುಂದುವರಿಸಿ, ಚುನಾವಣೆಯ ಸಿದ್ಧತೆಯ ಕೆಲಸಗಳನ್ನು ಮಾಡಲು ಹೋಗಬೇಡಿ, ಮಾನ್ಯ ಚನ್ನಬಸಪ್ಪನವರಿಗೆ ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ, ಇವತ್ತು ಅವರು ನಾನಾ ವಾತಾವರಣದಲ್ಲಿ ಬೆಳೆದು ಬಂದಂಥವರು ಅವರು ಅಧಿಕಾರ ಪಕ್ಷದಲ್ಲಿಯೂ ಇದ್ದಾರೆ, ವಿರೋಧ ಪಕ್ಷದಲ್ಲಿಯೂ ಇದ್ದ ಅನುಭವವಿದೆ. ಆದುದರಿಂದ ಚುನಾವಣೆ ನಡೆಯುವಂಥ ಸಂದರ್ಭದಲ್ಲಿ ಯಾರೂ ಅಧಿಕಾರದಲ್ಲಿರಬಾರದು. ಆದುದರಿಂದ ನೀವು ಮೊದಲು ಆ ಕೆಲಸವನ್ನು ಪ್ರಾರಂಭ ಮಾಡಿದರೆ ನಾವು ಅದನ್ನು ಮುಂದೆ ಅನುಸರಿಸುತ್ತೇವೆ. ಇನ್ನು ನಮ್ಮ ದೇಶದ ಪ್ರತಿಯೊಬ್ಬ ಮತದಾರರೂ ಕೂಡ ಮತದಾನ ಮಾಡುವುದಕ್ಕೆ ಬೇಕಾದಂಥ ಸೌಕರ್ಯ ಮಾಡುವುದಕ್ಕೆ ಇವತ್ತಿನವರೆಗೂ ಯಾವುದೇ ರೀತಿಯಲ್ಲಿ ಕೆಲಸ ಮಾಡಿಲ್ಲ. ಕಳೆದ ಚುನಾವಣೆಯಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡಿ ಹೆಚ್ಚಿನ ಬೇಡಿಕೆಯನ್ನು ಪುನಃ ಈಗಲೂ ಕೇಳಿದ್ದೀರಿ ಚುನಾವಣೆಗೆ ಬೇಕಾದಂಥ ಹೆಚ್ಚಿನ ಹಣವನ್ನು ಕೊಡಿ ಬೇಡವೆಂದು ಹೇಳುವುದಿಲ್ಲ. ಇವತ್ತು ಸ್ವಾತಂತ್ರ್ಯ ಬಂದು ೩೦ ವರ್ಷಗಳಾದ ಮೇಲೂ, ರಾಜ್ಯಾಂಗ ಬಂದ ಮೇಲೂ, ೬ನೇ ಲೋಕ ಸಭೆಯ ಚುನಾವಣೆಯ ವೈಖರಿಯನ್ನು ಅಥವಾ ಆಡಳಿತ ರೀತಿಯ ಬಗ್ಗೆ ಹೇಳುವುದಾದರೆ ಇವತ್ತು ಇವರಿಗೆ ಉತ್ತಮ ರೀತಿಯಲ್ಲಿ ಮತದಾರರ ಪಟ್ಟಿಯನ್ನು ಮಾಡತಕ್ಕಂಥ ಯೋಗ್ಯತೆ ಸರ್ಕಾರಕ್ಕೆ ಬಂದಿಲ್ಲ. ಪ್ರಜಾ ಪ್ರಭುತ್ವ ಆಡಳಿತೆಯಲ್ಲಿ ಯಾವ ರೀತಿ ಚುನಾವಣೆಯ ಪಟ್ಟಿಯನ್ನು ಮತದಾರರ ಪಟ್ಟಿಯನ್ನು ತಯಾರು ಮಾಡುತ್ತಾರೆ ಎನ್ನುವ ಬಗ್ಗೆ ಮಾನ್ಯ ಘೋರ್ಪಡೆಯವರು ಇಂಗ್ಲೆಂಡಿಗೆ ಹೋಗಿ ನೋಡಿಕೊಂಡು ಬಂದಿದ್ದಾರೆ. ಅವರಿಗೆ ನಾನೇನೂ ಹೇಳಬೇಕಾದ್ದು ಇಲ್ಲ ನಾನೇನು ಹೋಗಿ ನೋಡಿಕೊಂಡು ಬಂದಿಲ್ಲ. ಪತ್ರಿಕೆಗಳಲ್ಲಿ ಬಂದಿರುವುದನ್ನು ಓದಿ ತಿಳಿದುಕೊಂಡಿದ್ದೇನೆ. ಇವತ್ತು ಒಬ್ಬ ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗಿ ೮ ದಿವಸಗಳೇ ಆಗಿರಲಿ ಚುನಾವಣೆ ಏನಾದರೂ ಆ ಸಮಯದಲ್ಲಿ ನಡೆದರೆ ಅವನ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸುವಂಥಾ ವ್ಯವಸ್ಥೆ ಅಲ್ಲಿ ಇದೆ. ಅಷ್ಟು ವ್ಯವಸ್ಥಿತ ರೀತಿಯಲ್ಲಿ ಮತದಾರರ ಪಟ್ಟಿ ಅಲ್ಲಿ ಸಿದ್ಧವಾಗಿರುತ್ತದೆ.

ಶ್ರೀ ಟಿ. ಎಂ. ಮಂಜುನಾಥ.— ನಮ್ಮ ಊರಿನ ಕಾಂಗ್ರೆಸ್ ಅಧ್ಯಕ್ಷರ ಹೆಸರೇ ಮತದಾರರ ಪಟ್ಟಿಯಲ್ಲಿ ಇರಲಿಲ್ಲ ಬಿಟ್ಟು ಹೋಗಿತ್ತು. ಲೈನು ಲೈನೇ ಬಿಟ್ಟು ಬಿಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.— ಇವತ್ತಿನ ದಿವಸ ನಿಮಗೆ ಉತ್ತಮವಾಗಿ ಮತದಾರರ ಪಟ್ಟಿಯನ್ನು ತಯಾರು ಮಾಡುವುದಕ್ಕೆ ಆಗಿಲ್ಲವೆಂದು ಹೇಳಿದರೆ ಇನ್ನು ಏನನ್ನು ತಾವು ಸಾಧನೆ ಮಾಡುತ್ತೀರಿ ? ಅನೇಕ ಸಂದರ್ಭಗಳಲ್ಲಿ ಊರನ್ನೇ ಬಿಟ್ಟು ಹೋದವರ ಹೆಸರು, ಸತ್ತವರ ಹೆಸರೂ ಕೂಡ ಆ ಪಟ್ಟಿಯಲ್ಲಿ ಇತ್ತು. ಮತದಾರರ ಪಟ್ಟಿಯನ್ನು ರೆಕ್ಟಿಫಿಕೇಷನ್ ಮಾಡದೇ ಚುನಾವಣೆಯನ್ನು ಘೋಷಣೆ ಮಾಡಿದರು. ರೇಡಿಯೋದಲ್ಲಿ, ಮತ್ತು ಪತ್ರಿಕೆಗಳಲ್ಲಿ ಫೆಬ್ರುವರಿ ೭ನೇ ತಾರೀಕು ಕೊನೆ ದಿನಾಂಕದಂದು ಘೋಷಣೆ ಮಾಡಿದರು. ಯಾರೋ ಒಬ್ಬಿಬ್ಬರ ಹೆಸರನ್ನು ಕೊನೆಯಲ್ಲಿ ಸೇರಿಸಬಹುದು. ಸಾವಿರಾರು ಜನರ ಹೆಸರು ಮತದಾರರ ಪಟ್ಟಿಯಲ್ಲಿ ಬಿಟ್ಟು ಹೋಗಿದೆ.

ಶ್ರೀ ಕೊಣಂದೂರು ಲಿಂಗಪ್ಪ.— ಫೆಬ್ರುವರಿ ೭ನೇ ತಾರೀಖು ಹೆಸರುಗಳನ್ನು ಸೇರಿಸಲು ಕೊನೆಯ ದಿವಸವಾಗಿದ್ದು ಅವತ್ತು ಕೊಟ್ಟವರ ಹೆಸರುಗಳೂ ಕೂಡ ಪ್ರಿಂಟ್ ಆಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.— ಶ್ರೀಮಾನ್ ಬದರೀನಾರಾಯಣರವರ ಹೆಸರು ಶಿವಮೊಗ್ಗ ಮತದಾದಾರರ ಪಟ್ಟಿಯಲ್ಲಿಯೂ ಇಲ್ಲ, ಬೆಂಗಳೂರು ಮತದಾರರ ಹೆಸರಿನಲ್ಲಿಯೂ ಇಲ್ಲ. ಅಲ್ಲಿ ನಾಮಪತ್ರ ಕೊಡುವ ಸಂದರ್ಭದಲ್ಲಿ ನೋಡುತ್ತಾರೆ, ಅವರ ಹೆಸರೇ ಇಲ್ಲ. ಆಮೇಲೆ ಹೆಸರು ಸೇರಿಸಿ ಎಂದು ತಕರಾರಾಯಿತು. ನಂತರ ಜಿಲ್ಲಾಧಿಕಾರಿಗಳು ನೇರವಾಗಿ ಅವರ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಿದ ಮೇಲೆ, ಅವರ ನಾಮಪತ್ರವನ್ನು ಒಪ್ಪಿಕೊಂಡರು. ಹಾಗೇಯೇ ಶ್ರೀ ಎಚ್. ವಿ. ಕಾಮತ್ ಅವರ ಅವರ ಹೆಸರೂ ಸಹ ಮತದಾರರ ಪಟ್ಟಿಯಲ್ಲಿ ಇರಲಿಲ್ಲ. ಸರ್ಕಾರದ ಒಬ್ಬ ಮಂತ್ರಿಯಾಗಿ, ಆ ಕ್ಷೇತ್ರದ ಒಬ್ಬ ಶಾಸಕನಾಗಿರುವ ಮನುಷ್ಯನ ಹೆಸರೇ ಈ ಮತದಾರರ ಪಟ್ಟಿಯಿಂದ ಕೈ ಬಿಟ್ಟುಹೋಗಿದ್ದರೆ, ಇನ್ನು ಸಾಮಾನ್ಯ ಜನರ ಹೆಸರುಗಳು ಎಷ್ಟು ಪ್ರಮಾಣದಲ್ಲಿ ಬಿಟ್ಟು ಹೋಗಿವೆ ಎಂಬುದನ್ನು ತಾವೆ ಯೋಚನೆ ಮಾಡಿ. ಆದುದರಿಂದ, ದಯವಿಟ್ಟು ಈ ಅನುಭವದ ಆಧಾರ ಮೇಲೆ ಒಂದು ಒಳ್ಳೆಯ ಮತದಾರರ ಪಟ್ಟಿಯನ್ನು ಈಗಿನಿಂದಲೇ ಸಿದ್ಧ ಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳಿ, ಏನೋ ಚುನಾವಣೆ ಬಂತು, ಈಗ ಪ್ರಾರಂಭ ಮಾಡುವುದು ಚುನಾವಣೆ ಮುಗಿದ ಮೇಲೆ ಕೈಬಿಡುವುದು – ಆ ರೀತಿ ಮಾಡಬೇಡಿ. ಇದನ್ನು ಒಂದು ರೀತಿಯ ಖಾಯಂ ವ್ಯವಸ್ಥೆಯನ್ನಾಗಿ ಮಾಡಿ. ಪ್ರತಿಯೊಂದು ತಾಲ್ಲೂಕು ಕಚೇರಿಯಲ್ಲೂ ಮತದಾರರ ಪಟ್ಟಿಗೋಸ್ಕರವಾಗಿಯೇ ನಿಗಾ ವಹಿಸತಕ್ಕ ಒಬ್ಬ ಗುಮಾಸ್ತನನ್ನೋ ಅಥವಾ ಒಂದು ಪ್ರತ್ಯೇಕ ವಿಭಾಗವನ್ನು ಮಾಡಿ ಇಲ್ಲಿಯವರೆಗೂ ತಾರ್ತುಪರಿಸ್ಥಿ ಇದ್ದುದರಿಂದ, ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನೇ ನಡೆಸಲಿಲ್ಲ.

2–30 P. M.

ಇನ್ನು ಗ್ರಾಮ ಪಂಚಾಯಿತಿಗಳಿಗೆ, ತಾಲ್ಲೂಕು ಮಂಡಲಗಳಿಗೆ ಮತ್ತು ನಗರಸಭೆ ಹಾಗೂ ಮುನಿಸಿಪಾಲಿಟಿಗಳಿಗೆ ಚುನಾವಣೆ ಮಾಡುವ ವಿಚಾರವನ್ನು ನಮ್ಮ ಘೋಷ್ಪಡೆಯವರಿನ್ನೂ ಹೇಳಿಲ್ಲ. ಇವುಗಳಿಗೆಲ್ಲಾ ಚುನಾವಣೆಗಳನ್ನು ಮಾಡುವುದಾದರೆ, ಮಳೆಗಾಲ ಬರುವುದರೊಳಗಾಗಿ ಮಾಡಬೇಕು. ಆದರೆ, ಅಲ್ಲಿ ಚುನಾವಣೆಗಳಿಗಾಗಿ ಹಣವಿಟ್ಟಿರುವುದನ್ನು ನೋಡಿದರೆ, ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ಮಾಡುವುದಿಲ್ಲ ಎಂದು ಕಂಡುಬರುತ್ತದೆ. ದಯವಿಟ್ಟು, ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ತಕ್ಷಣವೇ ಮಾಡಿ. ಇಲ್ಲದಿದ್ದರೆ, ನಮ್ಮ ಈ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮರ್ಯಾದೆ ಮತ್ತು ಗೌರವ ಬರುವುದಿಲ್ಲ. ಈ ಚುನಾವಣೆಗಳನ್ನು ನಡೆಸುವ ದೃಷ್ಟಿಯಿಂದ ಹೆಚ್ಚು ಹಣವನ್ನು ಕೂಡಲೆ ಒದಗಿಸಬೇಕು. ಜೊತೆಗೆ, ಮತಗಟ್ಟೆಗಳು ಮತ ನೀಡುವವರಿಗೆ ಅನುಕೂಲವಾಗುವಂತೆ ಮತ್ತು ಹತ್ತಿರವಿರುವಂತೆ ಏರ್ಪಡಿಸಬೇಕು. ಈಗ ಇರುವ ಪದ್ಧತಿಯಂತೆ, ಒಟ್ಟು ಕ್ಷೇತ್ರದ ಮತದಾರರ ಸಂಖ್ಯೆಯನ್ನಿಟ್ಟುಕೊಂಡು, ಒಂದು ಮತಗಟ್ಟೆಗೆ ೮೦೦ ೯೦೦ ಮತದಾರರು ಬರುವಂತೆ ಗುಣಾಕಾರ, ಭಾಗಾಕಾರ ಹಾಕಿ ಗೊತ್ತುಪಡಿಸುತ್ತಾರೆ ಎಂದು ಕೇಳಿದ್ದೇನೆ ಇದು ಸಾಧುವಾದುದಲ್ಲ. ಒಂದು ಗ್ರಾಮ ಪಂಚಾಯಿತಿಗೆ ಸೇರಿದ ಊರುಗಳು ಸಾಮಾನ್ಯವಾಗಿ ದೂರ ದೂರದಲ್ಲಿ ಹಂಚಿ ಹೋಗಿರುತ್ತವೆ. ಆದುದರಿಂದ ಕನಿಷ್ಟ ಒಂದು ಮೈಲಿ ಅಂತರದಲ್ಲಿ ಮತಗಟ್ಟೆಯಿರುವ ವ್ಯವಸ್ಥೆಯಾಗಿರಬೇಕು. ಎಷ್ಟು ಹಣ ಖರ್ಚಾದರೂ ಚಿಂತೆಯಿಲ್ಲ, ಆದರೆ, ಮತದಾರರಿಗೆ ತೊಂದರೆಯಾಗಬಾರದು. ಒಂದು ಗ್ರಾಮದಲ್ಲಿ ಎರಡು ಮತಗಟ್ಟೆಗಳನಿಟ್ಟರೂ ಚಿಂತೆಯಿಲ್ಲ ಹೀಗೆ ಮತಗಟ್ಟೆಗಳಿಗನುಸಾರವಾಗಿ, ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಒಂದು ಗ್ರಾಮದಲ್ಲಿ ಎರಡು ಮತಗಟ್ಟೆಗಳಿಟ್ಟ ಸಂದರ್ಭದಲ್ಲಿ ಪಾರ್ಟ್ ಒಂದು ಮತ್ತು ಪಾರ್ಟ್ ಎರಡು ಎಂದು

ಮಾಡಿ ಮತದಾರರ ಪಟ್ಟಿಯನ್ನು ಸಿದ್ಧಪಡಿಸಿದರೆ ಇನ್ನೂ ಉತ್ತಮವಿರುತ್ತದೆ. ಆದರೆ, ಈಗಿರುವ ಪದ್ಧತಿಯಲ್ಲಿ ಅನೇಕ ಕಡೆಗಳಲ್ಲಿ ಜನರು ಮತದಾನ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಪಟ್ಟಣಗಳಲ್ಲೇನೋ ವಾಹನ, ಕಾರು ವೃಗರೆಗಳನ್ನು ಉಪಯೋಗಿಸಬಹುದು. ಆದರೆ, ಮಲೆನಾಡು ಪ್ರದೇಶಗಳಲ್ಲಿರುವ ಹೋಬಳಿಗಳಲ್ಲಿ ಹುಡುಕಿದರೂ ನಾಲ್ಕು ಗಾಡಿ ಸಿಗುವುದಿಲ್ಲ, ಗುಡ್ಡ ಹತ್ತಿ ಇಳಿಯಬೇಕಾಗಿರುವುದರಿಂದ ಯಾರೂ ಅಲ್ಲಿ ಗಾಡಿ ಇಟ್ಟುಕೊಂಡಿರುವುದಿಲ್ಲ. ಇದನೆಲ್ಲಾ ಮಾನ್ಯ ಹಣಕಾಸಿನ ಸಚಿವರಿಗೆ ನೋಡಿಸೋಣ ಎಂದರೆ, ಅವರು ಅಲ್ಲಿಗೆ ಬರುವುದಿಲ್ಲ ಮೊನ್ನೆ ಶಿವಮೊಗ್ಗಕ್ಕೆ ಬಂದಿದ್ದವರು, ಜ್ವರ ಬಂದಿದೆ ಎಂದು ವಾಪಸ್ಸು ಹಾಗೆಯೇ ಹೊರಟು ಹೋದರು. ಅಂಥಾ ಪ್ರದೇಶಗಳಲ್ಲಿ ಈಗಿರುವ ಪದ್ಧತಿಯಂತೆ ಮತದಾನ ಯಾವ ರೀತಿ ನಡೆಯುತ್ತನೆ? ಆದುದರಿಂದ ಮುಂದಿನ ನಾಲ್ಕು ತಿಂಗಳ ಅವಧಿಗೆ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡಬೇಕು. ಚುನಾವಣೆ ಭರಾಟೆಯಲ್ಲಿ, ಮತವನ್ನು ಪಡೆಯುವ ಗಲಾಟೆಯಲ್ಲಿ, ಯಾರು ಯಾದು ಏನೇನು ಕೇಳಿದರೂ ಅವೆಲ್ಲಕ್ಕೂ ಮಂಜೂರಾತಿ ಕೊಟ್ಟು, ಬಡವರಿಗೆ ಬೇಗೆ ಇಟ್ಟಿದ್ದೀರಲ್ಲ, ಹಾಗೆ ಮಾಡದೆ ಮತ್ತು ಮುಂದಿನ ಚುನಾವಣೆಗೆ ಮತದಾರರ ಬಲವನ್ನು ಉಳಿಸಿಕೊಳ್ಳುವುದಕ್ಕೆ ಖಂಡಿತವಾಗಿ ಈ ಹಣವನ್ನು ಖರ್ಚು ಮಾಡದೆ, ನಿಜವಾಗಿ ಪ್ರಾಮಾಣಿಕವಾಗಿ ಮತ್ತು ನ್ಯಾಯವಾಗಿ ಖರ್ಚು ಮಾಡಿ. ಹೀಗೆಯೇ ನಾವು ನಮ್ಮ ರಾಜ್ಯದಲ್ಲಿ ಒಂದು ಉತ್ತಮ ವ್ಯವಸ್ಥೆಯನ್ನು ನೋಡೋಣ, ಅದರ ಯಶಸ್ವಿಯಲ್ಲಿ ನಾವೆಲ್ಲರೂ ಸಮ ಭಾಗಿಯಾಗೋಣ ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಂ ರುದ್ರಪ್ಪ (ಸಕಲೇಶಪುರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಮಂಡಿಸಿರುವ ಹೆಚ್ಚುವರಿ ಬೇಡಿಕೆಯನ್ನು ನಾನು ವಿರೋಧಿಸುತ್ತೇನೆ. ಕಾರಣವೇನೆಂದರೆ, ನಮ್ಮ ರಾಜ್ಯದ ಬೊಕ್ಕಸದಲ್ಲಿ ಹೆಚ್ಚು ಹಣ ಖರ್ಚಾಗುತ್ತಿದೆಯೇ ಹೊರತು, ಅಭಿವೃದ್ಧಿ ಕಾರ್ಯಗಳಲ್ಲಿ ಯಾವ ಸಾಧನೆಯನ್ನು ಕಾಣುತ್ತಿಲ್ಲ ಸರ್ಕಾರದಲ್ಲಿ ದಕ್ಷತೆಯಾಗಲಿ ಮಿತವ್ಯಯವಾಗಲಿ ಕಂಡುಬರುತ್ತಿಲ್ಲ. ದಕ್ಷತೆ ಮತ್ತು ಮಿತವ್ಯಯವನ್ನು ಅವರು ಅನುಸರಿಸಿಕೊಂಡು ಬಂದಿದ್ದರೆ ಈ ಹೆಚ್ಚುವರಿ ಬೇಡಿಕೆಯನ್ನು ಅವರು ಮಂಡಿಸುವ ಕಾರಣವೇ ಇರುತ್ತಿರಲಿಲ್ಲ. ಉದಾಹರಣೆಗೆ ಹೇಳಬೇಕೆಂದರೆ, ಲೋಕೋಪಯೋಗಿ ಇಲಾಖೆಯಲ್ಲಿ ಅನೇಕ ದೊಡ್ಡ ದೊಡ್ಡ ಹುದ್ದೆಗಳನ್ನು ನಿರ್ಮಾಣ ಮಾಡಿದ್ದಾರೆ. ನಮ್ಮ ಕರ್ನಾಟಕದಲ್ಲಿ ಸುಮಾರು ಇಪ್ಪತ್ತಾರು ಚೀಫ್ ಇಂಜಿನಿಯರ್ ಹುದ್ದೆಗಳನ್ನು ನಿರ್ಮಾಣ ಮಾಡಿದ್ದಾರೆ. ನಮಗೆ ಗೊತ್ತಿರುವಂತೆ, ಆಂಧ್ರ ಅಥವಾ ತಮಿಳುನಾಡು ಅಥವಾ ಭಾರತದ ಇತರ ರಾಜ್ಯಗಳಲ್ಲಿ ಇಷ್ಟು ಪ್ರಮಾಣದಲ್ಲಿ ದೊಡ್ಡ ದೊಡ್ಡ ಹುದ್ದೆಗಳನ್ನು ನಿರ್ಮಾಣ ಮಾಡಿಲ್ಲ ಎಂದು ತಿಳಿದುಬರುತ್ತದೆ. ಕೆಲವರಿಗೆ ದೊಡ್ಡ ದೊಡ್ಡ ಅಧಿಕಾರವನ್ನು ಕೊಡಬೇಕೆನ್ನುವ ಉದ್ದೇಶದಿಂದ ಇಂಥಾ ಹುದ್ದೆಗಳನ್ನು ನಿರ್ಮಾಣ ಮಾಡುತ್ತಿದ್ದಾರೆಯೇ ಹೊರತು. ಅವರಿಗೆ ಸಾಕಷ್ಟು ಕೆಲಸವಿದೆಯೇ ಇಲ್ಲವೇ ಎಂಬುದನ್ನು ನೋಡಿ ನಿರ್ಮಾಣ ಮಾಡುತ್ತಿಲ್ಲ. ಇದರಿಂದ ಸರ್ಕಾರದಲ್ಲಿ ಬಹಳ ದುಂದುವೆಚ್ಚಕ್ಕೆ ಅವಕಾಶವಾಗಿದೆ. ಅದೇ ರೀತಿ, ಕರ್ನಾಟಕ ಲೋಕ ಸೇವಾ ಆಯೋಗದಲ್ಲಿ ಏಳು ಜನ ಸದಸ್ಯರನ್ನು ನೇಮಕ ಮಾಡಿದ್ದಾರೆ. ಆದರೆ, ನಮ್ಮ ಕರ್ನಾಟಕಕ್ಕಿಂತ ದೊಡ್ಡ ದೊಡ್ಡ ರಾಜ್ಯಗಳಲ್ಲಿ ಕೇವಲ ಐದು ಜನರು ಮಾತ್ರ ಇದ್ದಾರೆ. ಹಾಗೆಯೇ, ಅರಣ್ಯ ಇಲಾಖೆಯಲ್ಲಿ ಚೀಫ್ ಕನ್ಸರ್ವೇಟರ್ ಆಫ್ ಫಾರೆಸ್ಟ್ ಮತ್ತು ಐ. ಜಿ ಪಿ. ಕಛೇರಿಯಲ್ಲಿ ದೊಡ್ಡ ದೊಡ್ಡ ಹುದ್ದೆಗಳನ್ನು ನಿರ್ಮಾಣ ಮಾಡಿ ಸರ್ಕಾರದ ಬೊಕ್ಕಸದಿಂದ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಇದರಿಂದ, ಸರ್ಕಾರದಲ್ಲಿ ಅದಕ್ಷತೆ ಜಾಸ್ತಿಯಾಗಿದೆಯೇ ಹೊರತು, ಜನಸಾಮಾನ್ಯರಿಗೆ ಏನೂ ಪ್ರಯೋಜನವಾದಂತಿಲ್ಲ.

ಮಂತ್ರಿಗಳಿಗೆ ಮತ್ತು ರಾಜ್ಯಪಾಲರ ಸಿಬ್ಬಂದಿಗೆ ಹೆಚ್ಚು ಹಣ ಕೇಳಿದ್ದಾರೆ. ಈಗ ಕೇಂದ್ರದಲ್ಲಿ ಹೊಸ ಮಂತ್ರಿಮಂಡಲ ಬಂದಿದೆ, ಅಲ್ಲಿನ ಮಂತ್ರಿಗಳ ಮನೆ ಇಷ್ಟೇ ಅಗಲವಿರಬೇಕು; ನೀರು ಮತ್ತು ವಿದ್ಯುಚ್ಛಕ್ತಿಯನ್ನು ಇಷ್ಟೇ ಉಪಯೋಗಿಸಬೇಕೆಂದು ಮಾಡಿದ್ದಾರೆ. ಆದರೆ, ನಮ್ಮ ರಾಜ್ಯದಲ್ಲಿರುವ ಸಚಿವರುಗಳು ಬಹಳ ಆಡಂಬರದಿಂದಿದ್ದಾರೆ ಎಂದರೆ ಉತ್ಪ್ರೇಕ್ಷೆಯಿಲ್ಲ ನಾನು ಕೇಂದ್ರ ಸಚಿವರ ಮನೆಗಳನ್ನು ನೋಡಿದ್ದೇನೆ. ಅವೆಲ್ಲಕ್ಕಿಂತಲೂ, ಹೆಚ್ಚು ಆಡಂಬರವಾದ ಮನೆಗಳನ್ನು ಕರ್ನಾಟಕದಲ್ಲಿ ಕಾಣಬಹುದು. ಅಲ್ಲದೆ, ನಮ್ಮ ರಾಜ್ಯದ ಮಂತ್ರಿ ಮಂಡಲಕ್ಕೆ ಮೂವತ್ತು ಜನ ಸದಸ್ಯರ ಮಂತ್ರಿ ಮಂಡಲ ಬೇಕಾಗಿರಲಿಲ್ಲ. ಗೊರ್ವಾಲರ ವರದಿ ಪ್ರಕಾರ 20 ಜನ ಸದಸ್ಯರ ಮಂತ್ರಿ ಮಂಡಲವೇ ಸಾಕಾಗಿತ್ತು. ಇಲ್ಲಿ ಆಡಳಿತ ಅಟ್ಟಹಾಸಕ್ಕೆ ಮತ್ತು ಆಡಂಬರಕ್ಕೆ ಹೆಚ್ಚು ಹಣ ಖರ್ಚು ಮಾಡುತ್ತಿದ್ದಾರೆ. ಅದೇ ರೀತಿ ರಾಜ್ಯಪಾಲರ ಸಿಬ್ಬಂದಿಗೂ ಬಹಳ ಖರ್ಚಾಗುತ್ತಿದೆ ಎಂದರೆ, ಅದು ಉತ್ಪ್ರೇಕ್ಷೆಯಲ್ಲ.

ಈಗ ಸರ್ಕಾರದವರು ದಕ್ಷತೆ ವಹಿಸಿ ಸಕಾಲದಲ್ಲಿ ಕೆಲಸಗಳನ್ನು ಮಾಡಿದ್ದರೆ ದುಂದು ವೆಚ್ಚ ಅಷ್ಟಾಗಿ ಇರುತ್ತಿರಲಿಲ್ಲ. ಉದಾಹರಣೆಗೆ ಹೇಳುವುದಾದರೆ, ಇಂಜಿನಿಯರಿಂಗ್ ಇಲಾಖೆಯಲ್ಲಿ ಅನೇಕ ಎಸ್ಟಿಮೇಟು ಗಳನ್ನು ತಯಾರು ಮಾಡುತ್ತಾರೆ. ಆದರೆ, ಅದು ಆ ಕೂಡಲೇ ಕಾರ್ಯಗತವಾಗುವುದಿಲ್ಲ. ಆಗ ಪುನಃ ಇನ್ನೊಂದು ಅಂದಾಜನ್ನು ತಯಾರು ಮಾಡುತ್ತಾರೆ. ಇದರಿಂದಾಗಿ, ಸರ್ಕಾರಕ್ಕೆ ಹೆಚ್ಚು ಖರ್ಚು ಬೀಳುತ್ತದೆ. ಹಳ್ಳಿಗಾಡುಗಳ ಕಡೆ ಕುಡಿಯುವ ನೀರಿನ ಸೌಕರ್ಯವನ್ನು ಕೊಡುವುದಕ್ಕೋಸ್ಕರ ಒಂದು ಯೋಜನೆಯಿದೆ. ಈ ಯೋಜನೆಯಲ್ಲಿ ಒಂದು ಎಸ್ಟಿಮೇಟ್ ತಯಾರಿಸಿದರೂ, ಆ ಕೂಡಲೇ ಅದು ಕಾರ್ಯಗತವಾಗುವುದಿಲ್ಲ ಅನಂತರ ಒಂದು ರಿವೈಸ್ಡ್ ಎಸ್ಟಿಮೇಟನ್ನು ತಯಾರಿಸುತ್ತಾರೆ. ಆಮೇಲೆ ಹಣ ಕೊಡಿ ಎಂದು ಗ್ರಾಮ ಪಂಚಾಯತಿಯವರಿಗೆ ನೋಟೀಸು ಕೊಡುತ್ತಾರೆ. ಸರ್ಕಾರ ಇವತ್ತು ಇಷ್ಟು ಹೆಚ್ಚುವರಿ ಸಿಬ್ಬಂದಿ ಇಟ್ಟುಕೊಂಡಿದ್ದರೂ, ಕೆಲಸವನ್ನು ಆಗಿಂದಾಗ್ಗೆ ಕಾರ್ಯಗತ ಮಾಡುವುದಕ್ಕೆ ಆಗುತ್ತಾ ಇಲ್ಲ. ಕಾಲಕಾಲಕ್ಕೆ ಯೋಜನೆಗೆ ಉಪಯೋಗಿಸುವ ವಸ್ತುಗಳ ಬೆಲೆ ಜಾಸ್ತಿಯಾಗಿ, ಆಗಲೂ ಕೂಡ ಸರ್ಕಾರಕ್ಕೆ ಹೆಚ್ಚು ಖರ್ಚು ಬೀಳುತ್ತದೆ. ಉದಾಹರಣೆಗೆ, ಹೇಮಾವತಿ ಯೋಜನೆ ಪ್ರಾರಂಭ ವಾದಾಗ, ಸುಮಾರು ಹದಿನಾರು ಕೋಟಿ ರೂಪಾಯಿಗಳು ಸಾಕು ಎಂದು ಅಂದಾಜು ಮಾಡಲಾಗಿತ್ತು, ಆದರೆ, ಈಗ ಅದರ ಅಂದಾಜು ವೆಚ್ಚ ೧೬ ಕೋಟಿಗೂ ಏರಿದೆ ಈ ಯೋಜನೆಗೆ ವರ್ಷಕ್ಕೆ ೩-೪ ಕೋಟಿ ರೂಪಾಯಿಗಳನ್ನು ಕೊಡುತ್ತಾರೆ. ಅದೂ ಕೂಡ ಸರಿಯಾದ ರೀತಿಯಲ್ಲಿ ಖರ್ಚಾಗುವುದಿಲ್ಲ. ಇದರಲ್ಲಿ ಅನೇಕ ಲೋಪದೋಷಗಳಿವೆ. ವಿರೋಧಪಕ್ಷದ ನಾಯಕರಾದ ಶ್ರೀ ಎಚ್. ಡಿ. ದೇವೇಗೌಡರಿಗೆ ಇದು ಚೆನ್ನಾಗಿ ಗೊತ್ತಿದೆ. ಹೀಗೆ ಯೋಜನೆ ಕಾರ್ಯಗತವಾಗುವುದು ವಿಳಂಬವಾದಾಗ, ಪುನಃ ಅಂದಾಜು ವೆಚ್ಚ ಜಾಸ್ತಿಯಾಗಿ, ಸರ್ಕಾರಕ್ಕೆ ಹೆಚ್ಚು ಖರ್ಚು ಬೀಳುತ್ತದೆ. ಈ ಹಣವನ್ನು ತುಂಬಲು ಸರ್ಕಾರದವರು ಬಡ ರೈತರ ಮೇಲೆ ಹೊಸ ತೆರಿಗೆಗಳನ್ನು ಹಾಕುತ್ತಿದ್ದಾರೆ.

ಇನ್ನು ರೈತರ ಅನಾನುಕೂಲತೆಗಳು ಬೇಕಾದಷ್ಟು ಇವೆ. ಒಬ್ಬ ರೈತ ಒಂದು ಗಾಡಿ ಸೌದೆಯನ್ನು ತನ್ನ ಮರದಿಂದಲೇ ಕಡಿದುಕೊಂಡು ಹೋಗುವುದು ಬಹಳ ಕಷ್ಟವಿದೆ. ಅರಣ್ಯ ಇಲಾಖೆಯವರು ಅವನನ್ನು ಹಿಡಿಯುತ್ತಾರೆ. ಆದರೆ, ಕೇರಳ ದೇಶಕ್ಕೆ ಕಳ ಸಾಗಾಣಿಕೆಯಲ್ಲಿ ಹೋಗುವ ಅರಣ್ಯ ಸಂಪತ್ತನ್ನು ನೋಡಿದರೆ, ಎಂಥವರಿಗೂ ದುಃಖವಾಗುತ್ತದೆ. ಅದರಲ್ಲೂ ವೈಶಿಷ್ಟ್ಯ ಪಡೆದ ಕರ್ನಾಟಕ ಗಂಧದ ಮರ ಕೇರಳ ದೇಶಕ್ಕೆ ಕಳ್ಳಸಾಗಾಣಿಕೆಯಲ್ಲಿ ಹೋಗುತ್ತಿರುವುದನ್ನು ನೋಡಿದರೆ, ಎಂತಹವರೂ ಸಹ ತಲೆತಗ್ಗಿಸಬೇಕಾಗುತ್ತದೆ. ಇದಕ್ಕೆ ಒಂದು ವಿಜಿಲೆನ್ಸ್ ಕಮಿಷನ್ ಇದೆ ಎಂದು ಕೇಳಿದ್ದೇನೆ, ಅವರು ಏನು ಕೆಲಸ ಮಾಡುತ್ತಿದ್ದಾರೋ ಗೊತ್ತಿಲ್ಲ. ಸಣ್ಣಪುಟ್ಟ ರೈತರಿಗೆ ಕಿರುಕುಳ ಕೊಡುತ್ತಿದ್ದು ದೊಡ್ಡ ದೊಡ್ಡ ಸ್ಮಗಲರ್ ಬಗ್ಗೆ ಏನು ಕ್ರಮ ತೆಗೆದುಕೊಳ್ಳದೇ ಇದ್ದಾರೆ,

ಇನ್‌ಫರ್‌ಮೇಷನ್ ಮತ್ತು ಪಬ್ಲಿಸಿಟಿ ಇಲಾಖೆಗೆ ಹೆಚ್ಚುವರಿ ಬೇಡಿಕೆ ಕೇಳಿರುವುದು ನ್ಯಾಯವಲ್ಲ. ಏಕೆಂದರೆ ಜನಗಳಿಗೆ ರಾಷ್ಟ್ರದಲ್ಲಿ ಅಭಿವೃದ್ಧಿಯ ಕೆಲಸಗಳು ಹೇಗೆ ಆಗುತ್ತದೆ ಎಂಬುದು ಗೊತ್ತಾಗುತ್ತದೆ. ಪಬ್ಲಿಸಿಟಿಯಿಂದ ಹೊರಗಿನವರನ್ನು ಕರೆಸಿಕೊಂಡು ಆತಿಥ್ಯವನ್ನು ಮಾಡಿ ಸಾಧನೆ ಮಾಡುವುದು ಅಲ್ಲ. ಕರ್ನಾಟಕ ರಾಜ್ಯದಲ್ಲಿ ಈ ಇಲಾಖೆಗೆ ಹೆಚ್ಚುವರಿ ಬೇಡಿಕೆ ಇಟ್ಟಿರುವುದು ಸರ್ವದಾ ಒಳ್ಳೆಯದಲ್ಲ. ಆ ರೀತಿ ಒಳ್ಳೆಯ ಕೆಲಸ ಮಾಡಿದ್ದರೆ ಜನಗಳಿಗೆ ಗೊತ್ತಾಗುತ್ತದೆ. ಪತ್ರಿಕೆಗಳು ಇದ್ದೇ ಇರುವುದರಿಂದ ನಿಜಾಂಶವನ್ನು ತಿಳಿಸುವುದಕ್ಕೆ ಹಿಂದೆಮುಂದೆ ನೋಡುವುದಿಲ್ಲ. ಸರ್ಕಾರದ ವತಿಯಿಂದ ಇಂಥ ಆಡಂಬರದ ಪಬ್ಲಿಸಿಟಿ ಬೇಕಾಗಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಸಹಕಾರ ಇಲಾಖೆಯ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಮೂಗಿಗಿಂತ ಮೂಗುತಿ ಭಾರ ಎನ್ನುವ ಹಾಗೆ ಈ ಇಲಾಖೆಯಲ್ಲಿ ನೌಕರ ವರ್ಗ ಜಾಸ್ತಿ ಇದ್ದು ಕೆಲಸ ಮಾತ್ರ ಕಡಿಮೆ ಇದೆ. ಈ ಇಲಾಖೆಯವರು ಜನಗಳಿಗೆ ಕೊಡತಕ್ಕ ಕಿರುಕುಳ ವಿಪರೀತವಾಗಿದೆ. ಜನಗಳು ಈ ಇಲಾಖೆಯಿಂದ ಯಾವ ಮಟ್ಟದಲ್ಲಿ ಒಳ್ಳೆಯ ಕೆಲಸವಾಗುತ್ತವೆಂದು ನಿರೀಕ್ಷಣೆ ಮಾಡಿದ್ದರೋ ಆ ಮಟ್ಟದಲ್ಲಿ ಈ ಇಲಾಖೆ ಕೆಲಸ ಮಾಡುತ್ತಿಲ್ಲ. ಬಾಕಿ ವಸೂಲಿ ಕಾಲದಲ್ಲಿ ಸಣ್ಣಪುಟ್ಟ ರೈತರಿಗೆ ಕೊಡತಕ್ಕ ಕಿರುಕುಳ ಜಾಸ್ತಿಯಾಗಿದೆ. ಈ ಇಲಾಖೆಯಲ್ಲಿರತಕ್ಕ ಹೆಚ್ಚುವರಿ ಸಿಬ್ಬಂದಿಯನ್ನು ಕಡಿಮೆ ಮಾಡಬೇಕೆಂದು ಹೇಳಬಯಸುತ್ತೇನೆ. ಯಾವ ರೀತಿಯಿಂದಲೂ ಹೆಚ್ಚುವರಿ ಬೇಡಿಕೆಯನ್ನು ಕೊಡುವುದಕ್ಕೆ ಅವಕಾಶವಿಲ್ಲವೆಂದು ತಿಳಿಸುತ್ತೇನೆ.

ಗೃಹನಿರ್ಮಾಣ ಯೋಜನೆ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಇದು ಒಳ್ಳೆಯ ಯೋಜನೆ, ಆದರೆ ಕಟ್ಟಲಾಗುತ್ತಿರುವ ಮನೆಗಳಿಗೆ ಒಳ್ಳೆಯ ಮೆಟೀರಿಯಲ್ಸ್ ಹಾಕುತ್ತಿಲ್ಲ. ಕೈಗೊಂಡ ಕಟ್ಟಡ ಗಳನ್ನು ಬೇಗ ಕಾರ್ಯಗತ ಮಾಡದೇ ಇರುವುದರಿಂದ ಎಸ್ಟಿಮೇಟ್ ಕೂಡ ಹೆಚ್ಚಾಗುತ್ತದೆ. ಇದರ

ಹೊರೆಯನ್ನು ಮನೆಯನ್ನು ಯಾರು ಕೊಂಡುಕೊಳ್ಳುತ್ತಾರೋ ಅವರ ಮೇಲೆ ಹಾಕಬೇಕಾಗುತ್ತದೆ. ಗೃಹನಿರ್ಮಾಣ ಮಂಡಳಿ ಜನತೆ ನಿರೀಕ್ಷಣೆ ಮಾಡಿದಂತೆ ದಕ್ಷತೆಯಿಂದ ಹಾಗೂ ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿಲ್ಲ, ಹಡ್ಕೋ ಸ್ಕೀಮಿನಿಂದ ಬಹಳ ಹಣ ಕೊಡುತ್ತಿದ್ದಾರೆ. ಅದರ ಪ್ರಯೋಜನವನ್ನು ಸರ್ಕಾರದವರು ಬಳಸಿಕೊಂಡು ಇನ್ನೂ ಹೆಚ್ಚಿನ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಏರ್ಪಾಡು ಮಾಡಬೇಕು. ಇಲ್ಲಿ ತಂದಿರುವ ಬೇಡಿಕೆಗೆ ನಾವು ಓಟು ಮಾಡತಕ್ಕದ್ದು ಸಮಂಜಸವಲ್ಲವೆಂದು ಹೇಳುತ್ತೇನೆ.

ಇನ್ನು ಇರಿಗೇಷನ್ ವಿಚಾರ, ಇದು ಬಹಳ ಮುಖ್ಯವಾದುದು ಏಕೆಂದರೆ, ರೈತರು ಹೆಚ್ಚಿನ ರೀತಿಯಲ್ಲಿ ಬೆಳೆಯನ್ನು ಬೆಳೆಯಬೇಕಾದರೆ ನೀರಿನ ಸೌಕರ್ಯ ಬೇಕು. ಇವತ್ತು ಮೈನರ್ ಇರಿಗೇಷನ್ ಏನಾಗಿದೆ, ಈ ಇಲಾಖೆ ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲ. ಕೆರೆಗಳ ಕೆಲಸ ನೋಡಿದರೆ, ಹೊಸ ಮಣ್ಣು ಮಾತ್ರ ಕಾಣುತ್ತಿದೆಯೋ ಹೊರತು, ಕೆರೆಗಳಲ್ಲಿ ನೀರು ಮಾತ್ರ ನಿಲ್ಲುವುದಿಲ್ಲ. ಮಲೆನಾಡಿನಲ್ಲಿರತಕ್ಕ ಕೆರೆಗಳು ಹಿಂದಿನ ಕಾಲದಲ್ಲಿ ಪಾಳೆಗಾರರ ಕಾಲದಲ್ಲಿ ಹಾಗೂ ರಾಜರ ಕಾಲದಲ್ಲಿ ಕಟ್ಟಿಸಿದಂತ ಕೆರೆಗಳು, ೧೨ನೇ ಶತಮಾನದಲ್ಲಿ ಕಟ್ಟಿರತಕ್ಕಂಥ ಕೆರೆಗಳು ಇಂದು ಚೆನ್ನಾಗಿದ್ದು, ನೀರು ಕೂಡ ಸಾಕಷ್ಟು ನಿಲ್ಲುತ್ತವೆ. ಇತ್ತೀಚೆಗೆ ಕಟ್ಟಿರತಕ್ಕ ಕೆರೆಗಳಲ್ಲಿ ನೀರು ನಿಲ್ಲುವುದೇ ಇಲ್ಲದಂತಾಗಿದೆ. ಇದರ ಜೊತೆಗೆ ನೀರಿನ ತೆರಿಗೆ ಹಾಕಿ ಜನರಿಗೆ ಹೆಚ್ಚಿನ ಕಿರುಕುಳ ಕೊಡುತ್ತಿದ್ದಾರೆ. ಎಲ್ಲೆಲ್ಲಿ ನೀರು ಸರಬರಾಜಿನ ಅನುಕೂಲವಿದೆಯೋ ಅಂಥ ಕಡೆ ನೀರಿನ ತೆರಿಗೆ ಹಾಕಬೇಕೆಂದು ಇದೆ. ಆದರೆ ಇಂಜಿನಿಯರ್‌ಗಳು ಹಾಗೂ ರೆವಿನ್ಯೂ ಇಲಾಖೆಯವರು ಹೋಗಿ ಒಂದು ಪಟ್ಟಿ ಕೊಟ್ಟು ಕಣ್ಣುಮುಚ್ಚಿಕೊಂಡು ನೀರಿನ ತೆರಿಗೆ ಹಾಕಿ ಬರುತ್ತಾರೆ. ಇದರ ಬಗ್ಗೆ ತಂದಿರುವ ಬೇಡಿಕೆಗೆ ಮಂಜೂರಾತಿ ಕೊಡುವುದು ಸಮಂಜಸವಲ್ಲವೆಂದು ಹೇಳಬಯಸುತ್ತೇನೆ. ಸಮಾಜವಾದದ ಹೆಸರಿನಲ್ಲಿ ಏನಾಗಿದೆ ಇವತ್ತು ಅನೇಕ ದೊಡ್ಡ ದೊಡ್ಡ ಸ್ಕೀಮುಗಳು ಹಾಕಿದ್ದರೂ ಅದರ ಪ್ರಯೋಜನ ಜನಸಾಮಾನ್ಯರಿಗೆ ಮುಟ್ಟಿಲ್ಲ. ಅದೆಲ್ಲಾ ಮಧ್ಯವರ್ತಿ ಜನಗಳಿಗೆ ವಿನಿಯೋಗವಾಗುತ್ತಿದೆ. ದೇಶದಲ್ಲಿ ಅಶಾಂತಿ ತಲೆದೋರಿದೆ. ಕರ್ನಾಟಕ ರಾಜ್ಯದಲ್ಲಿಯೂ ಮುಂದುವರಿದರೆ, ಉತ್ತರ ಭಾರತದಲ್ಲಿ ಆದಂತೆ ಇಲ್ಲಿಯೂ ಆಗುತ್ತದೆಂದೂ ನಾನಂತೂ ಮನಗಂಡಿದ್ದೇನೆ, ಆದ್ದರಿಂದ ಇನ್ನು ಮುಂದಾದರೂ ಸಹ ಆಡಳಿತದಲ್ಲಿ ದಕ್ಷತೆ ಮತ್ತು ಮಿತವ್ಯಯವನ್ನು ಮೈಗೂಡಿಸಿಕೊಂಡು ಈಗ ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕು. ಮಂತ್ರಿಗಳೂ ಕೂಡ ದಕ್ಷತೆಯಿಂದ ಇರಬೇಕು, ಮಂತ್ರಿಮಂಡಲದಲ್ಲಿ ಅಟ್ಟಹಾಸ, ಆಡಂಬರ ಹಾಗೂ ಸುಳ್ಳು ಭರವಸೆಗಳನ್ನು ಕೊಡುವುದನ್ನು ಆದಷ್ಟು ನಿಲ್ಲಿಸಬೇಕು. ನಾನು ಹೆಚ್ಚುವರಿ ಬೇಡಿಕೆಯನ್ನು ವಿರೋಧಿಸಿ, ನನಗೆ ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ಎನ್. ಪಾಟೀಲ್ (ಹುಮ್ನಾಬಾದ್).—ಮಾನ್ಯ ಅಧ್ಯಕ್ಷರೇ, ಈ ಬೇಡಿಕೆಯನ್ನು ವಿರೋಧಿಸುತ್ತಾ ಕೆಲವು ಕಾರಣಗಳನ್ನು ಈ ಸಭೆಯಲ್ಲಿಡಬಯಸುತ್ತೇನೆ. ಒಂದನೆಯದಾಗಿ ಇವತ್ತು ಸಾಧಾರಣವಾಗಿ ವರ್ಷದಿಂದ ಕೆಲವು ಪ್ರವೃತ್ತಿಗಳು ಬೆಳೆದು ಬಂದಿದೆ, ಸರ್ಕಾರ ಏನು ಕೆಲಸ ಮಾಡುತ್ತಿದೆ, ಸರ್ಕಾರದ ಕೆಲಸದ ಬಗ್ಗೆ ಹೇಳುವುದೇ ಒಂದು ಪ್ರವೃತ್ತಿ ಕಂಡುಬರುತ್ತಿದೆ. ಸಮಾಜವಾದದ ಹೆಸರಿನಲ್ಲಿ ಭೂಸುಧಾರಣಾ ಕಾನೂನು, ಋಣ ಪರಿಹಾರ ಕಾನೂನು, ಜೀತದಾಳುಗಳ ಬಿಡುಗಡೆಯ ಕಾನೂನು ಯಾವುದಕ್ಕೂ ನಾವು ಅಪೋಸ್ ಮಾಡದೆ ಎಲ್ಲಕ್ಕೂ ನಾವು ಬೆಂಬಲ ಕೊಟ್ಟಿದ್ದೇವೆ. ಇಷ್ಟು ಬೆಂಬಲ ಕೊಟ್ಟು ನಾವು ಮಾಡಿದರೂ ಯಾವುದಾದರೂ ಒಂದು ಸಮಸ್ಯೆ ಪರಿಹಾರವಾಯಿತೇ ಎಂದು ನೋಡಿದರೆ ಯಾವುದೂ ಸರಿಯಾಗಿ ಕಾರ್ಯರೂಪದಲ್ಲಿ ಬಂದಿಲ್ಲ. ಜೀತಪದ್ಧತಿಯ ವಿಚಾರವಾಗಿ ಒಂದು ಮಾತು ಹೇಳುವುದಾದರೆ, ಇಂದು ತನ್ನ ಹೊಟ್ಟೆಪಾಡಿಗೆ ಅವನು ಪಡುವ ಕಷ್ಟವನ್ನು ನೋಡುವುದಕ್ಕೆ ಆಗುವುದಿಲ್ಲ. ಅವನಿಗೆ ಸಿಗತಕ್ಕ ಸಾಲ, ಸಿಗತಕ್ಕ ಕೂಲಿ ಹಾಗೂ ಕೆಲಸ ಎಲ್ಲವೂ ನಿಂತುಹೋಗಿ ಇಂದು ಪ್ರತಿಯೊಂದು ಹಳ್ಳಿಗಳಲ್ಲಿಯೂ ನಿರುದ್ಯೋಗಿಗಳು ತಾಂಡವಾಡುತ್ತಿದ್ದಾರೆ. ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಕೊಡುತ್ತೇವೆಂದು ಹೇಳಿದರು, ಇವತ್ತು ೨೫೦-೩೦೦ ರೂಪಾಯಿಗಳಿಗೆ ಅರ್ಜಿ ಕೊಟ್ಟು ೨-೩ ತಿಂಗಳು ಸುತ್ತಾಡಿದರೂ ಸಾಲ ಸಿಗುತ್ತಿಲ್ಲ. ಮಂತ್ರಿಗಳ ಕಡೆಯಿಂದ; ಶಾಸಕರ ಕಡೆಯಿಂದ ಶಿಫಾರಸ್ಸು ಮಾಡಿ ಕಾಗದ ಬರೆಸಿದರೆ ಮಾತ್ರ ಸಾಲ ಸಿಗುತ್ತದೆ. ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಸಿಗುವುದು ಇವತ್ತು ಯಾರಿಗೆ ? ಹಳ್ಳಿಯಲ್ಲಿರುವ ಬಡ ರೈತರಿಗೆ ಸಿಗುತ್ತಿಲ್ಲ, ಬಡ ವ್ಯವಸಾಯಗಾರನಿಗೆ ಸಿಗುತ್ತಿಲ್ಲ. ಯಾರು ಮನೆಯಲ್ಲಿ ೪-೮ ಎಮ್ಮೆಗಳು ಇವೆ, ಅವರಿಗೆ ಮತ್ತೆ ೮ ಎಮ್ಮೆಗಳನ್ನು ಕೊಟ್ಟಿದ್ದಾರೆ. ನೀವು ಕೊಟ್ಟ ವಾಗ್ದಾನಗಳೆಲ್ಲಾ ಈರೀತಿ ಮಣ್ಣು ಪಾಲಾಗಿರುವಾಗ ಜನತೆ ಯಾವ ರೀತಿ ನಿಮ್ಮನ್ನು ನಂಬಬೇಕು. ನಮ್ಮ ಜಿಲ್ಲೆಯಲ್ಲಿ ನಡೆದಂತ ಒಂದು ಐತಿಹಾಸಿಕ ಘಟನೆಯನ್ನು ಹೇಳುತ್ತೇನೆ. ಕುಟುಂಬ ಯೋಜನೆ

ಹೆಸರಿನಲ್ಲಿ ಬಸ್ ಸ್ಟ್ಯಾಂಡಿಗೆ ಬಂದಂತ ಜನರನ್ನು ಪೋಲೀಸರ ಜೀಪುಗಳ ಸಹಾಯದಿಂದ ತುಂಬಿಕೊಂಡು ಹೋಗಿ ಅಪರೇಷನ್ ಮಾಡಿದರು. ಯಾವ ಆಸ್ಪತ್ರೆಯಲ್ಲಿಯೂ ಡಾಕ್ಟರುಗಳು ಇಲ್ಲ. ಯಾರನ್ನು ಕೇಳಿದರೂ ಕ್ಯಾಂಪ್‌ಗೆ ಹೋಗಿದ್ದಾರೆ, ೧೦ ಜನ ಡಾಕ್ಟರುಗಳು ಇದ್ದಂತ ಆಸ್ಪತ್ರೆಯಲ್ಲಿಯೂ ಡಾಕ್ಟರುಗಳು ಇಲ್ಲ ಕಾಂಪೌಂಡರುಗಳು ಮಾತ್ರ ಇದ್ದಾರೆ. ಎಂಥ ಸೀರಿಯಸ್ ಕೇಸ್ ಆದರೂ ಅಟೆಂಡ್ ಮಾಡುವುದಕ್ಕೆ ಒಬ್ಬ ಡಾಕ್ಟರು ಇಲ್ಲ.

ಒಂದೊಂದು ಆಸ್ಪತ್ರೆಯಲ್ಲಿ ಒಬ್ಬ ಡಾಕ್ಟರು ಸಹ ಇರುತ್ತ ಇರಲಿಲ್ಲ. ಭಾವಿ ಪ್ರಧಾನಿಯವರು ಬಗುತ್ತಿದ್ದಾರೆ ಎಂದರೆ ಅದರ ಬಗ್ಗೆ ಎಷ್ಟು ಖರ್ಚು ಆದು ಲೆಕ್ಕ ಇಲ್ಲ. ಇವೊತ್ತು ಹೊಸ ಪೀಳಿಗೆ ಬರುತ್ತದೆ ನಾವು ಒಂದು ಟಾರ್ಗೆಟ್ ತೆಗೆದುಕೊಂಡಿದ್ದೇವೆ ಎಂದು ಹೇಳಿ ಈ ರೀತಿ ಕೆಲಸ ಮಾಡಿದ್ದಾರೆ. ಇವೊತ್ತು ಡಾ || ಮೋದಿಯವರು ಸಾವಿರಾರು ಜನರಿಗೆ ಕಣ್ಣು ಅಪರೇಷನ್ ಮಾಡುತ್ತಾರೆ ಆದರೆ ಅವರು ಮಾಡತಕ್ಕ ಅಪರೇಷನ್‌ನಲ್ಲಿ ಇವೊತ್ತಿನವರೆಗೂ ಒಂದು ಡ್ಯಾಮೇಜ್ ಕೂಡ ತೋರಿಸಲಿಕ್ಕೆ ಆಗುವುದಿಲ್ಲ. ಅವರು ಇಡೀ ಜಗತ್ತಿನಲ್ಲೇ ಹೆಸರನ್ನು ಪಡೆವಂತ ಮಹಾನ್ ವ್ಯಕ್ತಿ. ದೇವರು ಅವರಿಗೆ ಅಂತಹ ಬ್ರೈನ್ ಕೊಟ್ಟಿದ್ದಾನೆ.

ಅಧ್ಯಕ್ಷರು :—ಮಾನ್ಯ ಸದಸ್ಯರು ಇನ್ನು ಹತ್ತು ನಿಮಿಷಗಳಲ್ಲಿ ಭಾಷಣ ಮುಗಿಸಬೇಕು.

ಶ್ರೀ ಹೆಚ್. ಡಿ. ದೇವೇಗೌಡ —ಅಧ್ಯಕ್ಷರೇ, ಇವೊತ್ತು ಸಪ್ಲಿಮೆಂಟರಿ ಡಿಮ್ಯಾಂಡ್ ಮತ್ತು ಓಟ್ ಆನ್ ಅಕೌಂಟ್ ಎರಡು ಇದೆ. ಈ ಒಂದು ಹೊಸ ಸಂಪ್ರದಾಯ ಏನು ಎಂದು ಗೊತ್ತಾಗಲಿಲ್ಲ. ಮಾನ್ಯ ಅಧ್ಯಕ್ಷರಿಗೆ ನನಗಿಂತ ಐದು ವರ್ಷಗಳ ಕಾಲ ಹೆಚ್ಚು ಅನುಭವ ಇದೆ. ಈ ಸಭೆಯಲ್ಲಿ ಎರಡನ್ನು ಒಟ್ಟಿಗೆ ತೆಗೆದುಕೊಂಡಿದ್ದು ನನಗೆ ಗೊತ್ತಿಲ್ಲ. ಈ ಎರಡನ್ನು ಒಟ್ಟಿಗೆ ಸಭೆಯ ಮುಂದೆ ಇಟ್ಟು ಕಾಲಾವಕಾಶ ಇಲ್ಲ ಎಂದರೆ ಹೇಗೆ. ನೆನ್ನೆ ಒಂದು ದಿವಸ ಆಗಿದೆ, ಇವೊತ್ತು ಒಂದು ದಿವಸ ಆಗುತ್ತಾ ಇದೆ, ಅಧ್ಯಕ್ಷರು ದಯಮಾಡಿ ಎಕ್ಸ್‌ಟೆಂಡ್ ಮಾಡಬೇಕು.

ಶ್ರೀ ಪಿ. ಎಸ್. ಪಾಟೀಲ್ :—ಅಧ್ಯಕ್ಷರೆ, ಇವೊತ್ತು ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಇವರು ತೆಗೆದುಕೊಂಡಿರತಕ್ಕ ಕ್ರಮ ನೋಡಿದರೆ, ಮನುಷ್ಯ ವರ್ಗಕ್ಕೆ ಅಪಮಾನವಾಗುತ್ತದೆ ಇವರು ನಾವು ಟಾರ್ಗೆಟ್ ತೆಗೆದುಕೊಂಡಿದ್ದೇವೆ, ಇಷ್ಟು ಕೇಸಸ್ ಕಂಪ್ಲೀಟ್ ಮಾಡಬೇಕು ಎಂದು ಹೇಳಿ ಸಿಕ್ಕಾಪಟ್ಟೆ ಅಪರೇಷನ್ ಮಾಡಿದ್ದಾರೆ. ಇವರು ಮನುಷ್ಯರಿಗೆ ಅಪರೇಷನ್ ಮಾಡಿದ ಮೇಲೆ ಯಾವ ರೀತಿ ನೋಡಿಕೊಂಡಿದ್ದಾರೆ ಎಂದು ನೋಡಿದರೆ ಇವರಿಗೆ ಒಂದೊಂದು ಆಂಟಿಬಯಾಟಿಕ್ ಟ್ಯಾಬ್ಲೆಟ್ ಕೂಡ ಕೊಡಲಿಕ್ಕೆ ಆಗಿಲ್ಲ, ಅಲ್ಲಿ ತೊಂದರೆಪಡುತ್ತಿದ್ದವರಿಗೆ ಒಂದೊಂದು ಆಸ್ಪ್ರೋ ಟ್ಯಾಬ್ಲೆಟ್ ಕೊಟ್ಟಿದ್ದಾರೆ. ಅಧ್ಯಕ್ಷರು ನನಗೆ ಹೆಚ್ಚು ಕಾಲಾವಕಾಶ ಕೊಟ್ಟಿದ್ದೇ ಆಗಿದ್ದರೆ ನಾನು ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಕೊಡುತ್ತಿದ್ದೆ. ಅಧ್ಯಕ್ಷರು ಆದಷ್ಟು ಬೇಗ ತಮ್ಮ ಭಾಷಣ ಮುಗಿಸಬೇಕು ಎಂದು ಹೇಳಿದ್ದಾರೆ. ಇವರು ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಮಾಡಿರತಕ್ಕ ವ್ಯವಹಾರ ನೋಡಿದರೆ, ಇದಕ್ಕಿಂತ ಹೆಚ್ಚಿನ ನಾಚಿಕೆಗೇಡು ಮತ್ತೊಂದು ಬೇರೆ ಏನು ಇಲ್ಲ. ಇವರು ಮಾಡಿರತಕ್ಕ ಕೆಲಸ ಏನು, ತಾವು ಹೆಚ್ಚು ಹೆಸರು ಪಡೆಯಬೇಕು ಎಂಬ ಆಸೆಯಿಂದ ಹೆಚ್ಚು ಪ್ರಚಾರ ಮಾಡಿಕೊಂಡು ನಮ್ಮ ಜಿಲ್ಲೆಯಲ್ಲಿ ಫ್ಯಾಮಿಲಿ ಪ್ಲಾನಿಂಗ್ ಹೆಸರು ಹೇಳಿಕೊಂಡು ಮನುಷ್ಯರನ್ನು ಕುರಿಗಳನ್ನು ಕೊಯ್ಯುವಂತೆ ಕೊಯ್ದಿದ್ದಾರೆ. ಮಾನ್ಯ ಮಂತ್ರಿಗಳವರ ತಲೆಯಲ್ಲಿ ಏನು ಇತ್ತು ಎಂದರೆ, ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಹೆಚ್ಚು ಟಾರ್ಗೆಟ್ ತೋರಿಸಿ ಹೆಸರು ಪಡೆಯಬೇಕು ಎಂಬ ಒಂದು ಹುಚ್ಚು ತುಂಬಿಕೊಂಡಿತ್ತು.

SRI H. M. CHANNABASAPPA.—The hon'ble Member does not seem to know facts. The hon'ble Member speaks in an emotional spirit. He goes on saying anything that strikes to his mind. The family planning at bulky camps took place much earlier than what he has been reporting to and I did preside and I did inspect the entire operations made and place where they have arranged and the Director of Public Health also inspected and certified that everything is perfectly alright and I saw with my own eyes, people coming with jubilate and singing songs.

SRI H. D. DEVEGOWDA.—He has also made a charge that the camp was inaugurated by the hon'ble Minister.

SRI H. M. CHANNABASAPPA.—I inaugurated the camp-*i.e.*, the family planning camp and I fully satisfied that everything was O. K. Why does the Hon'ble Member who does not know what has happened on that day go on talking in an emotional spirit?

SRI M. S. KRISHNAN.—May I know whether in the family planning camp there was a family quarrel between one Minister and the other Minister?

SRI H. M. CHANNABASAPPA.—I don't have any quarrel, It is totally falsehood. I have not quarrelled with any Minister.

ಶ್ರೀ ವಿ. ಎನ್. ಪಾಟೀಲ್.—ಇವರ ಸ್ಥಿತಿಗತಿ ಎಲ್ಲಿಯವರೆಗೆ ಬಂತು ಎಂದರೆ ನನ್ನ ಲಾಯಲಿಟಿ ಹೆಚ್ಚು ತೋರಿಸೋಣ ಎನ್ನುವ ಮಟ್ಟಕ್ಕೆ ಬಂತು. ಮಾನ್ಯ ರಾಮಸ್ವಾಮಿಯವರು ಇದರ ಬಗ್ಗೆ ಒಂದು ಪ್ರಶ್ನೆ ಕೇಳಿ ೧೮ ಪರ್‌ಸೆಂಟ್ ಇದ್ದುದು ೬೦ ಪರ್‌ಸೆಂಟ್ ಮೇಲೆ ಹೋಗಿದೆ ಎಂದು ಹೇಳಿದರು. ನಮ್ಮಲ್ಲಿರತಕ್ಕ ಒಂದು ಕೋ-ಅಪರೇಟೀವ್ ಷುಗರ್ ಮಿಲ್ ಕಾರ್ಮಿಕರಿಗೆ ಅವರ ಸಂಬಂಧಿಕರಿಗೆ ಐದು ಜನ ಮಕ್ಕಳಿದ್ದಂತಹವರಿಗೆ ಒಂದು ನೂರು ರೂಪಾಯಿಗಳನ್ನು ಕೊಡುತ್ತೇವೆ ಎನ್ನತಕ್ಕಂತಹ ಒಂದು ಆಸೆಯನ್ನು ತೋರಿಸಿ ಎರಡು ಸಾವಿರ ಜನರಿಗೆ ಆಪರೇಷನ್ ಮಾಡಿಸಿದ್ದಾರೆ. ಅವರಿಗೆ ಆಪರೇಷನ್ ಮಾಡಿಸಿದ ಮೇಲೆ ಅವರ ಗತಿ ಏನಾಯಿತು, ಅದನ್ನು ನೋಡಲಿಕ್ಕೆ ಹೋಗಲಿಲ್ಲ. ಇವರು ನಮ್ಮ ನಾಗರೀಕರ ಜೊತೆ ಯಾವ ರೀತಿ ನಡೆದುಕೊಳ್ಳಬೇಕು ಎನ್ನುವುದನ್ನು ಮರೆತುಬಿಟ್ಟರು. ಮನುಷ್ಯನನ್ನು ಕೊಯ್ಯಿಸತಕ್ಕ ಕೆಲಸ ಮಾಡಿದ್ದಾರೆ. ಇವರು ಮಾಡಿರತಕ್ಕ ಕೆಲಸ ದನಗಳಿಗೆ ಒಂದು ಅಂಗವನ್ನು ಯಾವ ರೀತಿ ಕಡಿಯುತ್ತಾರೆ, ಆ ರೀತಿಯಲ್ಲಿ ಕೆಲಸ ಮಾಡಿಸಿದ್ದಾರೆ. ದಿನಾಂಕ ೨೬ನೇ ಡಿಸೆಂಬರ್‌ನಲ್ಲಿ ನಮ್ಮಲ್ಲಿಗೆ ಒಬ್ಬ ಮೂರ್ತಿ ಬಂದರು, ಅವರು ಮಾಡಿದಂತ ಮೀಟಿಂಗ್ ದಿವಸ ನಾವು ಇರಲಿಲ್ಲ. ನಮ್ಮಂತಹವರಿಗೆ ಅಂತಹ ಸಮಯದಲ್ಲಿ ಬಂದು ಸರ ಹಾಕುವ ಚಟ ಇಲ್ಲ. ೨೬ನೇ ತಾರೀಖು ಡಿಸೆಂಬರ್ ತಿಂಗಳಿನಲ್ಲಿ ನಮ್ಮ ಕರ್ನಾಟಕ ರಾಜ್ಯದ ಆರು ಜನ ಮಂತ್ರಿಗಳು ಬಂದಿದ್ದರು, ಆಂಧ್ರಪ್ರದೇಶದಿಂದ ನಾಲ್ಕು ಜನ ಮಂತ್ರಿಗಳು ಬಂದಿದ್ದರು. ಇವರು ಎಲ್ಲಾ ಏತಕ್ಕೆ ಬಂದಿದ್ದರು, ಅಲ್ಲಿ ಅಂತಹ ಕೆಲಸ ಏನು ಇರಲಿಲ್ಲ. ನಮ್ಮ ಭಾರತ ದೇಶದ ಪ್ರೆಸಿಡೆಂಟರು ಏನು ಬಂದಿರಲಿಲ್ಲ. ಸುಮ್ಮನೆ ಇವರು ಇಷ್ಟು ಜನರು ಬಂದು ಪಬ್ಲಿಕ್ ದುಡ್ಡನ್ನು ವೇಸ್ಟ್ ಮಾಡಿದ್ದಾರೆ. ಈಗ ಮತ್ತೆ ಹಣ ಬೇಕು ಎಂದು ಕೇಳಿದರೆ ಇವರಿಗೆ ನಾವು ಒಂದು ವಿಶ್ವಾಸದಿಂದ ಕೊಡೋಣ. ಇವರು ಬಂದಿರತಕ್ಕದ್ದನ್ನು ನೋಡಿದರೆ ಒಬ್ಬ ಮಂತ್ರಿಗಳ ಹಿಂದೆ ಮತ್ತೊಬ್ಬ ಚೋಟ ಮಂತ್ರಿಗಳು ಬೇರೆ. ಇದು ಎಲ್ಲಾ ಏತಕ್ಕೆ ನಡೆಯಿತು ಎಂದರೆ ಸಂಜಯ್‌ಗಾಂಧಿ ಬಂದಿದ್ದರಿಂದ, ಇವರು ಏನು ಎಕ್ಸ್‌ಸ್ಟ್ರಾ ಕಾನ್‌ಸ್ಟಿಟ್ಯೂಷನಲ್ ಅಥಾರಿಟಿ ಏನು ? ಇವರೇನಾದರೂ ಗ್ರಾಮಪಂಚಾಯಿತಿ ಚೇರ್‌ಮೆನ್ ಇದ್ದರು ಏನು ? ತಾಲ್ಲೂಕು ಬೋರ್ಡ್ ಮೆಂಬರ್ ಆಗಿದ್ದರೇನು ? ಇಷ್ಟು ಜನ ಮಂತ್ರಿಗಳು ಯಾವ ಒಂದು ಲೆಕ್ಕದಲ್ಲಿ ಅಲ್ಲಿಗೆ ಬಂದರು, ಇವರು ಬಂದು ಹೋದಂತಹ ಟಿ. ಎ. ಮತ್ತು ಡಿ. ಎ. ಯಾವ ಲೆಕ್ಕಕ್ಕೆ ಹಾಕಿದ್ದಾರೆ, ಅವರ ಖರ್ಚು ಯೂತ್ ಕಾಂಗ್ರೆಸ್ ಏನಾದರೂ ಕೊಟ್ಟಿದೆಯೇ ? ಈ ರೀತಿ ಇಷ್ಟು ಹಣ ನಷ್ಟ ಮಾಡಿ ೨೦ ಪಾಯಿಂಟ್ ಮಾಡಿ ಎಂದು ಹೇಳಿಕೊಂಡು, ಸಂಜಯ್‌ಗಾಂಧಿ ಒಂದೊಂದು ಪಾಯಿಂಟ್ ಇಟ್ಟುಕೊಂಡು ಸುತ್ತಾಡಿದ್ದೀರಿ. ಮನುಷ್ಯರನ್ನು ಕೊಯ್ಯಿರಿ, ಕೊಯ್ಯಿರಿ, ಎನ್ನತಕ್ಕ ಕೆಲಸ ಮಾಡಿಸಿದ್ದೀರಿ. ಆ ೨೫ ಪಾಯಿಂಟ್‌ಗಳನ್ನೂ ಬಿಟ್ಟು ಕೇವಲ ಇದೊಂದೇ ಒಂದು ಪಾಯಿಂಟ್‌ನ್ನು ಹಿಡಿದುಕೊಂಡು ಮಾತನಾಡುತ್ತಿದ್ದೀರಿ. ತಾವು ಯಾವ ಒಂದೇ ಒಂದು ಪಾಯಿಂಟ್‌ನ್ನು ಹಿಡಿದುಕೊಂಡು ಮಾತನಾಡುತ್ತಿದ್ದೀರಿ, ಅದೇ ನಿಮ್ಮನ್ನು ಸಂಪೂರ್ಣವಾಗಿ ಮುಳುಗಿಸಿಬಿಟ್ಟಿದೆ. ನಾನು ಹೋದ ಬಜೆಟ್ ಮೀಟಿಂಗ್‌ನಲ್ಲೂ ಕೂಡ ಇಂಥ ಕೆಲವು ವಿಷಯಗಳ ಬಗ್ಗೆ ಮಾತನಾಡುತ್ತಿದ್ದೆ. ಅದರಲ್ಲಿ ಮುಖ್ಯವಾದುದು ಈ ಕುಟುಂಬ ಯೋಜನೆ ಕಾರ್ಯಕ್ರಮ. ಮಾನ್ಯ ಅಧ್ಯಕ್ಷರೆ, ಹೋದ ಸಲ ಬಜೆಟ್ ಅಧಿವೇಶನದಲ್ಲಿ ನಾನು ಮಾತನಾಡುವಾಗ ದೇಶದಲ್ಲಿ ಎಮರ್ಜೆನ್ಸಿ ಇತ್ತು, ಆಗ ನಾನು ಮಾತನಾಡಿದ್ದು ಸರಿಯಾಗಿ

ಪ್ರೊಸೀಡಿಂಗ್ಸ್‌ನಲ್ಲಿ ಬರುತ್ತಿತ್ತೋ ಇಲ್ಲವೋ ಗೊತ್ತಿಲ್ಲ. ನಾನಂತೂ ಅದನ್ನು ಸರಿಯಾಗಿ ನೋಡಲಿಲ್ಲ. ಅದೇ ರೀತಿ ಈಗಲೂ ಕೂಡ ನಾನು ಮಾತನಾಡುವುದು ಈ ಸಭೆಯ ಪ್ರೊಸೀಡಿಂಗ್ಸ್‌ನಲ್ಲಿ ರೆಕಾರ್ಡ್ ಆಗುತ್ತದೋ ಇಲ್ಲವೋ ಗೊತ್ತಿಲ್ಲ,

3-00 P. M.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಅದರಲ್ಲಿ ಅನುಮಾನವೇ ಬೇಡ. ಅವರು ಏನು ಮಾತನಾಡಿದರೂ ಅದು ಪ್ರೊಸೀಡಿಂಗ್ಸ್‌ನಲ್ಲಿ ಬಂದೇ ಬರುತ್ತದೆ. ಎಮರ್ಜೆನ್ಸಿಗೂ ಪ್ರೊಸೀಡಿಂಗ್ಸ್‌ಗೂ ಯಾವ ಸಂಬಂಧವೂ ಇಲ್ಲ. ಆದ್ದರಿಂದ ಧಾರಾಳವಾಗಿ ಮಾತನಾಡಬಹುದು.

ಶ್ರೀ ವಿ. ಎನ್. ಪಾಟೀಲ್ —ಮಾನ್ಯ ಅಧ್ಯಕ್ಷರೆ, ನಾನು ಇದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗದೆ, ಕೇವಲ ನಾಲ್ಕು ಪ್ರಶ್ನೆಗಳನ್ನು ಮಾತ್ರ ಕೇಳಬೇಕೆಂದಿದ್ದೇನೆ, ಇದುವರೆಗೂ ತಮ್ಮ ಸರ್ಕಾರ ಆಹಾರ ಧಾನ್ಯಗಳ ಬೆಲೆಗಳನ್ನು ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ದೇಶದಲ್ಲಿ ಎಮರ್ಜೆನ್ಸಿ ಬರುವುದಕ್ಕೆ ಮೊದಲು ಕಡಲೇಕಾಯಿ ಎಣ್ಣೆ ಒಂದು ಲೀಟರ್‌ಗೆ ೪-೫೦ ಪೈಸೆಗೆ ಸಿಕ್ಕುತ್ತಿತ್ತು. ಆದರೆ ಎಮರ್ಜೆನ್ಸಿ ಬಂದ ಮೇಲೆ ೧೦-೧೨ ರೂಪಾಯಿಗಳನ್ನೂ ಕೊಟ್ಟರೂ ಕೂಡ ಒಂದು ಕೆ. ಜಿ. ಎಣ್ಣೆ ಸಿಕ್ಕುತ್ತಿಲ್ಲ. ತಮಗೆ ಇಂತಹ ಹಲವಾರು ಉದಾಹರಣೆಗಳನ್ನು ಕೊಡಬಲ್ಲೆ ಅದೇ ರೀತಿ ತೊಗರಿಬೇಳೆ ತೆಗೆದುಕೊಂಡರೆ ಎಂತಹ ಬಡವರ ಮನೆಯನ್ನು ತೆಗೆದುಕೊಂಡರೂ ಕೂಡ ಯುಗಾದಿ ಹಬ್ಬದಲ್ಲಿ ಇತರ ವಿಶೇಷ ಸಂದರ್ಭಗಳಲ್ಲಿ ತೊಗರಿಬೇಳೆ ತಂದು ಹೋಳಿಗೆ ಮಾಡುತ್ತಿದ್ದರು. ಆದರೆ ಬಡವರಿಗೆ ಇಂದು ಅದು ಸಾಧ್ಯವಾಗುತ್ತಿಲ್ಲ. ಇವತ್ತಿನ ದಿವಸ ಕೆಲವು ದೊಡ್ಡ ದೊಡ್ಡ ಸಿರಿವಂತರನ್ನು ಬಿಟ್ಟರೆ ಬಡವರು ಯಾರೂ ಕೂಡ ತೊಗರಿ ಬೇಳೆಯನ್ನು ಉಪಯೋಗಿಸುವ ಹಾಗಿಲ್ಲ. ಕಾರಣ ಇವತ್ತು ತೊಗರಿಬೇಳೆ ಬೆಲೆ ೪-೫ ರೂಪಾಯಿವರೆಗೆ ಏರಿದೆ. ಅಷ್ಟು ಕೊಟ್ಟರೂ ಒಳ್ಳೆಯ ಬೇಳೆ ಸಿಕ್ಕುವುದಿಲ್ಲ.

ಸ್ವಾಮಿ ಹಿಂದೆ ಒಂದು ಕ್ವಿಂಟಾಲ್ ಜೋಳ ೧೨೦ ರೂಪಾಯಿಗೆ ಸಿಕ್ಕುತ್ತಿದ್ದುದು ೧೫೦ ರೂ.ಗೆ ಏರಿತು. ಆದರೆ ನೀವು ರೈತನಿಂದ ೧೨೦ ರೂ ಗೆ ಖರೀದಿ ಮಾಡಿದ್ದೀರಿ. ಆದರೆ ಮುಂದಿನ ಆಕ್ಟೋಬರ್ ತಿಂಗಳಲ್ಲೂ ಕೂಡ ಇದೇ ಬೆಲೆಯನ್ನೇ ಹತೋಟಿಯಲ್ಲಿ ಇಟ್ಟುಕೊಳ್ಳುತ್ತೇವೆಂದು ಭರವಸೆ ಕೊಡುತ್ತೀರಾ ಎಂದು ಕೇಳುತ್ತೇನೆ. ಆದರೆ ನಿಮಗೆ ಆಹಾರ ಧಾನ್ಯಗಳ ಬೆಲೆಗಳನ್ನು ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳಲು ಸಾಧ್ಯವಾಗಿಲ್ಲ. ಜನತೆ ನಿಮ್ಮ ಮೇಲೆ ವಿಶ್ವಾಸವನ್ನು ಕಳೆದುಕೊಂಡಿದೆ. ಈ ಸರ್ಕಾರವನ್ನು ಬ್ಲಾಕ್ ಮಾರ್ಕೆಟಿಯರ್ಸ್ ಸರ್ಕಾರ ಎಂದು ಹೇಳಬೇಕೆ, ಅಥವಾ ಸ್ಮಗ್ಲರ್ಸ್ ಸರ್ಕಾರ ಎಂದು ಹೇಳಬೇಕೆ? ನೀವು ಸರಿಯಾದ ಆಡಳಿತವನ್ನು ನಡೆಸುವುದಾದರೆ ಈ ಬೆಲೆಗಳನ್ನು ಒಂದು ಹತೋಟಿಗೆ ತರುತ್ತೇವೆ ಎಂದು ಜನತೆಗೆ ಆಶ್ವಾಸನೆ ನೀಡಿ. ಆದರೆ ಈಗ ಇಲ್ಲಿ ಅಲಿಬಾಬ ಔರ್ ಚಾಲೀಸ್ ಚೋರ್ ಎನ್ನುವಂತೆ ಇದೆ. ಇಲ್ಲಿ ಎಲ್ಲಾ ಬರೀ ಹಿಪಾಕ್ರಸಿ ನಡೆಯುತ್ತಿದೆ. ಬಡಜನರಿಗೆ ಎರಡು ಹೊತ್ತು ಊಟಕ್ಕೆ ಇಲ್ಲದ ಒಂದು ಪರಿಸ್ಥಿತಿಗೆ ತಂದಿಟ್ಟಿದ್ದೀರಿ, ಈ ರೀತಿ ನಮಗೆ ತೊಂದರೆಯಾಗಿದೆ ಎಂದು ಜನ ನಮ್ಮನ್ನು ಕೇಳಿದರೆ ನೀವು ವಿಧಾನಸೌಧಕ್ಕೆ ಹೋಗಿ ಅಲ್ಲಿ ಕೇಳಿ ಎಂದು ನಾವು ಅವರಿಗೆ ಹೇಳುತ್ತೇವೆ, ಅವರು ಇಲ್ಲಿಗೆ ಬಂದರೆ ಇಲ್ಲಿಂದ ಹೊರಕ್ಕೆ ಹೋಗಿ ಎಂದು ಹೇಳುತ್ತೀರಿ. ದೇಶದಲ್ಲಿ ೨೦ ಪಾಯಿಂಟ್ ಪ್ರೋಗ್ರಾಂ ಇದ್ದರೆ ಅದನ್ನೆಲ್ಲಾ ಜನರಿಗೆ ಮರೆಸಿ ಕೇವಲ ೪-೫ ಪಾಯಿಂಟ್‌ಗಳನ್ನು ಮಾತ್ರ ತೋರಿಸಿದ್ದೀರಿ. ಈಗ ಜನರಿಗೆ ಹೇಗಾಗಿದೆ ಎಂದರೆ ಅವರು ಹಿಂದಕ್ಕೂ ಹೋಗುವಂತಿಲ್ಲ, ಮುಂದಕ್ಕೂ ಹೋಗುವಂತಿಲ್ಲ ಇದುವರೆಗೆ ಜನ ನಿಮಗೆ ದೇಶದ ರಕ್ಷಣೆಯನ್ನು ಮಾಡುವುದಕ್ಕೆ ಶಕ್ತಿಯನ್ನು ಕೊಟ್ಟಿದ್ದರು, ಬೆಂಬಲವನ್ನು ಕೊಟ್ಟಿದ್ದರು. ಆದರೆ ನೀವು ಮಾಡಿದ್ದಾದರೂ ಏನೂ ಬ್ಲಾಕ್‌ಮಾರ್ಕೆಟಿಯರ್ಸ್‌ಗೆ ರಕ್ಷಣೆ ಕೊಟ್ಟಿರಿ, ಸ್ಮಗ್ಲರ್ಸ್‌ಗೆ ರಕ್ಷಣೆ ಕೊಟ್ಟಿರಿ.

ಇನ್ನು ಗೌರ್ನಮೆಂಟ್ ವೇಸ್ಟ್ ಲ್ಯಾಂಡನ್ನು ಬಡವರು, ಜಮೀನಿಲ್ಲದವರು ಯಾರು ಯಾರು ಸಾಗುವಳಿ ಮಾಡಿಕೊಂಡು ಬರುತ್ತಿದ್ದರು ಆ ಜಮೀನನ್ನು ಅವರವರಿಗೇ ಕೊಟ್ಟು ಅದನ್ನು ರೆಗ್ಯುಲರೈಸ್ ಮಾಡುತ್ತೇವೆಂದು ಹೇಳಿದ್ದೀರಿ. ಅದು ಏನಾಯಿತು ಎಂದು ನೋಡಿದರೆ ಯಾರು ರೊಕ್ಕ ಕೊಟ್ಟರೋ ಅವರಿಗೆ ಜಮೀನು ರೆಗ್ಯುಲರೈಸ್ ಆಯಿತು, ಯಾರು ರೊಕ್ಕ ಕೊಡಲಿಲ್ಲ ಅವರಿಗೆ ಜಮೀನು ಸಿಕ್ಕಲಿಲ್ಲ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸುಮಾರು ೪-೫ ಸಾವಿರ ಜನಗಳಿಗೆ ಅವರವರು ಸಾಗುವಳಿ ಮಾಡುತ್ತಿದ್ದ ಜಮೀನುಗಳನ್ನು ಅವರವರಿಗೇ ಕೊಡುತ್ತೇವೆಂದು ಹೇಳಿದರು. ಅಂಥ ಜಮೀನುಗಳನ್ನು ಯಾರು ಸಾಗುವಳಿ ಮಾಡುತ್ತಿದ್ದರು ಅವರನ್ನೆಲ್ಲಾ ರೆವಿನ್ಯೂ ಇನ್‌ಸ್ಪೆಕ್ಟರ್‌ರವರು

ಈಗ ಅಲ್ಲಿಂದ ಕಿತ್ತು ಒಗೆಯುತ್ತಿದ್ದಾರೆ. ಅಲ್ಲಿದ್ದ ಜನರು ಸರಿಯಾಗಿ ಕಂದಾಯವನ್ನು ಕೊಡುತ್ತಿದ್ದರು. ಅವರು ಸುಮಾರು ೩೦-೪೦ ವರ್ಷಗಳಿಂದ ಆ ಜಮೀನುಗಳಲ್ಲಿ ಭಾವಿ ತೋಡಿಸಿಕೊಂಡು ಸಾಗುವಳಿ ಮಾಡುತ್ತಿದ್ದಾರೆ, ಅಂಥ ಜನರನ್ನು ಅಲ್ಲಿಂದ ಕಿತ್ತು ಒಗೆಯುವುದು ಯಾವ ನ್ಯಾಯ ? ಆದರೆ ನೇರಳೆ, ಮುತ್ತಂಗಿ ಗ್ರಾಮಗಳ ಪಿ. ಎಲ್. ಡಿ. ಛೇರ್ಮನ್‌ರವರು ಇಂಥ ಜಮೀನಿನಲ್ಲಿ ದ್ರಾಕ್ಷಿ, ಅಂಜೂರ ಮುಂತಾದ ಹಣ್ಣುಗಳ ತೋಟಗಳನ್ನು ಮಾಡಿಕೊಂಡಿದ್ದಾರೆ. ಅವರು ಕಾಂಗ್ರೆಸ್ ಕಾರ್ಯಕರ್ತರು, ಮತ್ತು ರಾಜಕೀಯ ಪ್ರಭಾವವುಳ್ಳವರು ಎಂದು ಆ ಜಮೀನನ್ನು ಅವರಿಗೇ ಕೊಡಬೇಕೆಂದು ಹೇಳುತ್ತಿದ್ದೀರಿ. ಈ ಬಗ್ಗೆ ಒಂದು ಅರ್ಜಿಯನ್ನು ರೆವಿನ್ಯೂ ಸೆಕ್ರೆಟರಿಯವರಿಗೆ ಬರೆದರೆ ಅವರು ಅದನ್ನು ಡಿವಿಜನಲ್ ಕಮಿಷನರ್‌ರವರಿಗೆ ಕಳುಹಿಸುತ್ತಾರೆ. ಆ ಡಿವಿಜನಲ್ ಕಮಿಷನರ್‌ಗವರು ಡೆಪ್ಯುಟಿ ಕಮಿಷನರ್‌ರವರಿಗೆ ಕಳುಹಿಸುತ್ತಾರೆ. ಆದರೆ ಅದರ ಪರಿಣಾಮ ಮಾತ್ರ ಏನೂ ಇಲ್ಲ. ಆದುದರಿಂದ ನಾನು ಹೇಳುವುದೇನೆಂದರೆ, ನಾವು ಇವತ್ತು ಯಾರಿಂದಲೂ ಸಲಾಂ ಹೊಡೆಸಿಕೊಳ್ಳುವುದು ಬೇಡ. ಎಲ್ಲವೂ ನ್ಯಾಯವಾಗಿಯೇ ನಡೆದರೆ ಇವುಗಳ ಅವಶ್ಯಕತೆಯೇ ಇರುವುದಿಲ್ಲ.

ಸ್ವಾಮಿ, ಕಳೆದಸಾರಿ ಬರಗಾಲ ಬಂದಾಗ ಒಂದೊಂದು ಹಳ್ಳಿಯಲ್ಲಿ ೧೮ ಸಾವಿರದಿಂದ ೨೦ ಸಾವಿರ ರೂಪಾಯಿಗಳವರೆಗೆ ಸರ್ಕಾರದ ಬೊಕ್ಕಸದಿಂದ ಹಣವನ್ನು ತೆಗೆದುಕೊಂಡು ಹೋಗಿ ಖರ್ಚುಮಾಡಿದ್ದೀರಿ. ತಾವು ಮಾಡಿರುವ ಕೆಲಸಕ್ಕೆ ಆ ಭಾಗದ ಜನರು ಬಹಳ ಚಿರಋಣಿಗಳಾಗಿದ್ದಾರೆ. ಆದರೆ ನೀವು ಏನು ಇಷ್ಟೊಂದು ಹಣವನ್ನು ಒಂದೊಂದು ಹಳ್ಳಿಗೆ ಖರ್ಚು ಮಾಡಿದ್ದೀರಿ ಆ ಹಣ ನಿಜವಾಗಿ ಅಲ್ಲಿಗೆ ಖರ್ಚಾಗಿದೆಯೇ ಎಂದು ನೋಡಿದರೆ ಅದರಲ್ಲಿ ಮಧ್ಯವರ್ತಿ ಜನಗಳು ಬಹಳವಾಗಿ ಕಮಿಷನ್ ಹೊಡೆದಿದ್ದಾರೆ. ಮಾನ್ಯ ಹಣಕಾಸಿನ ಸಚಿವರು ನಾನು ಹೇಳುವುದನ್ನು ಗಮನವಿಟ್ಟು ಕೇಳಬೇಕು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಬೀದರ್ ಜಿಲ್ಲೆಯ ಹುಮ್ನಾಬಾದ್ ಕ್ಷೇತ್ರದ ರೇಕುಳಿಗಿ ಎಂಬ ಗ್ರಾಮದಲ್ಲಿ ಹರಿಜನರ ಕಾಲೋನಿಯಲ್ಲಿ ಹರಿಜನರಿಗೆ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ಸರ್ಕಾರದ ಬೊಕ್ಕಸದಿಂದ ೨೨ ಸಾವಿರ ರೂಪಾಯಿ ಖರ್ಚುಮಾಡಿ ಒಂದು ಬೋರ್‌ವೆಲ್ ಅಂದರೆ ಕೊಳವೆ ಭಾವಿಯನ್ನು ತೋಡಿಸಿದ್ದಾರೆ. ಆದರೆ ಆ ಭಾವಿಯಿಂದ ಅಲ್ಲಿನ ಹರಿಜನರಿಗೆ ಉಪಯೋಗವಾಯಿತೆ ಎಂದರೆ ಏನೂ ಇಲ್ಲ. ಆ ಊರಿನ ವಿಲೇಜ್ ಪಂಚಾಯ್ತಿ ಛೇರ್ಮನ್ ಒಬ್ಬರು ಆ ಭಾವಿಗೆ ಐ. ಪಿ. ಸೆಟ್‌ನ್ನು ಫಿಕ್ಸ್ ಮಾಡಿಸಿಕೊಂಡಿದ್ದಾರೆ ಆದ್ದರಿಂದ ಈಗ ಅಲ್ಲಿನ ಹರಿಜನ ಹೆಣ್ಣುಮಕ್ಕಳು ಕುಡಿಯುವ ನೀರಿಗೋಸ್ಕರ ಬಹಳ ಕಷ್ಟಪಡುತ್ತಿದ್ದಾರೆ. ಇದನ್ನು ಸರ್ಕಾರದವರು ಗಮನಿಸಿದ್ದಾರೋ ಇಲ್ಲವೋ ಗೊತ್ತಿಲ್ಲ

ಸ್ವಾಮಿ, ಇನ್ನು ಬಾಂಡೆಡ್ ಲೇಬರರ್ಸ್ ಬಗ್ಗೆ ಹೇಳಬೇಕೆಂದರೆ ಅವರನ್ನು ಜೀತಮುಕ್ತರನ್ನಾಗಿ ಮಾಡಿದ್ದೇವೆಂದು ಹೇಳುತ್ತೀರಿ, ಆದರೆ ನಾನು ತಮ್ಮನ್ನು ಕೇಳುತ್ತೇನೆ, ಎಷ್ಟು ಜನರಿಗೆ ತಾವು ಅನುಕೂಲ ಮಾಡಿದ್ದೀರಿ ಎನ್ನುವ ಬಗ್ಗೆ ಏನಾದರೂ ತಮ್ಮಲ್ಲಿ ಅಂಕಿ ಅಂಶಗಳಿವೆಯೆ ?

ಸ್ವಾಮಿ, ಇನ್ನೊಂದು ವಿಷಯ ಹೇಳಬೇಕೆಂದರೆ ಈಗ ೪ ತಿಂಗಳಿಂದ ಫ್ಯಾಮಿಲಿಪ್ಲಾನಿಂಗ್ ಕೆಲಸ, ಎಲೆಕ್ಷನ್ ಕೆಲಸ ಎಂದು ಈ ಲ್ಯಾಂಡ್ ಟ್ರಿಬ್ಯುನಲ್‌ಗಳು ಸರಿಯಾಗಿ ನಡೆಯುತ್ತಿಲ್ಲ ಇಂಥ ಒಂದು ಸ್ಥಿತಿ ಈ ರಾಜ್ಯದಲ್ಲಿ ಬಂದಿದೆ. ತಮ್ಮ ೨೦ ಅಂಶದ ಕಾರ್ಯಕ್ರಮ ಏನಿದೆ ಅದು ಭೂಮಿಯಿಂದ ೨೦ ಅಡಿ ಕೆಳಗೆ ಹೋಗಿದೆ. ಸ್ವಾಮಿ, ನಾನು ಆಗಲೇ ಹೇಳಿದಂತೆ ಬೀದರ್ ಜಿಲ್ಲೆಯ ರೇಕುಳಿಗಿ ಗ್ರಾಮದಲ್ಲಿ ಹರಿಜನರಿಗಾಗಿ ಏನೊಂದು ಕೊಳವೆ ಭಾವಿಯನ್ನು ಸರ್ಕಾರದ ದುಡ್ಡಿನಿಂದ ತೆಗೆಸಿದ್ದೀರಿ ಅದನ್ನು ಇನ್ನು ಮೂರು ದಿವಸದೊಳಗಾಗಿ ಬಿಡಿಸಿಕೊಡುತ್ತೇವೆಂದು ತಾವು ನನಗೆ ಆಶ್ವಾಸನೆ ಕೊಡಬೇಕು. ಈ ಒಂದು ಒಳ್ಳೆಯ ಕೆಲಸವನ್ನಾದರೂ ಮಾಡಿ. ಸ್ವಾಮಿ, ನಾನು ಹೇಳಿರುವ ಈ ಸ್ಟೇಟ್‌ಮೆಂಟ್‌ನಲ್ಲಿ ಏನಾದರೂ ತಪ್ಪಾಗಿದ್ದರೆ ಈ ನನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುತ್ತೇನೆ. ತಮಗೆ ಇಂಥ ಬೋನಾಫೈಡ್ ವಿಷಯದಲ್ಲಿ ನಾವು ಹೇಳಿದ ಮೇಲಾದರೂ ನಂಬಿಕೆ ಬರಬೇಕು. ಬೀದರ್ ಡಿಸ್ಟ್ರಿಕ್ಟ್‌ನಲ್ಲಿ ಯಾರು ಗೌರ್ನಮೆಂಟ್ ವೇಸ್ಟ್ ಲ್ಯಾಂಡ್ ೨ ಎಕರೆ ೪ ಎಕರೆ ಜಮೀನನ್ನು ಇಟ್ಟುಕೊಂಡಿದ್ದಾರೆ ಅಂಥವರನ್ನು ತಾವು ಅದರಿಂದ ಬಿಡಿಸಬೇಕೆಂದಿದ್ದೀರಿ. ಆದರೆ ನಾನು ಕೇಳುತ್ತೇನೆ, ಅಲ್ಲಿ ಇನ್ನೂ ದೊಡ್ಡ ದೊಡ್ಡ ಸಿರಿವಂತರು, ಧನವಂತರು, ಸರಪಂಚರು, ಜಮೀನುಗಳನ್ನು ಇಟ್ಟುಕೊಂಡಿದ್ದಾರೆ; ಮೊದಲು ಅವರನ್ನೆಲ್ಲಾ ಬಿಡಿಸುವವರೆಗೂ ಈ ಬಡವರನ್ನು ಬಿಡಿಸುವುದಿಲ್ಲ ಎಂದು ನಮಗೆ ಆಶ್ವಾಸನೆಯನ್ನು ಕೊಡಬೇಕು. ಏಕೆಂದರೆ ಇವತ್ತು ರೆವಿನ್ಯೂ ಇನ್‌ಸ್ಪೆಕ್ಟರ್‌ಗಳು ಹೋಗಿ ಅಲ್ಪಸ್ವಲ್ಪ ಜಮೀನು ಇಟ್ಟುಕೊಂಡಿರುವ ರೈತರನ್ನು ಆ ಜಮೀನಿನಿಂದ ಕಿತ್ತು ಒಗೆಯುತ್ತಿದ್ದಾರೆ.

ತವಂಗೆ ನಾನು ಬೇಕಾದರೆ ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಕೊಡುತ್ತೇನೆ. ನಾನು ಈ ರೀತಿ ವಾಸ್ತವಾಂಶವನ್ನು ಹೇಳುತ್ತಿದ್ದರೆ ಮಾನ್ಯ ಸಚಿವರು ನಾನು ಎಮೋಷನಲ್ ಆಗಿ ಮಾತನಾಡುತ್ತೇನೆಂದು ಹೇಳಬಹುದು. ಆದರೆ ನಿಜಸಂಗತಿಯನ್ನು ಮುಚ್ಚುಮರೆಯಿಲ್ಲದೆ ಇಲ್ಲಿ ಹೇಳಬೇಕಾಗುತ್ತದೆ ತಪ್ಪು ಮಾಡಿದವರಿಗೆ ಛೀಮಾರಿ ಹಾಕಲೇಬೇಕಾಗುತ್ತದೆ. ನಾವು ಕೊಡುವ ಕನ್‌ಸ್ಟ್ರಕ್ಟೀವ್ ಸಜೆಷನ್‌ಗಳನ್ನು ತಾಳ್ಮೆಯಿಂದ ಕೇಳಿ ಅವುಗಳಿಗೆ ಸೂಕ್ತ ಪರಿಹಾರವನ್ನು ಮಾನ್ಯ ಮಂತ್ರಿಯವರು ಹುಡುಕಬೇಕು.

ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ ಹೇಳಬೇಕೆಂದರೆ ನಾನು ಮಾತನಾಡುವುದು ಇನ್ನೂ ಬಹಳ ಇತ್ತು. ಆದರೆ ಕಾಲಾವಕಾಶ ಇಲ್ಲದೇ ಇರುವುದರಿಂದ ಇದುವರೆಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ತವಂಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೆ ಇವತ್ತಿನ ದಿವಸ ನಮ್ಮ ದೇಶಾದ್ಯಂತ ಒಂದು ಹೊಸ ವಾತಾವರಣ ಸೃಷ್ಟಿಯಾಗಿದೆ. ಒಂದು ಹೊಸ ಯುಗವೇ ಆರಂಭವಾಗಿದೆ ಎಂದು ಹೇಳಬೇಕಾಗಿದೆ. ಮತ್ತೊಂದು ಸಂತೋಷವೇನೆಂದರೆ ಈ ದೇಶವನ್ನು ೩೦ ವರ್ಷಗಳಿಂದ ತನ್ನ ಅಡಿಯಾಳಾಗಿ ಇಟ್ಟುಕೊಂಡಿದ್ದ ಕಾಂಗ್ರೆಸ್ ಸರ್ಕಾರವು ಆಳವಾದ ಸಮುದ್ರದಲ್ಲಿ ಹಡಗು ಮುಳಗಿದಂತೆ ಮುಳುಗುತ್ತಾ ಇದೆ. ಅದು ಸಂಪೂರ್ಣವಾಗಿ ಆದಷ್ಟು ಜಾಗ್ರತೆ ಮುಳಗಲಿ ಎಂದು ಆಶಿಸುತ್ತೇನೆ. ಈ ರೀತಿಯಾಗಿ ಈ ಕಾಂಗ್ರೆಸ್ ಹಡಗು ಮುಳುಗುವುದಕ್ಕೆ ಸಹಾಯ ಮಾಡಿದಂತೆ ಎಲ್ಲ ಜನತೆಗೂ ನನ್ನ ಕೃತಜ್ಞತೆಯನ್ನು ಸಲ್ಲಿಸುವುದಕ್ಕೆ ಇಚ್ಛೆಪಡುತ್ತೇನೆ.

ಈವತ್ತಿನ ದಿವಸ ಮಾನ್ಯ ಅರ್ಥಸಚಿವರು ನಮ್ಮ ಮುಂದೆ ಪೂರಕ ಬೇಡಿಕೆಗಳನ್ನು ಮತ್ತು ತಾತ್ಕಾಲಿಕ ಬೇಡಿಕೆಗಳನ್ನು ಇಟ್ಟಿದ್ದಾರೆ. ಅದನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ.

ಮಾನ್ಯ ಅಧ್ಯಕ್ಷರೆ ಮೊಟ್ಟಮೊದಲನೆಯದಾಗಿ ಸರ್ಕಾರ ಮತ್ತು ಮಂತ್ರಿಗಳಿಗೆ ಸಂಬಂಧಪಟ್ಟಹಾಗೆ ಪೂರಕ ಬೇಡಿಕೆಗಳನ್ನು ಕೊಟ್ಟಿದ್ದಾರೆ. ಇದು ಸದನಕ್ಕೂ ಗೊತ್ತಿದೆ ನಮ್ಮ ದೇಶಕ್ಕೂ ಗೊತ್ತಿದೆ. ಮಾನ್ಯ ರಾಜ್ಯಪಾಲರು ಈ ಸದನವನ್ನು ಉದ್ದೇಶಿಸಿ ಮಾತನಾಡುವಾಗ, ಮೇಲ್‌ಮನೆಯಲ್ಲಿ ನಮ್ಮ ಸ್ನೇಹಿತರು ಆರೋಪಣೆ ಮತ್ತು ವಿರೋಧ ಪಕ್ಷಕ್ಕೆ ಸಂಬಂಧಪಟ್ಟಹಾಗೆ ನಾವು ಸಹ ಪತ್ರಿಕೆಗಳ ಮೂಲಕ ಕೊಟ್ಟಿರ ತಕ್ಕಂಥ ಒಂದು ಹೇಳಿಕೆ ಏನೆಂದರೆ, ಈವತ್ತಿನದಿವಸ ರಾಜ್ಯಪಾಲರಾಗಿರತಕ್ಕಂಥವರು ಒಂದು ರಾಜ್ಯದ ಕಾನ್‌ಸ್ಟಿಟ್ಯೂಷನ್‌ಲ್ ಆಕ್ಟ್ ಪ್ರಕಾರ ಅವರು ದೇಶದ, ಒಂದು ರಾಷ್ಟ್ರದ ಜವಾಬ್ದಾರಿಯುತವಾದ ವ್ಯಕ್ತಿಯಾಗಿದ್ದು ರಾಜ್ಯಾಂಗಬದ್ಧವಾಗಿ ಕೆಲಸವನ್ನು ನಿರ್ವಹಿಸತಕ್ಕಂಥ ವ್ಯಕ್ತಿಯಾಗಿರುತ್ತಾರೆ, ಆದರೆ ನಮ್ಮ ರಾಜ್ಯಪಾಲರು ಕೇವಲ ಒಂದು ಪಕ್ಷದ ಒಬ್ಬ ವ್ಯಕ್ತಿನಿಷ್ಠೆಯನ್ನು ತೋರಿಸುವುದಕ್ಕೋಸ್ಕರವಾಗಿ ಕೇವಲ ಕಾಂಗ್ರೆಸ್ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಮಯದಲ್ಲಿ, ಚುನಾವಣೆಯ ಸಮಯದಲ್ಲಿ ನಾಚಿಕೆಗೇಡಿನ ರೀತಿಯಲ್ಲಿ ಅವರು ವರ್ತಿಸಿ ರಾಜ್ಯಾಂಗಕ್ಕೆ ಚ್ಯುತಿಯನ್ನು ತಂದಿರುತ್ತಾರೆ. ನಮ್ಮ ಅರ್ಥ ಸಚಿವರು ಅವರೂ ಕೂಡ ಇದನ್ನು ಒಪ್ಪುವುದಿಲ್ಲವೆಂದು ತಿಳಿಯುತ್ತೇನೆ. ಏತಕ್ಕೆಂದರೆ ಅವರು ನಿಷ್ಠಾವಂತ ವ್ಯಕ್ತಿಗಳಾಗಿರುತ್ತಾರೆ. ಈವತ್ತು ಮಾನ್ಯ ಮಂತ್ರಿಗಳೇ ಹೇಳಲಿ, ಬೀದರ್‌ನಲ್ಲಿ, ಬೆಳಗಿಯಲ್ಲಿ ನಡೆದಂತ ಒಂದು ಕಾರ್ಯಕ್ರಮಕ್ಕೆ ಆರುಜನ ಮಂತ್ರಿಗಳು ನಾಲ್ಕುಜನ ತುಂಡು ಮಂತ್ರಿಗಳು ಎಲ್ಲರೂ ಸೇರಿ ಹೋಗಿದ್ದರು. ತುಂಡು ಮಂತ್ರಿಗಳು ದೊಡ್ಡ ಮಂತ್ರಿಗಳು ಹೋಗುವ ಕಡೆಯಲ್ಲಿ ಇನ್ನೂ ಕೆಲವರು ಇದ್ದರು. ಅವರು ಹೋಗುವುದಕ್ಕೆ ಸುಮಾರು ೫೦-೬೦ ಕರ್ನಾಟಕ ಸರ್ಕಾರದ ರಾಜ್ಯ ರಸ್ತೆಸಾರಿಗೆ ಬಸ್ಸುಗಳನ್ನು ವೃಕ್ಕಸಾಟಿ ಉಪಯೋಗಿಸಿಕೊಂಡಿದಾರೆ. ಈ ಬಸ್ಸುಗಳ ವ್ಯವಸ್ಥೆಯನ್ನು ಯಾರು ಮಾಡಿದ್ದವರು. ಇದಕ್ಕೆ ಬಾಡಿಗೆಯನ್ನು ಯಾರು ಕೊಟ್ಟವರೆಂದು. ಈವತ್ತಿನ ದಿವಸ ಕೇಳುತ್ತಿದ್ದೇನೆ. ಇದಕ್ಕೆ ಲೆಕ್ಕ ಕೊಡಬೇಕು. ಯಾರೋ ಒಬ್ಬರು ಬರುತ್ತಾರೆಂದರೆ, ಸಂತೆ ನಡೆಸುತ್ತಾರೆಂದರೆ ಅದಕ್ಕೆ ರಾಜ್ಯದ ಬೊಕ್ಕಸದ ಹಣ ಕೊಡಬೇಕೆ. ಯಾವುದೋ ಒಂದು ಪಕ್ಷದ ಕಾರ್ಯಕ್ರಮಕ್ಕೆ ಒಂದು ಪಕ್ಷದ ಹಿತಾಸಕ್ತಿಗಾಗಿ, ಹಣದ ದುರುಪಯೋಗ ಮಾಡಿ ದೇಶದ ಜನತೆಗೆ, ದೇಶಕ್ಕೆ ವಂಚನೆ ಮಾಡಿರತಕ್ಕಂಥ ಮಂತ್ರಿಮಂಡಳಿಕ್ಕೆ ಈವತ್ತಿನ ದಿವಸ ನಮ್ಮಮುಂದೆ ಕಂಳಿತುಕೊಂಡು ಅದಕ್ಕೆ ಹಣ ಬೇಕು ಇದಕ್ಕೆ ಹಣ ಬೇಕೆಂದು ಕೇಳುತ್ತಿದ್ದಾರೆ. ಇದು ನ್ಯಾಯವೇ ಎಂದು ಕೇಳುತ್ತೇನೆ.

ಇನ್ನು ಟೆಲಿಫೋನ್ ಖರ್ಚನ್ನು ತೆಗೆದುಕೊಂಡರೆ, ಯಾರಿಗೆ ಟೆಲಿಫೋನ್ ಮಾಡಿದ್ದು, ಎಷ್ಟೆಷ್ಟು ಸಾರಿ ಟೆಲಿಫೋನ್ ಮಾಡಿದು ಎನ್ನತಕ್ಕಂಥಾದ್ದಕ್ಕೆ ಲೆಕ್ಕ ಕೊಟ್ಟಿಲ್ಲ. ವಿಶ್ವಾಸವಿಟ್ಟಿರುವ ಜನತೆಗಾಗಿ, ಅವರ ಅಭಿವೃದ್ಧಿಗಾಗಿ, ಅವರ ಬಡತನವನ್ನು ತೊಲಗಿಸುವುದಕ್ಕಾಗಿ ಕೊಟ್ಟಿರೆ ಎಂದು ಕೇಳಬೇಕಾಗಿದೆ.

ತಾವು ತಮ್ಮ ಸ್ವಾರ್ಥಕ್ಕಾಗಿ ತಮ್ಮ ಪಕ್ಷದ ಹಿತಕ್ಕಾಗಿ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಒಂದು ಸರ್ವಾಧಿಕಾರವನ್ನು ಜನತೆಯ ಮೇಲೆ ಹೇರುವುದಕ್ಕೋಸ್ಕರವಾಗಿ ಈ ರೀತಿ ದೇಶದ ಜನತೆಯ ದುಡ್ಡನ್ನು ದುರ್ವಿನಿಯೋಗ ಮಾಡುತ್ತಿರುವುದನ್ನು ಕೇಳಬೇಕಾಗಿದೆ. ಒಳ್ಳೆಯದಕ್ಕೆ, ನ್ಯಾಯವಾಗಿ ಹಣವನ್ನು ಅಭಿವೃದ್ಧಿ ಮಾಡುವುದಕ್ಕೆ, ನಮ್ಮ ದೇಶದ ಜನರ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ಕೇಳಿದ್ದರೆ ಅವರ ಪ್ರತಿನಿಧಿಯಾಗಿ ಬಂದಿರತಕ್ಕಂಥ ನಾವು ಸಂತೋಷದಿಂದ ಕೊಡುತ್ತಿದ್ದೆವು. ಆದರೆ ಇವತ್ತಿನದಿವಸ ಪರಿಸ್ಥಿತಿ ಆ ರೀತಿಯಿಲ್ಲ. ಮಾನ್ಯ ಪಾಟೀಲರು ಹೇಳಿದಹಾಗೆ ಗುರುತರವಾದ ಆಪಾದನೆಗಳು ಇವೆ. ೫೦–೬೦ ಸರ್ಕಾರಿ ಬಸ್‌ಗಳನ್ನು ಬೆಂಗಳೂರುನಿಂದ ಬೇರೆ ಕಡೆ ಓಡಿಸಿದ್ದಕ್ಕೆ ಯಾರು ಇದರ ಚಾರ್ಜನ್ನು ವಸೂಲು ಮಾಡಿದ್ದಾರೆ ಏನೇನು ನಡೆದಿದೆ ಎಲ್ಲಕ್ಕೂ ಲೆಕ್ಕವನ್ನು ಕೊಡಿ ಎಂದು ಮಾನ್ಯ ಮಂತ್ರಿಗಳನ್ನು ಈವತ್ತಿನ ದಿವಸ ಕೇಳಬೇಕಾಗಿದೆ. ನೀವು ಈಗ ಲೆಕ್ಕವನ್ನು ಕೊಡದಿದ್ದರೆ ನಿಮ್ಮನ್ನು ಲೆಕ್ಕ ಕೇಳುವ ಕಾಲ ಬರುತ್ತದೆ. ನಾಳೆ ಲೆಕ್ಕ ಸಿಕ್ಕೇ ಸಿಕ್ಕುತ್ತದೆ, ತಪ್ಪಿತಸ್ಥರು ಶಿಕ್ಷೆಗೆ ಗುರಿಯಾಗೇ ಆಗುತ್ತಾರೆ. ಮಾನ್ಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ. ದೇಶದ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಒಂದು ಸರ್ಕಾರ ಈ ರೀತಿ ದುರುಪಯೋಗ ಮಾಡಿಕೊಳ್ಳುವುದಕ್ಕೆ ಯಾರು ಹೇಳಿದ್ದರು ಎಂದು ಜನತೆ ನಾಳೆ ದಿವಸ ಕೇಳಿಯೇ ಕೇಳುತ್ತಾರೆ. ಸಂಜಯಗಾಂಧಿಯವರು ಬೆಂಗಳೂರಿಗೆ ಬಂದಿದ್ದಾಗ ಮೂಲೆ ಮೂಲೆಯಲ್ಲಿ ನೋಡಿದರೆ ಆಕಾಶದೆತ್ತರಕ್ಕೆ ಅವರ ಭಾವಚಿತ್ರ ಒಂದು ನಿಮಿಷದಲ್ಲಿ ತಯಾರಾಯಿತು. ಈವತ್ತಿನದಿವಸ ಕೇಳುತ್ತೇನೆ ಆಕಾಶದೆತ್ತರ ಬೆಳೆದಂತ ವ್ಯಕ್ತಿಯ ಗತಿ ಏನಾಯಿತು. ತಮ್ಮ ಗತಿ ಏನಾಯಿತು ದಯವಿಟ್ಟು ಆಲೋಚನೆ ಮಾಡಿ. ನೀವು ಎಲ್ಲಿಯವರೆಗೆ ಹೋಗಿದ್ದೀರಿ ಎಂದರೆ, ಮುಸ್ಲಿಂ ಧರ್ಮದಲ್ಲಿ ಒಬ್ಬ ಮಹಾ ವ್ಯಕ್ತಿಯು ಸ್ನಾನ ಮಾಡಿದಂತ ನೀರನ್ನು ಶೇಖರಿಸಿ ಮಾರುತ್ತಿದ್ದರು. ಅದೇ ರೀತಿಯಲ್ಲಿ ಸಂಜಯಗಾಂಧಿಯವರು ಸ್ನಾನ ಮಾಡಿದಂತ ನೀರು ಸೋಕಿದರೆ ಪರಮ ಪಾವನರಾಗುತ್ತೇವೆಂದು ಹೇಳುವವರೆಗೂ ನೀವು ಹೋಗಿದ್ದೀರಿ.

ಶ್ರೀ ಎ. ವಿ. ಮುನಿಸ್ವಾಮಿ.—ಆ ನೀರಿನ ವಿಷಯ ಮಾತ್ರ ಬೇಡ ; ಬೇರೆ ವಿಷಯ ಹೇಳಿ.

ಶ್ರೀ ಸಿ. ಬೈರೇಗೌಡ.—ಇದರಲ್ಲಿ ತಪ್ಪಿದ್ದರೆ ಕ್ಷಮಿಸಬೇಕು. ಅವರ ಪಾದದ ಧೂಳಿ ನಮ್ಮ ನೆತ್ತಿಯ ಮೇಲೆ ಬಿದ್ದರೆ ಪಾವನರಾಗುತ್ತೇವೆಂದು ಹೇಳುತ್ತಿದ್ದರು. ಅಲ್ಲದೆ ಅವರ ಪಾದಧೂಳಿಯನ್ನು ಹಣೆಗೆ ಧರಿಸಿದರೆ ಪಾವನರಾಗುತ್ತೇವೆಂದೂ ಸಹ ಹೇಳುತ್ತಿದರು. ಆದರೆ ಇವತ್ತು ತಮ್ಮ ಗತಿ ಏನಾಗಿದೆ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಒಬ್ಬ ಮಾನ್ಯ ಮಂತ್ರಿಯವರು ಅವರ ಕೆರವನ್ನು ಎತ್ತಿಕೊಂಡು ಹೋಗಿದ್ದರು ಎಂಬ ವಿಷಯವನ್ನು ಈ ಸಮಯದಲ್ಲಿ ನಾನು ಜ್ಞಾಪಿಸುತ್ತೇನೆ.

ಅಧ್ಯಕ್ಷರು.—ಒಂದು ಗಾದೆ ಇದೆ. ''ತೋಳ ಹಳ್ಳಕ್ಕೆ ಬಿದ್ದರೆ ಆಳಿಗೊಂದು ಕಲ್ಲು'' ಎಂದು ಹೇಳುತ್ತಾರೆ. ಅದು ಯಾವ ತೋಳವಾದರೂ ಆಗಬಹುದು. ತಾವು ಸ್ವಲ್ಪ ಹಿಡಿತವಾಗಿ, ಸಮಾಧಾನವಾಗಿ ಮಾತನಾಡಿದರೆ ಒಳ್ಳೆಯದು.

ಶ್ರೀ ಎಚ್. ಡಿ. ದೇವೇಗೌಡ.—ಯಾರು ಮಾತನಾಡುವುದಕ್ಕೆ ಹೆದರಿ ಕುಳಿತಿದ್ದರೋ ಅವರೆಲ್ಲಾ ಈಗ ಕಲ್ಲು ಹಾಕುವುದಕ್ಕೆ ಹೊರಟಿದ್ದಾರೆ.

ಶ್ರೀ ಸಿ. ಬೈರೇಗೌಡ.—ತಮ್ಮ ಸ್ವಲ್ಪ ಅವಧಿಯಲ್ಲಿ ತಾವು ಮಾಡಿರತಕ್ಕಂಥ ತಪ್ಪುಗಳನ್ನು ಈಗಲಾದರೂ ಕೂಡ ತಮಗೆ ಪ್ರಜ್ಞೆ ಬಂದು ಸರಿಪಡಿಸಿಕೊಳ್ಳಲಿ ಎನ್ನುವ ಸದ್ಭಾವನೆಯಿಂದ ನಾನು ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇವತ್ತಿನದಿವಸ ಲ್ಯಾಂಡ್ ರೆವಿನ್ಯೂಗೆ ಹಣವನ್ನು ಕೇಳುತ್ತಿದ್ದಾರೆ. ಇವತ್ತು ರಾಜ್ಯದಲ್ಲಿ ಭೂಸುಧಾರಣಾ ಕಾಯಿದೆ ಇದೆ. ಇದಕ್ಕೆ ನಾವು ಸಹ ಶ್ರಮ ಪಟ್ಟಿದ್ದೇವೆ. ಈ ಸದನದ ಸದಸ್ಯರೆಲ್ಲರೂ ಕೂಡ ತಮ್ಮ ಕೈಲಾದಂತ ಕೆಲಸವನ್ನು ಮಾಡುವುದಕ್ಕೆ ಹೊರಟಿದ್ದಾರೆ. ಇವತ್ತಿನ ದಿವಸ ಮಾನ್ಯ ಕಂದಾಯ ಮಂತ್ರಿಯವರು ಇಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ಇಲ್ಲಿಯವರೆಗೂ ಕೂಡ ಅನೇಕ ಕಡೆ ಏನಾಗುತ್ತಿದೆ ಎಂದರೆ ಈ ಭೂ ಸುಧಾರಣಾ ಕಾಯಿದೆಯಲ್ಲಿ ಈ ಬ್ರಹ್ಮ ಬರಹ ಅಂದರೆ ಪಾಣಿ ಬರೆಯತಕ್ಕಂಥ ಜವಾಬ್ದಾರಿಯನ್ನು ಒಬ್ಬ ವಿಲೇಜ್ ಅಕೌಂಟೆಂಟ್‌ಗೆ ತಾವು ಕೊಟ್ಟಿದ್ದೀರಿ. ಇವರು ತಾಲ್ಲೂಕು ಆಫೀಸಿನಲ್ಲಿರತಕ್ಕ ಪುಸ್ತಕಗಳನ್ನೆಲ್ಲಾ ಭೂಮಾಲೀಕರ ಮನೆಗಳಿಗೆ ತೆಗೆದುಕೊಂಡು ಹೋಗಿ ೫-೧೦ ವರ್ಷಗಳ ಹಿಂದೆ ಬರೆದಿರತಕ್ಕಂಥ ಪಾಣಿಗಳನ್ನು ಬದಲಾವಣೆ ಮಾಡಿ ಬರೆದಿದ್ದಾರೆ. ಇದರಿಂದ ಇವತ್ತಿನ ದಿವಸ ಗೇಣೀದಾರರಿಗೆ ರಕ್ಷಣೆ ದೊರಕುವುದಕ್ಕೆ ಬದಲಾಗಿ ಗೇಣೀದಾರರ ಕೊಲೆಯಾಗುತ್ತಿದೆ. ಈ ಒಂದು ಕಾರಣಕ್ಕೋಸ್ಕರ ಅನೇಕ ಕಡೆ ಇವತ್ತು ಗೇಣೀದಾರರ ಪರವಾಗಿ ತೀರ್ಮಾನವಾಗಬೇಕಾಗಿರತಕ್ಕ ಕೇಸುಗಳು

ತೊಡಕಿಗೆ ಸಿಕ್ಕಿ ಅನೇಕ ಗೇಣಿದಾರರಿಗೆ ತೊಂದರೆಯಾಗುತ್ತಿದೆ. ಇದನ್ನು ಸರಿಪಡಿಸಬೇಕು ಎಂದು ಹೇಳುತ್ತೇನೆ. ಈ ಪಾಣಿ ಬರೆಯತಕ್ಕಂಥ ವ್ಯವಸ್ಥೆಯನ್ನು ಸರಿಯಾಗಿ ಮಾಡಬೇಕು. ಈ ವಿಚಾರವನ್ನು ನಾವು ಅನೇಕಸಲ ಹೇಳಿದ್ದರೂ ಇಲ್ಲಿಯವರೆಗೆ ಸರ್ಕಾರದವರು ಇದಕ್ಕೆ ಕೈಹಾಕಿಲ್ಲ.

ಅಧ್ಯಕ್ಷರು.—ಇನ್ನೂ ಮಾತನಾಡುವವರು ೩-೪ ಜನರು ಇದ್ದಾರೆ. ಇವತ್ತಿಗೆ ಇದು ಮುಗಿಯಬೇಕು. ಮಾನ್ಯ ಸದಸ್ಯರು ದಯವಿಟ್ಟು ಬೇಗ ಮುಗಿಸಬೇಕು.

ಶ್ರೀ ಸಿ. ಬೈರೇಗೌಡ.—ಇವತ್ತಿನ ದಿವಸ ಅನೇಕ ಕಡೆ ಈ ಪಹಣಿ ಇಲ್ಲದೇ ಇರತಕ್ಕಂಥ ಕಾರಣದಿಂದ ಭೂ ಮಾಲೀಕರ ಆಟಾಟೋಪವನ್ನು ನಿಲ್ಲಿಸಬೇಕಾದರೆ ಇಂಜೆಕ್ಷನ್ ಬೇಕಾಗುತ್ತದೆ. ಟ್ರಿಬ್ಯುನಲ್ ಮುಂದುಗಡೆ ಪಹಣಿಯನ್ನು ತೆಗೆದು ನೋಡಿದ ತಕ್ಷಣ ಈ ಭೂಮಾಲೀಕರ ಹೆಸರುಗಳೇ ಇರುತ್ತದೆ. ಅನೇಕ ಸಂದರ್ಭಗಳಲ್ಲಿ ೫೦-೬೦ ವರ್ಷಗಳಿಂದ ಗೇಣೀದಾರರ ವಶದಲ್ಲಿರತಕ್ಕಂಥ ಜಮೀನುಗಳೆಲ್ಲಾ ಪಾಣಿ ತೆಗೆದು ನೋಡಿದರೆ ಭೂಮಾಲೀಕರ ಹೆಸರಿನಲ್ಲಿ ಇರುತ್ತವೆ. ಇದೊಂದೇ ನಿದರ್ಶನವಲ್ಲ, ಇಂತಹ ಸಾವಿರಾರು ನಿದರ್ಶನಗಳನ್ನು ನಾನು ತೋರಿಸಿಕೊಡುವುದಕ್ಕೆ ತಯಾರು ಇದ್ದೇನೆ. ನಾವು ಅನೇಕಸಲ ಇದನ್ನೆಲ್ಲಾ ಸರಿಪಡಿಸಬೇಕು ಎಂದು ಹೇಳಿದರೂ, ನಾವು ಹೇಳಿದ್ದೆಲ್ಲಾ "ಗೋರ್ಕಲ್ಲ ಮೇಲೆ ಮಳೆ ಹುಯ್ದಂತೆ ಆಗಿದೆ''. ಇವರು ನಾವು ಒಳ್ಳೆಯ ಭೂಸುಧಾರಣೆಯನ್ನು ಜಾರಿಗೆ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಈ ಭೂ ಸುಧಾರಣೆಗೋಸ್ಕರ ಶ್ರಮಪಟ್ಟಿರತಕ್ಕಂಥವರು ನೀವೊಬ್ಬರೇ ಅಲ್ಲ ನಾವೂ ಕೂಡ ಶ್ರಮ ಪಟ್ಟಿದ್ದೇವೆ. ಈ ಕಡೆಯಲ್ಲಿ ನಿಮಗಿಂತ ಹೆಚ್ಚು ಶ್ರದ್ಧೆ ವಹಿಸಿರತಕ್ಕಂಥ ಜನರೂ ಇದ್ದಾರೆ. ಅನೇಕ ಕಡೆ ಆಗಿರತಕ್ಕಂಥ ಕೆಲವು ಅನ್ಯಾಯಗಳನ್ನು ನೋಡಿದಾಗ ನಿಮಗಿಂತ ಹೆಚ್ಚಾಗಿ ನಮಗೂ ಕೋಪ ಬರುತ್ತದೆ. ಇವತ್ತಿನದಿವಸ ನಾವು ಇದನ್ನು ಸರಿಪಡಿಸಿ ಎಂದು ಪದೇ ಪದೇ ಹೇಳಿದರೂ ಅದರ ಗೋಜಿಗೆ ಹೋಗದೇ ಅನೇಕ ಜನ ಗೇಣೀದಾರರ ತಲೆ ಹೋಗತಕ್ಕಂಥ ಸಂದರ್ಭ ಇವತ್ತು ನಮ್ಮ ದೇಶದಲ್ಲಿ ಮತ್ತು ರಾಜ್ಯದಲ್ಲಿ ಕಾಣುತ್ತಿದೆ ಅದನ್ನು ಸರಿಪಡಿಸಿ ಎಂದರೆ ಅದು ನಿಮ್ಮ ಕೈಯಲ್ಲಿ ಸಾಧ್ಯವಿಲ್ಲವಾಗಿದೆ. ಈ ರೀತಿ ಮೊಸಳೆ ಕಣ್ಣೀರು ಸುರಿಸತಕ್ಕಂಥ ಕಾರ್ಯವನ್ನು ಏತಕ್ಕೆ ಮಾಡಬೇಕು? ನ್ಯಾಯವಾದ ರೀತಿಯಲ್ಲಿ, ಕಾನೂನುಬದ್ಧವಾದ ಕೆಲಸವನ್ನು ನಾವು ಮಾಡುತ್ತೇವೆ, ಮತ್ತು ಗೇಣೀದಾರರಿಗೆ ರಕ್ಷಣೆಯನ್ನು ಕೊಡುತ್ತೇವೆಂದು ಯಾವುದಾದರೂ ಒಂದು ಮಾತನ್ನು ಖಡಾಖಂಡಿತವಾಗಿ ನೀವು ಹೇಳಿದರೆ ಅದನ್ನು ನಾವು ಜನತೆಗೆ ಅದರಲ್ಲೂ ಗೇಣೀದಾರರಿಗೆ ಹೇಳಬಹುದು. ಆದರೆ ಈಗ ಪರಿಸ್ಥಿತಿ ಆ ರೀತಿ ಇಲ್ಲ.

ಶ್ರೀ ಎ. ವಿ. ಮುನಿಸ್ವಾಮಿ.—ಜಕ್ಕಸಂದ್ರ ಗ್ರಾಮದಲ್ಲಿ ಒಬ್ಬ ಹರಿಜನ ಗೇಣೀದಾರನನ್ನು ಒಕ್ಕಲೆಬ್ಬಿಸಿ ಅವನ ಜಮೀನನ್ನು * * * ಇದು ಅನ್ಯಾಯವಲ್ಲವೇ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಮುನಿಸ್ವಾಮಿಯವರು ಮಾನ್ಯ ಸದಸ್ಯರ ಮೇಲೆ ವೈಯಕ್ತಿಕವಾದ ಅಪಾದನೆಯನ್ನು ತಂದಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರಾದ ಮುನಿಸ್ವಾಮಿಯವರು * * * ಎಂಬುದನ್ನು ರುಜುವಾತು ಮಾಡಬೇಕು. ಇದಕ್ಕಾಗಿ ಇವತ್ತೇ ಎನ್‌ಕ್ವೈರಿಗೆ ನೇಮಕ ಮಾಡಿಸಿ. ಇದು ಅವರಿಂದ ರುಜುವಾತು ಆಗದಿದ್ದರೆ ಮಾನ್ಯ ಮುನಿಸ್ವಾಮಿಯವರು ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡುತ್ತಾರೆಯೇ?

ಶ್ರೀ ಸಿ. ಬೈರೇಗೌಡ.—ಮಾನ್ಯ ಕಾಗೋಡು ತಿಮ್ಮಪ್ಪನವರು ಏನು ಸವಾಲು ಹಾಕಿದ್ದಾರೆ ಆ ಸವಾಲಿಗೆ ನಾನೂ ಸಹ ಸಂಪೂರ್ಣವಾಗಿ ಬದ್ಧನಾಗಿದ್ದೇನೆ. ಈಗಲೂ ಕೂಡ ಮಾನ್ಯ ಮುನಿಸ್ವಾಮಿಯವರು ಏನು ಹೇಳುತ್ತಿದ್ದಾರೆ ಅದನ್ನು ರುಜುವಾತು ಮಾಡಲಿ. ಈ ಬಗ್ಗೆ ಎನ್‌ಕ್ವೈರಿ ನಡೆಯಲಿ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇದೆಲ್ಲಾ ರಿಕಾರ್ಡ್‌ನಲ್ಲಿ ಹೋಗಿದೆ. ಮಾನ್ಯ ಸದಸ್ಯರು ಗುರುತರವಾದ ಅಪಾದನೆಯನ್ನು ಮಾಡಿದ್ದಾರೆ. * * * ಇದು ರುಜುವಾತಾದರೆ ಪರವಾಗಿಲ್ಲ, ಇಲ್ಲದಿದ್ದರೆ ಅವರ ಕ್ಷಮೆಯನ್ನು ಬೇಡಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ.—ಹರಿಜನ ಗೇಣೀದಾರನಿಗೆ ತೊಂದರೆಯಾಗಿದೆಯೆಂದು ಹೇಳಿದ್ದಾರೆ. ಈ ಬಗ್ಗೆ ಅವರೇ ವಿವರಣೆ ಕೊಡಲಿ.

* * * word/words expunged as ordered by the Chair.

ಶ್ರೀ ಎ. ವಿ. ಮುನಿಸ್ವಾಮಿ.—ನಾನು ಎನ್‌ಕ್ವೈರಿಗೆ ಸಿದ್ಧವಾಗಿದ್ದೇನೆ. ಈ ಬಗ್ಗೆ ಎನ್‌ಕ್ವೈರಿ ನಡೆಯಲಿ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಮುನಿಸ್ವಾಮಿಯವರು ಏನು ಹೇಳಿದ್ದಾರೆ ಎಂದರೆ * * * ಇದು ಸ್ಪಷ್ಟವಾಗಿ ರಿಕಾರ್ಡ್‌ನಲ್ಲಿ ಹೋಗಿದೆ. ನಾನು ತಮ್ಮ ಮೂಲಕ ಮಾನ್ಯ ಮುನಿಸ್ವಾಮಿಯವರಲ್ಲಿ ಪ್ರಾರ್ಥನೆ ಮಾಡುತ್ತೇನೆ ಅವರು ಈ ಸವಾಲನ್ನು ಒಪ್ಪಿಕೊಳ್ಳಬೇಕು ಮತ್ತು ಮಾನ್ಯ ಸದಸ್ಯರ ಮೇಲಿನ ಆಪಾದನೆಯನ್ನು ರುಜುವಾತು ಮಾಡಬೇಕು. ನಾನು ತಮ್ಮ ಮೂಲಕ ಸರ್ಕಾರದವರನ್ನು ಪ್ರಾರ್ಥನೆ ಮಾಡುತ್ತೇನೆ ಈ ಬಗ್ಗೆ ಎನ್‌ಕ್ವೈರಿಯನ್ನು ನೇಮಿಸಬೇಕು. ಮಾನ್ಯ ಘೋರ್ಪಡೆಯವರು, ಮಾನ್ಯ ಮಲ್ಲಿಕಾರ್ಜುನಸ್ವಾಮಿಯವರು ಇಲ್ಲಿ ಸರ್ಕಾರದ ಪ್ರತಿನಿಧಿಗಳಾಗಿ ಇದ್ದಾರೆ. ಇದು ಬಹಳ ತೀಕ್ಷ್ಣವಾದ ಪ್ರಶ್ನೆ. ನನ್ನ ಅಥವಾ ಮಾನ್ಯ ಮುನಿಸ್ವಾಮಿಯವರ ಪ್ರಶ್ನೆಯಲ್ಲ. ಇದು ಸರ್ಕಾರದ ಮತ್ತು ವಿರೋಧಪಕ್ಷದ ಪ್ರಶ್ನೆ.

3–30 P. M.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷರೇ, ಈ ಸಭೆಯಲ್ಲಿ ಮಾನ್ಯ ಸದಸ್ಯರು ಯಾವ ಭಾಗದವರೇ ಆಗಲಿ ಅಥವಾ ಯಾವ ಪಕ್ಷದವರೇ ಇರಲಿ ಒಬ್ಬ ಸದಸ್ಯರು ಮತ್ತೊಬ್ಬ ಸದಸ್ಯರ ಮೇಲೆ ಆಪಾದನೆ ಮಾಡಿದರೆ ಅದನ್ನು ಕೂಲಂಕಷವಾಗಿ ವಿಚಾರಣೆಮಾಡಿ ಅದರ ನಿಜಾಂಶ ಏನು ಎಂಬುದನ್ನು ಸಭೆಯ ಗಮನಕ್ಕೆ ತರುವುದು ಅವಶ್ಯಕ. ಆದರೆ ಯಾರು ಆಪಾದನೆ ಮಾಡಿದ್ದಾರೆ ಅವರು ರುಜುವಾತು ಮಾಡುತ್ತೇವೆಂದು ಮುಂದೆ ಬರುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ತನಿಖೆ ಮಾಡಿಸಿ ನೋಡಬೇಕು. ಇದು ಏನು ದೊಡ್ಡ ವಿಷಯವಲ್ಲ. ಒಬ್ಬ ಹರಿಜನ ಗೇಣಿದಾರನನ್ನು ಉಚ್ಚಾಟನೆ ಮಾಡಿಸಿ ಮತ್ತೊಬ್ಬರು ಮಾಜಿ ಸಚಿವರಿಗೆ ಕೊಡಿಸಿದಾರೆ ಎಂದು ಹೇಳಿದರೆ ನಿಜವಾಗಿಯೂ ಇದು ಒಂದು ದೊಡ್ಡ ಆಪಾದನೆ. ಆದ್ದರಿಂದ ಇದರ ಬಗ್ಗೆ ವಿಚಾರಣೆ ಮಾಡಿಸಲಿಕ್ಕೆ ಯಾವರೀತಿಯಿಂದಲೂ ತೊಂದರೆಯಿಲ್ಲ. ಇದನ್ನು ವಿಚಾರಣೆ ಮಾಡಿಸಲಿಕ್ಕೆ ಡೆಪ್ಯುಟಿ ಕಮಿಷನರ್ ಇದ್ದಾರೆ. ಅದನ್ನು ವಿಚಾರಣೆ ಮಾಡಿಸಿ ನಾಳೆ ಸಭೆಯ ಮುಂದೆ ಇಡಬೇಕು. ಏತಕ್ಕೆಂದರೆ ಇದು ಬೇಜವಾಬ್ದಾರಿಯ ಮಾತಲ್ಲ. ಒಬ್ಬ ಜವಾಬ್ದಾರಿಯುತ ಸದಸ್ಯರು ಇನ್ನೊಬ್ಬ ಜವಾಬ್ದಾರಿಯುತ ಸದಸ್ಯರ ಮೇಲೆ ಮಾಡಿರತಕ್ಕ ಆಪಾದನೆ. ಇದಕ್ಕೆ ನಾಳೆ ಸರ್ಕಾರ ವಿವರಣೆ ಕೊಡಬೇಕು. ಹಾಗೇನಾದರೂ ಆಪಾದಿತ ಸದಸ್ಯರು ನಿಜವಾಗಿಯೂ ಆಪಾದಿತರಾದರೆ ಸಾರ್ವಜನಿಕ ಜೀವನದಲ್ಲಿ ಜನತೆಯು ಇದರ ಬಗೆ ನಿರ್ಣಯ ಮಾಡಬೇಕು ಜೊತೆಗೆ ಇದನ್ನು ಆಪಾದಿಸಿರುವವರು ಧೃಡೀಕರಿಸಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೇ, ನಾವು ಕೆಲವು ಸಮಯದಲ್ಲಿ ಮಾತನಾಡುವಾಗ ವಿರೋಧಪಕ್ಷದ ಸದಸ್ಯರು ಸ್ಪಷ್ಟವಾಗಿ ಎಷ್ಟೋ ಸ್ಟ್ರಾಂಗ್ ಎಕ್ಸ್‌ಪ್ರೆಷನ್ ಮಾಡಿ ನಾಚಿಕೆಗೇಡಿತನ ಇನ್ನು ಮುಂತಾಗಿ ಹೇಳುತ್ತಾರೆ. ಆದರೆ ಅದನ್ನೆಲ್ಲಾ ದೊಡ್ಡದು ಮಾಡಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಅದರಲ್ಲೂ ಮಾನ್ಯ ಸದಸ್ಯರು ಮಾತನಾಡಿದ್ದು ನಾನು ಸ್ಪಷ್ಟವಾಗಿ ಕೇಳಲಿಲ್ಲ. ಆದರೆ ಅಂಥಾದ್ದನ್ನು ಮಾನ್ಯ ಸದಸ್ಯರು ಹೇಳಿದರೆ ಮತ್ತು ನಡೆದಿದ್ದರೆ ಸರ್ಕಾರ ನೋಡಿಯೇ ನೋಡುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಏನು ಹೇಳುತ್ತೀರಿ ಅದು ಸರಿ. ಆದರೆ ಮಾನ್ಯ ಸದಸ್ಯರು ಹೇಳಿದ್ದನ್ನು ರುಜುವಾತು ಮಾಡುತ್ತೇವೆಂದು ಸವಾಲನ್ನು ಹಾಕುತ್ತಿದ್ದಾರೆ?

[Mr. Chairman (K. M. Rudrappa) in the Chair]

SRI M.Y. GHORPADE – I think we should not exaggerate this small matter. The hon'ble Opposition Members sometimes while speaking in an emotional manner have used much stronger expressions like 'Droha' and 'Nachekegeduthana'. We have tried to take them in a parliamentary spirit and reacted to some extent. We did not insist that all such charges which were far more serious than the honble membes has made should be inquired into.

*** word or words expunged as ordered by the Chair.

SHRI H. D. DEVEGOWDA.—I am putting an hyphothetical argum- ents. Suppose I say that you have taken Rs. 5000 from sombody. Should we not inquire into such a charge?

SRI M. Y. GHORPADE.—What the honble member has said is that some honble member has used his influence in doing something which was not in the interests of a particular individual.

ಚೇರ್‌ಮನ್‌ರವರು.— ಮಾನ್ಯ ಸದಸ್ಯರು ಏನು ಆಪಾದನೆ ಮಾಡಿದ್ದಾರೆ ಅದನ್ನು ರುಜುವಾತು ಪಡಿಸುತ್ತೇನೆಂದು ಹೇಳುತ್ತಿದ್ದಾರೆ.

SRI M. Y. GHORPADE —As I told you, I did not hear exactly what he said. But from the discussion that has taken place, I gather that some insinuation was made by the hon'ble member to the effect; that has been strongly refuted by the other hon'ble member. The matter should end there. In spite of that if hon'ble members this side and that side want Government to look into any specific incident that has taken place, we are always prepared to do so. The matter should end there. We are not only prepared to do it but if you want to know what is our finding, we shall intimate to you. You need not exaggerate the situation. In the course of this debate, hon'ble member Sri V. N. Patil made a particular charge that a particular well meant for Harijan had been otherwise used.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಎಂದರೆ ಅವರು ಹೇಳಿರುವುದನ್ನು ರುಜುವಾತುಪಡಿಸುತ್ತೇನೆಂದು ಮತ್ತೆ ಹೇಳುತ್ತಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.— ಆ ಕಡೆಯ ಮಾನ್ಯ ಸದಸ್ಯರೊಬ್ಬರು ಹರಿಜನರಿಗೆ ಕಟ್ಟಿರತಕ್ಕಂಥ ಭಾವಿಯನ್ನು ಕೆಲವರು ನೀರಾವರಿ ಭಾವಿಯನ್ನಾಗಿ ಉಪಯೋಗ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ಅದನ್ನು ಕೂಡಲೇ ಅಧಿಕಾರಿಗಳಿಗೆ ತಿಳಿಸಿ ಕೂಡಲೇ ಫೋನ್ ಹಚ್ಚಿ ಡೆಪ್ಯುಟಿ ಕಮಿಷನರ ಮುಖಾಂತರ ವಿಚಾರಣೆ ನಡೆಸಿ ಇದರ ಬಗ್ಗೆ ಒಂದು ವರದಿಯನ್ನು ತರಿಸಿಕೊಂಡು ವಿಚಾರ ಮಾಡಿ ಕೂಡಲೇ ಮಾಹಿತಿಯನ್ನು ಸಭೆಗೆ ತಿಳಿಸಲಿಕ್ಕೆ ಪ್ರಯತ್ನ ಮಾಡಿದ್ದೇನೆ. ಇದು ಲ್ಯಾಂಡ್ ರೀ ಫಾರಂಸ್‌ಗೆ ಸಂಬಂಧಪಟ್ಟ ಹಾಗೆ ಒಂದು ಮಾತು ಹೇಳಿದ್ದಾರೆ ಅದನ್ನು ನಾವು ಪ್ರಿಸ್ಟೀಜ್ ಇಸ್ಸ್ಯೂ ಮಾಡುವುದಕ್ಕೆ ಹೋಗಬಾರದು ಅದರ ಬಗ್ಗೆ ಮಾಹಿತಿ ಬೇಕಾದರೆ ನಾನು ತರಿಸಿಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಏನು ಹೇಳಿದ್ದಾರೆಂದರೆ *** ಇದರ ಬಗ್ಗೆ ಸರ್ಕಾರದವರು ವಿಚಾರಣೆ ನಡೆಸಬೇಕು ಎಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದು ಸತ್ಯಾಂಶ ಏನು ಇದೆ ಅದನ್ನು ಸಭೆಯ ಮುಂದೆ ಇಡಬೇಕು. ಅವರು ಏನು ಹೇಳಿದ್ದಾರೆ ಅದು ಬಹಳ ಗುರುತರವಾದ ಆಪಾದನೆ. ಅದನ್ನು ಧೃಢೀಕರಿಸುವುದಕ್ಕೆ ಸಿದ್ಧರಿದ್ದಾರೆಂದು ಹೇಳುತ್ತಾರೆ. ಆದ್ದರಿಂದ ಇದರಲ್ಲಿ ಯಾವೊಬ್ಬ ಸದಸ್ಯರು ತನಿಖೆ ನಡೆಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಸರ್ಕಾರದ ಯಂತ್ರ ಏನು ಇದೆ ಅದರ ಮುಖಾಂತರ ತನಿಖೆ ನಡೆಸಿ ವರದಿಯನ್ನು ಸಭೆಯ ಮುಂದೆ ಇಡಬೇಕು. ಸದಸ್ಯರ ಬಗ್ಗೆ ಈ ಸದನ ಏನು ನಿರ್ಣಯ ತೆಗೆದು ಕೊಳ್ಳಬೇಕೋ ಮುಂದೆ ನೋಡೋಣ. ಯಾವುದೇ ಸದಸ್ಯರು ಸತ್ಯಕ್ಕೆ ದೂರವಾದ ಆಪಾದನೆ ಮಾಡಿ ಮತ್ತೊಬ್ಬ ಸದಸ್ಯರ ತೇಜೋವಧೆ ಮಾಡತಕ್ಕಂಥದ್ದು ಸರಿಯಲ್ಲ.

***word or words expunged as ordered by the chair.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಮಾತನಾಡತಕ್ಕಂಥಾದ್ದು ಸರ್ವೇಸಾಧಾರಣವಾದ ಆರೋಪಣೆ ಮಾಡಿದರೆ ಅದನ್ನು ದೊಡ್ಡದು ಮಾಡತಕ್ಕಂಥಾದ್ದು ಸರಿಯಲ್ಲ ಎಂದು ಹೇಳುವುದನ್ನು ನಾವು ಒಪ್ಪುತ್ತೇವೆ. ಆದರೆ ನಾವು ಕೂಡ ದೊಡ್ಡದು ಮಾಡುವುದಕ್ಕೆ ತಯಾರಿಲ್ಲ. ಆದರೆ ಅದೇ ಸದಸ್ಯರು ತಾವು ಹೇಳಿರುವುದನ್ನು ರುಜುವಾತುಪಡಿಸುತ್ತೇನೆಂದು ಸವಾಲನ್ನು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಸರ್ಕಾರ ತನಿಖೆ ನಡೆಸಿ ವಿವರಗಳನ್ನು ಸಭೆಗೆ ಕೊಡಬೇಕಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಡಕಾಯಿಟ್ಸ್, ಮರ್ಡರ್ಸ್, ಈ ಧಾಟಿಯಲ್ಲಿ ಮಾತನಾಡಿದ ಪದಗಳು......

ಶ್ರೀ ಬಿ. ಪುಟ್ಟಸ್ವಾಮಯ್ಯ.— ಸ್ವಾಮಿ, ಜಾಣತನದಿಂದ ಮಾತನಾಡುವುದಕ್ಕೆ ಹೊರಡಬೇಡಿ.

ಶ್ರೀ ಎಂ. ವೈ. ಘೋರ್ಪಡೆ.—ಅಧ್ಯಕ್ಷರೇ, ಈಗ ನನ್ನ ಪ್ರತಿಕ್ರಿಯೇ ಇಷ್ಟಿದೆ, ಪ್ರಜಾಪ್ರಭುತ್ವದಲ್ಲಿ ಸ್ವಲ್ಪಮಟ್ಟಿಗೆ ಜವಾಬ್ದಾರಿಯಿಂದ ಮಾತನಾಡುವುದು ಒಳ್ಳೆಯದು, ಯಾರ ಮನಸ್ಸಿಗೂ ಧಕ್ಕೆ ಆಗುವ ರೀತಿಯಲ್ಲಿ ಮಾತನಾಡಬಾರದು ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಅದಕ್ಕೆ ನಾನು ಸ್ವಲ್ಪ ನೆನಪು ಮಾಡಿಕೊಟ್ಟೆ. ಯಾವ ಧಾಟಿಯಲ್ಲಿ ವಿರೋಧ ಪಕ್ಷದವರು ಮಾತನಾಡಿದರು ಆ ರೀತಿ ಎಲ್ಲರೂ ಮಾತನಾಡಿದರೆ ಪ್ರಜಾಪ್ರಭುತ್ವದಲ್ಲಿ ಅನಾಹುತವಾಗುತ್ತದೆ ಎನ್ನುವುದನ್ನು ಎಲ್ಲರೂ ಒಪ್ಪುತ್ತಾರೆ. ಆದುದರಿಂದ ನಾವು ಆದಷ್ಟು ಮಟ್ಟಿಗೆ ಇನ್‌ಸಿನ್ಯೂಯೇಷನ್ ಮಾಡುವ ಧಾಟಿಯಲ್ಲಿ ಮಾತನಾಡಬಾರದು. ಮಾನ್ಯ ಸದಸ್ಯರು ಏನು ಪದಗಳನ್ನು ಹೇಳಿದ್ದಾರೆ ಅದನ್ನು ಉದ್ದೇಶಪೂರ್ವಕವಾಗಿ, ಒಬ್ಬರ ಘನತೆ, ಗೌರವಕ್ಕೆ ಧಕ್ಕೆ ತರುವ ರೀತಿಯಲ್ಲಿ ಹೇಳಿಲ್ಲವೆಂದು ತಿಳಿದುಕೊಂಡು ಅವರ ಪರವಾಗಿ ಹಾಗೂ ಸರ್ಕಾರದ ಪರವಾಗಿ ಹೇಳಬಯಸುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅವರು ಇಲ್ಲಿಯೇ ಇದ್ದಾರೆ. ಹಾಗೂ ಅವರು ಚಾಲೆಂಜ್ ತೆಗೆದುಕೊಂಡಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.—ಇದು ಏನೂ ಅಂಥಾ ದೊಡ್ಡ ವಿಷಯವಲ್ಲ, ಇದು ಬಹಳ ಚಿಕ್ಕ ವಿಷಯ ಇದಕ್ಕೆಲ್ಲಾ ನಾವು ಪ್ರಾಶಸ್ತ್ಯ ಕೊಡುವುದು ಬೇಡವೆಂದು ಹೇಳಬಯಸುತ್ತೇನೆ.

SRI KAGODU THIMMAPPA.—The Honble Minister is just trying to avoid a centroversy. Here is a fit case for an enquiry.

SRI M. Y. GHORPADE.—I am prepared to do it. ಈಗ ಅದರ ಬಗ್ಗೆ ಡೆಪ್ಯುಟಿ ಕಮಿಷನರ್‌ರವರಿಂದ ಏನಾದರೂ ರಿಪೋರ್ಟ್ ತರಿಸಬೇಕು ಎಂದು ಹೇಳಿದರೆ ಅದಕ್ಕೆ ನಾನು ಒಪ್ಪುತ್ತೇನೆ. ಅದಕ್ಕೆ ನನ್ನ ಆಕ್ಷೇಪಣೆ ಏನೂ ಇಲ್ಲ. We will get a report as to what the facts are. There are always opinions and opinions will not cease All that the Government can do is, to get the facts if anybody wants.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರೇನು ನೇರವಾದ ಆಪಾದನೆ ಮಾಡಿದ್ದಾರೆ ಅದನ್ನು ಅವರು ಧೃಢೀಕರಿಸಬೇಕು. ಅದು ಅಸತ್ಯವೇ, ಸತ್ಯವೇ ಎನ್ನುವುದನ್ನು ವಿಚಾರಣೆ ಮಾಡಿ ಸಂಬಂಧಪಟ್ಟವರಿಗೆ ಏನು ಶಿಕ್ಷೆ ಕೊಡಬೇಕೋ ಅದನ್ನು ಕೊಡಬೇಕಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ನೀವು ಅದೇ ದಾಟಿಯಲ್ಲಿ ಮಾತನಾಡಿದರೆ ಸಭೆಯನ್ನು ನಡೆಸುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಸ್ನೇಹಿತರಾದ ಮುನಿಸ್ವಾಮಿಯವರು ನನಗಿಂತ ಒಂದು ವರ್ಷ ಹಿರಿಯರು, ಅವರು ನೇರವಾದ ಆಪಾದನೆಯನ್ನು ಮಾಡಿದ್ದಾರೆ. ಈ ಒಂದು ಚಾಲೆಂಜ್‌ಗೆ ಅವರು ಒಪ್ಪಿದ್ದಾರೆ.

ಚೇರ್ಮನ್‌ರವರು.—ಅವರ ಹೇಳಿಕೆಗೂ ನಿಮ್ಮ ಹೇಳಿಕೆಗೂ ಬಹಳ ವ್ಯತ್ಯಾಸವಿದೆ. ಆದುದರಿಂದ ಚರ್ಚೆಗೆ ಅವಕಾಶ ಕೊಡುವುದು ಬೇಡ. Reference to the allegation made by Sri Muniswamaiah should be expunged and it is not to be reported.

ಶ್ರೀ ಸಿ. ಬೈರೇಗೌಡ.-- ಮಾನ್ಯ ಅಧ್ಯಕ್ಷರೇ, ಇದೇ ರೀತಿಯಲ್ಲಿ ಹೌಸಿಂಗ್, ಇದಕ್ಕೂ ಹೆಚ್ಚಿನ ಬೇಡಿಕೆಯನ್ನು ಮಾನ್ಯ ಮಂತ್ರಿಗಳವರು ಕೇಳುತ್ತಿದ್ದಾರೆ. ಇದರಲ್ಲಿ ೩ ತರಹದ ಮನೆಗಳನ್ನು ಕಟ್ಟಿಸುವುದಕೋಸ್ಕರ ಏರ್ಪಾಡು ಮಾಡುತ್ತಿದ್ದಾರೆ. ಇದರಲ್ಲಿ ಈಗಾಗಲೇ ಅನೇಕ ಕಡೆ ಕಟ್ಟಿರತಕ್ಕಂಥ ಜನತಾ ಗೃಹಗಳ ನಿರ್ಮಾಣ ಯೋಜನೆಯ ಪ್ರಕಾರ ಕಟ್ಟಿರತಕ್ಕಂಥ ಮನೆಗಳು ಈಗಾಗಲೇ ನೆಲ ಸಮವಾಗಿವೆಯೆಂದು ನಾವು ಅನೇಕ ಸಂದರ್ಭಗಳಲ್ಲಿ ಸರ್ಕಾರಕ್ಕೆ ಹೇಳಿದ್ದೇವೆ. ನೀವು ಕೊಡತಕ್ಕಂಥ ೨,೫೦೦ ರೂಪಾಯಿಗಳು ಏನಿದೆ ಅದು ಏನೇನೂ ಸಾಕಾಗುವುದಿಲ್ಲ. ಸಮಾಜದ ದುರ್ಬಲ ವರ್ಗದವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ತಾವು ಕಟ್ಟಿಸಿ ಕೊಟ್ಟಿದ್ದರೂ ಅದರಿಂದ ಅವರಿಗೆ ಅನುಕೂಲವಾಗಿಲ್ಲ. ಈಗ ತಾವು ಏನು ದುರ್ಬಲ ವರ್ಗದವರಿಗೆ ಮನೆಗಳನ್ನು ಕಟ್ಟಿಸಿ ಕೊಟ್ಟಿದ್ದೀರಿ ಅದು ಇನ್ನು ಕೇವಲ ಎರಡು ವರ್ಷಗಳಲ್ಲಿ ಬೀಳುವಂಥ ಪರಿಸ್ಥಿತಿಯಲ್ಲಿದೆ. ಆದ್ದರಿಂದ ಈ ಬಾಬಿಗೆ ಹೆಚ್ಚಿನ ಹಣವನ್ನು ಕೊಟ್ಟಿರತಕ್ಕಂಥಾದ್ದು ಸೂಕ್ತವೆಂದು ಹೇಳುತ್ತೇನೆ.

ಇನ್ನು ಫುಡ್ ಅಂಡ್ ಸಿವಿಲ್ ಸಪ್ಲೈಸ್ ಬಗ್ಗೆ ನಾನು ಮತ್ತೊಂದು ಸಾರಿ ಆರೋಪಿಸಿ ಮಾಡಬೇಕಾದಂಥದ್ದು ಇಲ್ಲ. ಈಗಾಗಲೇ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯುಲ್ಲಿಯೂ ವರದಿಯಲ್ಲಿದೆ. ಆ ವರದಿಯಲ್ಲಿ ಕಳೆದ ೧೯೭೧-೭೨ನೇ ಇಸ್ವಿಯಲ್ಲಿ ಬಾಜ್ರಾ ಮತ್ತು ಮೇಜ್ ಈ ಒಂದು ಡೀಲ್‌ನಲ್ಲಿ ನಡೆದಿರತಕ್ಕಂಥ ಸ್ಕ್ಯಾಂಡಲ್ ಬಗ್ಗೆ ಲೆಕ್ಕ ಪತ್ರ ಸಮಿತಿಯು ವರದಿಯನ್ನು ಕೊಟ್ಟಿದೆ. ಆದರೆ ಸರ್ಕಾರದವರು ಮಲಗಿ ನಿದ್ರೆ ಮಾಡುತ್ತಿದ್ದಾರೆ. ಕುಂಭಕರ್ಣನ ಅವಸ್ಥೆ ಸರ್ಕಾರದ್ದು ಆಗಿದೆ, ಇದು ಏತಕ್ಕೆ ಹೀಗೆ ಆಗಿದೆ ಎನ್ನುವದಂತೂ ನನಗೆ ಅರ್ಥವಾಗುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ ಇದರಲ್ಲಿ ಒಬ್ಬರು ಕ್ಯಾಬಿನೆಟ್ ದರ್ಜೆಯ ಮಂತ್ರಿಗಳೂ ಇದ್ದಾರೆ, ಮಾನ್ಯ ಮುಖ್ಯ ಮಂತ್ರಿಗಳವರೂ ಭಾಗವಹಿಸಿದ್ದಾರೆ, ಇವತ್ತು ಅಧಿಕಾರದಲ್ಲಿರತಕ್ಕಂಥವರು ಯಾರೇ ಆಗಿರಲಿ ಅವರು ಕ್ಯಾಬಿನೆಟ್ ದರ್ಜೆಯ ಮಂತ್ರಿಗಳಿರಲಿ, ಅಥವಾ ಇನ್ಯಾವ ಅಧಿಕಾರಿಯೇ ಆಗಿರಲಿ, ಅವರ ಮೇಲೆ ಬಂದಿರತಕ್ಕಂಥ ಆರೋಪಣೆಯಿಂದ ಅವರು ವಿಮುಕ್ತರಾಗಬೇಕಾಗಿ ವಿಚಾರಣೆ ನಡೆಯಬೇಕಾಗಿತ್ತು. ಆದರೆ ಸಾರ್ವಜನಿಕ ಲೆಕ್ಕ ಸಮಿತಿಯ ವರದಿಯಾಗಲಿ ಅಥವಾ ಇನ್ನು ಯಾವುದೇ ವರದಿಯಾಗಲಿ ಅದರ ಪ್ರಕಾರ ಅಧಿಕಾರದಲ್ಲಿರತಕ್ಕವರು ಸಿಕ್ಕಿ ಹಾಕಿಕೊಳ್ಳುವಂಥ ರೀತಿಯಲ್ಲಿ ವರದಿಗಳು ಇದ್ದಾಗ್ಯೂ ಅದನ್ನು ಮರೆತು ಆ ರೀತಿಯಲ್ಲಿ ವರ್ತಿಸಿದರೆ, ಸಾರ್ವಜನಿಕ ಲೆಕ್ಕ ಸಮಿತಿಯ ವರದಿಯ ಅವಶ್ಯಕತೆ ಏನಿದೆ? ಅವರು ಎಷ್ಟು ಶ್ರಮ ಪಟ್ಟು ವರದಿಯನ್ನು ತಯಾರು ಮಾಡುವಂಥಾ ಅವಶ್ಯಕತೆಯಾದರೂ ಏನಿತ್ತು? ಅದರ ಔಚಿತ್ಯವಾದರೂ ಏನಿತ್ತು ಎನ್ನುವ ಬಗ್ಗೆ ಪ್ರಶ್ನೆ ಮಾಡಬೇಕಾಗಿದೆ. ಅದಕ್ಕೂ ಕೂಡ ತಾವು ಹಣವನ್ನು ಯಥೇಚ್ಛವಾಗಿ ಖರ್ಚು ಮಾಡುವುದಕ್ಕೆ ಹೊರಟಿದ್ದೀರಿ. ಸಾರ್ವಜನಿಕ ಲೆಕ್ಕ ಸಮಿತಿಯವರು ಕೊಟ್ಟ ವರದಿಯ ಪ್ರಕಾರ ಕರ್ನಾಟಕ ಸೌತ್ ಕೆನರಾದಲ್ಲಿ ಸುಮಾರು ೨೨ ಲಕ್ಷ ರೂಪಾಯಿಗಳ ಹಣವನ್ನು ಒಬ್ಬ ಕಂಟ್ರ್ಯಾಕ್ಟರ್‌ರವರಿಗೆ ಕೊಟ್ಟು ಒಬ್ಬ ಅಡಿಷನಲ್ ಫಾರೆಸ್ಟ್ ಆಫೀಸರು ಸೇರಿ ಲಪಟಾಯಿಸಿದ್ದಾರೆ. ಇದರಿಂದ ಏನಾಗುತ್ತದೆ ಎಂದರೆ ಈಗ ಅನೇಕ ಕಡೆಯಿಂದ, ದೇಶದ ಜನತೆಯಿಂದ ವಸೂಲಿ ಮಾಡಿದ ಹಣದಿಂದ ಹೇಮಾವತಿ ಪ್ರಾಜೆಕ್ಟ್‌ನ್ನು ಕಟ್ಟುತ್ತೀರಿ ಅದರ ತೂಬಿನಿಂದ ನೀರು ಹರಿದು ಹೋದಂತೆ ನಮ್ಮ ಸರ್ಕಾರದ ದುಡ್ಡು ಹೋಗುತ್ತಿದ್ದರೆ, ಯಾರು ಸರ್ಕಾರದ ಹಣವನ್ನು ಲೂಟಿ ಮಾಡುತ್ತಿದ್ದಾರೆ, ಲಪಟಾಯಿಸುತ್ತಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಮ್ಮಲ್ಲಿ ಸರಿಯಾದ ಒಂದು ವ್ಯವಸ್ಥೆಯಿಲ್ಲ.

ಇನ್ನು ಸಿರಿಕಲ್ಚರಲ್ ಬಗ್ಗೆ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ರೇಷ್ಮೆ ವ್ಯವಸಾಯ ನಮ್ಮ ರಾಜ್ಯದಲ್ಲಿ ಅತಿ ಮುಖ್ಯವಾಗಿರತಕ್ಕಂಥದ್ದು ಅದರಲ್ಲೂ ಸದಾ ಬರಗಾಲಕ್ಕೆ ತುತ್ತಾಗುತ್ತಿರುವಂಥಾ ಪ್ರದೇಶದವರು ಇದನ್ನು ಅವಲಂಬಿಸುತ್ತಿದ್ದಾರೆ. ಈ ರೇಷ್ಮೆ ಇಲಾಖೆಯು ಯಾವ ಕಾರಣದಿಂದಲೋ ಏನೋ ನಷ್ಟವನ್ನು ಅನುಭವಿಸುತ್ತಿದೆ. ಅದಕ್ಕೆ ಇವತ್ತು ರೇಷ್ಮೆ ಇಲಾಖೆಯಲ್ಲಿ ಆಸಕ್ತಿ ಇರತಕ್ಕಂಥ ಮಂತ್ರಿಗಳನ್ನು ಹಾಕಿದ್ದಾರೆ ಅದು ನಿಜಕ್ಕೂ ನನಗೆ ಬಹಳ ಸಂತೋಷ. ಮಾನ್ಯ ಶ್ರೀರಾಮುಲು ರವರು ಕಾಂಗ್ರೆಸ್ ಪಕ್ಷದ ಮಂತ್ರಿಗಳಾಗಿರಬಹುದು ಅವರು ಮಾಡಿರತಕ್ಕಂಥ ಕರ್ತವ್ಯ ನಿಜಕ್ಕೂ ಮೆಚ್ಚತಕ್ಕಂಥದ್ದು. ಅವರಿಗೆ ಈ ರೇಷ್ಮೆ ವ್ಯವಸಾಯದಲ್ಲಿ ಆಸಕ್ತಿ ಇದೆ. ಸಿರಿಕಲ್ಚರಲ್ ಫಿಲೇಚರ್‌ನಿಂದ ಸುಮಾರು ೫೦-೬೦ ಲಕ್ಷ ರೂಪಾಯಿಗಳಿಂದ ೧ ಕೋಟಿ ರೂಪಾಯಿಗಳವರೆಗೆ ನಷ್ಟವಾಗುತ್ತಿದ್ದನ್ನು ತಪ್ಪಿಸಿ ಇವತ್ತಿನ ದಿವಸ ಒಳ್ಳೆಯ ಫಲಿತಾಂಶವನ್ನು ತೋರಿಸಿ ಕೊಡುತ್ತಿದ್ದಾರೆ. ನಾನು ಕೂಡ ಒಬ್ಬ ರೇಷ್ಮೆ ವ್ಯವಸಾಯಗಾರನಾಗಿರುವುದರಿಂದ ನಮ್ಮ ರಾಜ್ಯದಲ್ಲಿ ಸುಮಾರು ೧೫-೨೦ ಲಕ್ಷ ಜನ ಈ ವ್ಯವಸಾಯದ ಮೇಲೆ ಜೀವನ ಮಾಡತಕ್ಕಂಥ ಜನರಿದ್ದಾರೆ. ಇವತ್ತು ರೇಷ್ಮೆ ವ್ಯವಸಾಯವನ್ನು ಅಭಿವೃದ್ಧಿ ಪಡಿಸಿದರೆ

ನಮ್ಮ ರಾಜ್ಯದಲ್ಲಿ ಕನಿಷ್ಟ ಕಾಲು ಭಾಗದಷ್ಟು ನಿರುದ್ಯೋಗವನ್ನು ಬಗೆಹರಿಸುವುದಕ್ಕೆ ಸಾಧ್ಯತೆ ಇದೆ. ಆ ಕೆಲಸ ಇವತ್ತು ಯಥೇಚ್ಚವಾಗಿ ನಡೆಯುತ್ತಿಲ್ಲ. ಅದಕ್ಕೆ ಬೇಕಾಗ ತಕ್ಕಂಥ ನೀರಿಗಾಗಿ ಅವರು ಬೋರ್ ವೆಲ್ಸ್‌ನ್ನು ತೆಗೆಯಲು ಅರ್ಜಿಗಳನ್ನು ಹಾಕಿದ್ದಾರೆ. ಅವರು ಹಣವನ್ನು ಕೇಳುತ್ತಿದ್ದಾರೆ. ತಾವು ಆ ರೇಷ್ಮೆ ವ್ಯವಸಾಯಗಾರರಿಗೆ ಹಣವನ್ನು ಖರ್ಚುಮಾಡಿರಬಹುದು ಆದರೆ ತಾವು ಮಾಡಿರತಕ್ಕಂಥದ್ದು ಸಾಲದೆಂದು ನಾನಾದರೂ ಭಾವಿಸುತ್ತೇನೆ. ಸಮಯದ ಅಭಾವವಿರುವುದರಿಂದ ಹೆಚ್ಚಿನವಿಷಯಗಳನ್ನು ಹೇಳಲು ಆಗದೇ ಇರುವುದರಿಂದ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ.ಎಸ್. ವೀರಭದ್ರಪ್ಪ (ಕೂಡ್ಲಿಗಿ).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಅರ್ಥ ಮಂತ್ರಿಗಳು ಮಂಡಿಸಿರುವ ಹೆಚ್ಚುವರಿ ಬೇಡಿಕೆಯನ್ನು ವಿರೋಧಿಸುತ್ತಾ, ಕೆಲವು ಬೇಡಿಕೆಗಳ ಕುರಿತು ಸಲಹೆಗಳನ್ನು ಕೊಡಬಯಸುತ್ತೇನೆ. ಬೇಡಿಕೆ ಸಂಖ್ಯೆ ೨ರ ಪ್ರಕಾರ ಲೋಕ ಸೇವಾ ಆಯೋಗದಲ್ಲಿ ಹೆಚ್ಚು ಸದಸ್ಯರ ನೇಮಕ ಮಾಡಿದ್ದರಿಂದ ಅವರ ಸಂಬಳಕ್ಕಾಗಿ ಹೆಚ್ಚು ಹಣವನ್ನು ಇಟ್ಟಿದ್ದಾರೆ ಆದರೆ, ಈ ಆಯೋಗದಲ್ಲಿ ಹೆಚ್ಚು ಸದಸ್ಯರನ್ನು ನೇಮಕ ಮಾಡುವ ಅವಶ್ಯಕತೆ ಇತ್ತೇ ಎನ್ನುವುದನ್ನು ಸರ್ಕಾರದವರು ಆಲೋಚನೆ ಮಾಡಬೇಕಿತ್ತು. ಬೇರೆ ರಾಜ್ಯಗಳಲ್ಲಿರುವ ಆಯೋಗಗಳಲ್ಲಿ ಐದು ಜನ ಸದಸ್ಯರುಗಳಿದ್ದರೆ, ನಮ್ಮ ಕರ್ನಾಟಕ ದಲ್ಲಿ ಏಳು ಜನ ಸದಸ್ಯರನ್ನಿಟ್ಟುಕೊಂಡು, ಸಾರ್ವಜನಿಕ ಹಣವನ್ನು ಅನಾವಶ್ಯಕವಾಗಿ ಖರ್ಚು ಮಾಡುತ್ತಿರುವುದು ಬಹಳ ಶೋಚನೀಯವಾಗಿದೆ ಲೋಕಸೇವಾ ಆಯೋಗದ ಸದಸ್ಯರ ಬಗ್ಗೆ ಅನೇಕ ಮಂದಿ ಸದಸ್ಯರು ಮಾತನಾಡಿದ್ದಾರೆ. ಆದರೆ, ಅವರಲ್ಲಿ ಕೆಲವರು ಪ್ರಾಮಾಣಿಕರಿರಬಹುದು ಆದರೆ, ಈ ಆಯೋಗದಲ್ಲಿ ಲಂಚಗುಳಿತನ ಜಾಸ್ತಿಯಾಗಿದೆ ಎನ್ನುವ ಭಾವನೆ ರಾಜ್ಯದ ಅನೇಕ ಜನರಲ್ಲಿ ಮೂಡಿದೆ. ಆದುದರಿಂದ, ಸರ್ಕಾರ ಇದರ ಬಗ್ಗೆ ಹೆಚ್ಚು ಗಮನ ಕೊಟ್ಟು, ಅಂಥದ್ದೇನಾದರೂ ಇದ್ದರೆ, ಅವರ ಸದಸ್ಯತ್ವವನ್ನು ರದ್ದು ಮಾಡಬೇಕು ಮತ್ತು ಅವರ ಸ್ಥಾನಕ್ಕೆ ಪ್ರಾಮಾಣಿಕ ಸದಸ್ಯರನ್ನು ನೇಮಕ ಮಾಡ ಬೇಕೆಂದು ಸೂಚನೆ ಮಾಡಬಯಸುತ್ತೇನೆ ಇದರಲ್ಲಿ ದೂರವಾಣಿ ಖರ್ಚಿಗಾಗಿ ಐದು ಲಕ್ಷ ರೂಪಾಯಿಗಳ ಮಂಜೂರಾತಿ ಕೇಳಿದ್ದಾರೆ ಇದರಲ್ಲಿ ಖಾಸಗಿ ಕರೆಗಳಿಗೆ ಎಷ್ಟು ಖರ್ಚಾಗಿದೆ; ಮತ್ತು ಸರ್ಕಾರದ ಕಾರ್ಯಗಳಿಗೆ ಎಷ್ಟು ಖರ್ಚಾಗಿದೆ ಎನ್ನುವುದನ್ನು ಸರ್ಕಾರದವರು ಪರಿಶೀಲಿಸಬೇಕು. ಒಂದು ವೇಳೆ, ಅವರುಗಳು ಖಾಸಗೀ ಕರೆಗಳಿಗೆ ಹೆಚ್ಚು ಖರ್ಚು ಮಾಡಿದ್ದರೆ, ಅದನ್ನು ವಸೂಲು ಮಾಡಲು ಕ್ರಮ ತೆಗೆದುಕೊಳ್ಳಬೇಕು

ಬೇಡಿಕೆ ಸಂಖ್ಯೆ ೯ರಲ್ಲಿ ಮನೋರಂಜನೆ ತೆರಿಗೆ ವಸೂಲಿಗಾಗಿ ನಾಲ್ಕು ಸ್ಕ್ವಾಡ್‌ಗಳನ್ನು ಮಾಡಿದ್ದಾರೆ. ಬೆಂಗಳೂರಿನಲ್ಲಿ ಎರಡು ಮತ್ತು ಬೆಳಗಾವಿ ಹಾಗೂ ಬೀದರ್‌ನಲ್ಲಿ ಒಂದೊಂದನ್ನು ಮಾಡಿದ್ದಾರೆ ಈ ಸ್ಕ್ವಾಡ್‌ನವರು ಬರುವುದು ಸಾಮಾನ್ಯವಾಗಿ ಚಿತ್ರಮಂದಿರದ ಮಾಲಿಕರುಗಳಿಗೆ ಗೊತ್ತಾಗುತ್ತದೆ ಆಗ ಆ ಚಿತ್ರಮಂದಿರದ ಮಾಲೀಕರು ಇನ್ನೊಂದು ಚಿತ್ರ ಮಂದಿರದ ಮಾಲೀಕರಿಗೆ ದೂರವಾಣಿ ಮಾಡಿ, ಸ್ಕ್ವಾಡ್‌ನವರು ಬರುತ್ತಿದ್ದಾರೆ ಎಂದು ತಿಳಿಸುತ್ತಾರೆ. ಇದರಿಂದ, ಸ್ಕ್ವಾಡ್‌ನವರು ಸರಿಯಾಗಿ ಚೆಕ್ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಇವರ ಕೈಗೆ ಎಲ್ಲೋ ಒಬ್ಬ ಸಿಕ್ಕಬಹುದು ಆದುದರಿಂದ, ನಮ್ಮ ನಿಜ ವಾದ ಉದ್ದೇಶ ಈಡೇರಿರುವುದಿಲ್ಲ ಆದುದರಿಂದ, ನಾನು ಒಂದು ಸಲಹೆಯನ್ನು ಮಾಡಬಯಸುತ್ತೇನೆ. ಅದೇನೆಂದರೆ, ಮನೋರಂಜನೆ ತೆರಿಗೆಯಲ್ಲಿ ಶೇಕಡ ೮೦ ರಷ್ಟು ಸ್ಥಳೀಯ ಸಂಸ್ಥೆಗಳಿಗೆ ಹೋಗುತ್ತದೆ ಆದುದರಿಂದ ಸ್ಥಳೀಯ ಸಂಸ್ಥೆಯ ಅಧಿಕಾರಿಗಳಿಗೂ ಚೆಕ್ ಮಾಡುವ ಅಧಿಕಾರ ಕೊಡಬೇಕು ಇದರಿಂದ, ಮನೋರಂಜನೆಯ ತೆರಿಗೆಯಲ್ಲಿ ಸೋರಿ ಹೋಗುವ ಹಣವನ್ನು ನಿಜವಾಗಿ ತಡೆಹಿಡಿಯುವುದಕ್ಕೆ ಸಾಧ್ಯವೆಂದು ಹೇಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ.—ತೆರಿಗೆಯನ್ನು ಕ್ಯಪಾಸಿಟಿ ಬೇಸಿಸ್ ಮೇಲೆ ಹಾಕಬೇಕೆಂದು ಹೊಸದಾಗಿ ಮಾಡಿದ್ದೇವೆ ಅದರ ಮೇಲೆ ಬೇಕಾದರೆ ಸಲಹೆಗಳೇನಾದರೂ ಇದ್ದರೆ ಕೊಡಿ.

ಶ್ರೀ ಬಿ.ಎಸ್. ವೀರಭದ್ರಪ್ಪ.—ನನ್ನ ಅನುಭವದಲ್ಲಿ ಚಿತ್ರಗಳು ಬಿಡುಗಡೆಯಾದ ಮೊದಲ ದಿನ ಗಳಲ್ಲಿ ಬಹಳ ಓವರ್‌ಲೋಡ್ ಆಗುತ್ತವೆ ಐನೂರು ಜನರನ್ನು ಹಾಕುವ ಕಡೆ ೮೦೦ ಜನರನ್ನು ತುರುಕಿರುತ್ತಾರೆ. ಹೀಗೆ ಅದರಲ್ಲೂ ಕೂಡ ಭ್ರಷ್ಟಾಚಾರ ನಡೆಯುತ್ತದೆ ಆದುದರಿಂದ, ಸ್ಥಳೀಯ ಸಂಸ್ಥೆ ಯವರೂ ಕೂಡ ಆಗಿಂದಾಗ್ಗೆ ಹೋಗಿ ತನಿಖೆ ಮಾಡುವಂಥ ಅಧಿಕಾರ ಕೊಟ್ಟರೆ ಬಹಳ ಒಳ್ಳೆಯದು.

ಬೇಡಿಕೆ ಸಂಖ್ಯೆ ೯ರಲ್ಲಿ ಬೀರು, ಹೆಂಡ ಮತ್ತು ಸಾರಾಯಿ ಮೇಲೆ ವಿದ್ಯಾಭ್ಯಾಸ ಸೆಸ್‌ನ್ನು ಹಾಕಿ ವಸೂಲ್ಮಾಡಿದ್ದಾರೆ ಆದರೆ, ಅವರು ನ್ಯಾಯಾಲಯಕ್ಕೆ ಹೋಗಿ, ಸರ್ಕಾರದ ಮೇಲೆ ಡಿಕ್ರಿ ತರಲಾಗಿದೆ ಎಂದು ನೋಟ್‌ನಲ್ಲಿ ತಿಳಿಸಲಾಗಿದೆ ಈ ಬಗ್ಗೆ ಮಸೂದೆ ತಂದಾಗ, ಇಲಾಖೆಯ ಸಲಹೆಯನ್ನು ಕೇಳಿ

ತೆರಲಾಗಿದೆ ಹಾಗಿದ್ದಾಗಲೂ ಕೂಡ ಅದು ನ್ಯಾಯಾಲಯದ ಮುಂದೆ ಹೋದಾಗ ಅವರು ಸರ್ಕಾರದ ನೀತಿಯನ್ನು ಎತ್ತಿ ಹಿಡಿದಿಲ್ಲ ಆದ್ದರಿಂದ, ಕಾನೂನು ಇಲಾಖೆಯ ಮೇಲೆ ಸರ್ಕಾರದವರು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಎಂಬುದನ್ನು ಆಲೋಚನೆ ಮಾಡಬೇಕು. ಈ ಸೆಸ್‌ನಲ್ಲಿ ಪೇಮೆಂಟ್ ಆಫ್ ಇಂಟರೆಸ್ಟ್ ಆನ್ ಎಜುಕೇಷನ್ ಸೆಸ್ ಒಟ್ಟು ೧,೬೦,೦೦೦ ರೂಪಾಯಿಗಳಾದರೆ, ಒಟ್ಟು ಆದಾಯವೆಷ್ಟು ಎಂಬುದನ್ನು ಸರ್ಕಾರದವರು ತಿಳಿಸಬೇಕೆಂದು ಬಯಸುತ್ತೇನೆ.

ಬೇಡಿಕೆ ಸಂಖ್ಯೆ ೨೨ರಲ್ಲಿ ನಿವೃತ್ತಿ ಹೊಂದಿದ ನೌಕರರಿಗೆ ನಿವೃತ್ತಿ ವೇತನ ಮತ್ತು ಗ್ರಾಚುಯಿಟ್‌ಗಾಗಿ ಹೆಚ್ಚು ಹಣವನ್ನು ಕೇಳಿದ್ದಾರೆ ನನ್ನ ಗಮನಕ್ಕೆ ಬಂದ ಹಾಗೆ ಎರಡು ವರ್ಷಗಳ ಹಿಂದೆ ನಿವೃತ್ತರಾದವರಿಗೆ ಇನ್ನೂ ನಿವೃತ್ತಿ ವೇತನ ಮತ್ತು ಗ್ರಾಚ್ಯುಯಿಟಿ ಬಂದಿಲ್ಲ ಇವುಗಳನ್ನು ಪರಿಶೀಲನೆ ಮಾಡಿ, ಆದಷ್ಟು ಬೇಗ ಮಂಜೂರು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇವತ್ತು ಅವರು ಯಾವುದೇ ವರಮಾನವಿಲ್ಲದೆ ಜೀವನ ಮಾಡುವುದೇ ಕಷ್ಟವಾಗಿದೆ ಆದುದರಿಂದ, ಅಂಥವರಿಗೆ ಅನುಕಂಪ ತೋರಿಸಬೇಕೆಂದು ನಾನು ಸೂಚನೆ ಮಾಡುತ್ತೇನೆ.

ಬೇಡಿಕೆ ಸಂಖ್ಯೆ ೨೭ರಲ್ಲಿ ಬೋರ್‌ವೆಲ್‌ಗಳಿಗಾಗಿ ಸರ್ಕಾರದವರು ಸ್ತುತ್ಯಾರ್ಹವಾದ ಕೆಲಸವನ್ನು ಮಾಡಿದ್ದಾರೆ. ಸರ್ಕಾರದವರು ಸುಮಾರು ಐದು ಸಾವಿರ ಬೋರ್‌ವೆಲ್‌ಗಳನ್ನು ನಮ್ಮ ರಾಜ್ಯದಲ್ಲಿ ತೆಗೆಸಲಿಕ್ಕೆ ಯೋಜನೆ ಮಾಡಿದ್ದಾರೆ ಆದರೆ, ಈ ವಿಚಾರದಲ್ಲಿ ಗ್ರಾಮಾಂತರ ಪ್ರದೇಶಗಳ ಕಡೆ ಕೆಲವು ತೊಂದರೆಗಳಿವೆ ಅಲ್ಲಿರುವ ಅನೇಕ ಪಂಪುಗಳು ಕೆಟ್ಟುಹೋಗಿವೆ ಇಲ್ಲಿಯವರೆಗೆ ಹಾಕಿರುವ ಪಂಪುಗಳಲ್ಲಿ ಸುಮಾರು ಮೂರು ಸಾವಿರ ಪಂಪುಗಳು ಕೆಟ್ಟು ಹೋಗಿದ್ದು, ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ವಿಚಾರದಲ್ಲಿ ಬಹಳ ಅಸ್ತವ್ಯಸ್ತವಾಗಿದೆ. ಆದುದರಿಂದ, ಉತ್ತಮವಾದ ಪಂಪುಗಳನ್ನು ಹಾಕುವುದಲ್ಲದೆ, ಕೆಟ್ಟು ಹೋದ ಪಂಪುಗಳನ್ನು ಆ ಕೂಡಲೆ ರಿಪೇರಿ ಮಾಡಿಸಬೇಕು ಬಾವಿ ತೋಡಿಸಿದರೆ ಏನೂ ಸಾರ್ಥಕವಾಗುವುದಿಲ್ಲ ಆದುದರಿಂದ, ಪಂಪುಗಳ ರಿಪೇರಿಗಾಗಿ ಸರ್ಕಾರದವರು ಹೆಚ್ಚು ಗಮನ ಕೊಡಬೇಕೆಂದು ಪ್ರಾರ್ಥನೆ.

ಡಿಮ್ಯಾಂಡ್ ಸಂಖ್ಯೆ ೨೫ರಲ್ಲಿ, ಏಳು ಲಕ್ಷ ಮನೆ ನಿವೇಶನಗಳನ್ನು ಹಂಚಲಾಗಿದೆ ಎಂದು ಹೇಳಿದ್ದಾರೆ ಕೆಲವು ಕಡೆ ಉತ್ತಮವಾದ ನಿವೇಶನಗಳನ್ನು ಕೊಟ್ಟಿದ್ದಾರೆ ಆದರೆ ಕೆಲವು ಕಡೆಗಳಲ್ಲಿ ಹಳ್ಳ, ದಿಣ್ಣೆ ಮತ್ತು ಗುಡ್ಡ ಪ್ರದೇಶಗಳಲ್ಲೆಲ್ಲಾ ಕೊಟ್ಟಿದ್ದಾರೆ ಇದಕ್ಕಾಗಿ ಕೆಲವು ರೈತರು ಮತ್ತು ಜಮೀನ್ದಾರರು ವಾಲಂಟರಿಯಾಗಿ ಭೂಮಿಯನ್ನು ಕೊಟ್ಟಿದ್ದಾರೆ ಸರ್ಕಾರದವರು ಅವರಿಗೆ ಪರಿಹಾರ ಕೊಡುತ್ತೇವೆ ಎಂದು ಹೇಳಿ, ಇನ್ನೂ ಕೊಟ್ಟಿಲ್ಲ ಇಷ್ಟು ಕಷ್ಟಕಾಲದಲ್ಲಿ ಇನ್ನು ಎರಡು ವರ್ಷದವರೂ ಕೆಲವರಿಗೆ ಪರಿಹಾರ ಕೊಟ್ಟಿಲ್ಲದಿರುವುದು ಬಹಳ ಶೋಚನೀಯ.

ಡಿಮ್ಯಾಂಡ್ ಸಂಖ್ಯೆ ೩೦ರಲ್ಲಿ ಚಲನಚಿತ್ರ ಸಲಹಾ ಸಮಿತಿಯ ಸಿಟಿಂಗ್ ಶುಲ್ಕವನ್ನು ೨೫ ರೂಪಾಯಿಗಳಿಂದ ೭೫ ರೂಪಾಯಿಗಳವರೆಗೆ ಏರಿಸಿದ್ದಾರೆ. ಯಾವ ಕಾರಣದಿಂದ, ಅವರಿಗೆ ಹೆಚ್ಚುವರಿ ಭತ್ಯ ಕೊಡಬೇಕೆಂದು ಮಾಡಲಾಗಿದೆ ಎನ್ನುವ ಬಗ್ಗೆ ಸರ್ಕಾರದವರು ಸಮಜಾಯಿಷಿ ಕೊಡಬೇಕು ಸಿಟ್ಟಿಂಗ್ ಭತ್ಯವನ್ನು ೨೫ ರೂಪಾಯಿಗಳಿಂದ ೭೫ ರೂಪಾಯಿಗಳಿಗೆ ಏರಿಸಿದಾಗ ಏನಾದರೂ ಕಾರಣವಿದ್ದೇ ಇರಬೇಕು. ಶಾಸನ ಸಭಾ ಸದಸ್ಯರಿಗೇ ೩೧ ರೂಪಾಯಿಗಳಿರುವಾಗ, ಚಲನಚಿತ್ರ ಸಲಹಾ ಸಮಿತಿಯವರಿಗೆ ೭೫ ರೂಪಾಯಿಗಳಿಗೆ ಏರಿಸಿರುವುದು, ಸರ್ಕಾರದಲ್ಲಿ ಹಣದ ದುರುಪಯೋಗವಾಗುತ್ತಿದೆ ಎನ್ನುವುದನ್ನು ತೋರಿಸುತ್ತದೆ ಎನ್ನುವುದು ನನ್ನ ಭಾವನೆ.

ಇನ್ನು ವೃದ್ಧಾಪ್ಯ ವೇತನದ ವಿಚಾರ ಈಗಾಗಲೇ ಒಂದು ಲಕ್ಷ ಅರವತ್ತು ಸಾವಿರ ಜನರಿಗೆ ಇದನ್ನು ಕೊಟ್ಟಿದ್ದಾರೆ ಇದರಲ್ಲಿ ಕೆಲವು ಅವ್ಯವಹಾರಗಳು ನಡೆದಿವೆ ಆದರೆ, ಇದು ಸರ್ಕಾರದ ಗಮನಕ್ಕೆ ಬಂದಿಲ್ಲ ಕೆಲವು ಗ್ರಾಮಗಳಲ್ಲಿನ ಪುಢಾರಿಗಳು ಮತ್ತು ಗಣ್ಯವ್ಯಕ್ತಿಗಳು ವೃದ್ಧಾಪ್ಯ ವೇತನ ಪಡೆದವನಿಂದ ಹಣದ ರಸೀದಿಗೆ ರುಜು ಮಾಡಿಸಿ ತಾವೇ ಹಣವನ್ನು ತೆಗೆದುಕೊಂಡಿರುವ ಪ್ರಸಂಗಗಳಿವೆ ಅಷ್ಟೇ ಅಲ್ಲದೆ, ಅಂಚೆ ಕಛೇರಿಯಲ್ಲೂ, ಯಾರದೋ ದಸ್ಕತ್‌ನ್ನು ಯಾರೋ ಮಾಡಿ ಹಣ ಪಡೆದಿರುವ ಪ್ರಸಂಗಗಳೂ ಉಂಟು ಈ ವೃದ್ಧಾಪ್ಯ ವೇತನ ಬಟವಾಡೆಗಾಗಿ ಈಗ ಆರು ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ ಈ ಆರು ಲಕ್ಷ ರೂಪಾಯಿಗಳನ್ನು ಉಳಿಸಲು ನಾನೊಂದು ಸಲಹೆ ಕೊಡುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.— ವೃದ್ಧಾಪ್ಯ ವೇತನದ ಬಟವಾಡೆಯಲ್ಲಿ ತಮ್ಮ ಕ್ಷೇತ್ರದಲ್ಲಿ ಏನಾದರೂ ದುರುಪಯೋಗವಾದ ಪ್ರಸಂಗಗಳಿದ್ದರೆ, ತಾವು ಏತಕ್ಕೆ ಅವುಗಳನ್ನು ಸರ್ಕಾರದ ಗಮನಕ್ಕೆ ತರಲಿಲ್ಲ? ಕಾನೂನು ವಿರುದ್ಧವಾಗಿ ಯಾವುದಾದರೂ ಪ್ರಸಂಗಗಳು ನಡೆಯುತ್ತಿದ್ದರೆ, ನಾವು ತಿದ್ದುಕೊಳ್ಳಲಿಕ್ಕೆ ಸಾಧ್ಯವಿತ್ತು ಆದರೆ, ಇಲ್ಲಿ ಸುಮ್ಮನೆ ಭಾಷಣ ಮಾಡಿದರೆ ಪ್ರಯೋಜನವಿಲ್ಲ ಆದುದರಿಂದ, ಇಂಥಾ ಪ್ರಕರಣಗಳಿದ್ದರೆ, ಅವುಗಳನ್ನು ತಕ್ಷಣ ಸರ್ಕಾರದ ಗಮನಕ್ಕೆ ತರಬೇಕೆಂದು ಪ್ರಾರ್ಥನೆ.

ಶ್ರೀ ಬಿ. ಎಸ್. ವೀರಭದ್ರಪ್ಪ.—ತಮ್ಮ ಸಲಹೆಯನ್ನು ನಾನು ಒಪ್ಪುತ್ತೇನೆ. ಆ ರೀತಿ ನಡೆಯುದಂತೆ ಮತ್ತು ಈ ಆರು ಲಕ್ಷ ರೂಪಾಯಿಗಳನ್ನು ಉಳಿಸಲು ಒಂದು ಸಲಹೆ ಕೊಡುತ್ತೇನೆ ಪ್ರತಿಯೊಂದು ಗ್ರಾಮ ಪಂಚಾಯಿತಿಗೂ ಒಬ್ಬೊಬ್ಬ ವಿಲೇಜ್ ಅಕೌಂಟೆಂಟ್ ಇರುತ್ತಾನೆ ಅವನು ತಿಂಗಳಿಗೊಂದಾವರ್ತಿ ಸಂಬಳವನ್ನು ಪಡೆದುಕೊಳ್ಳಲು ಅವನು ಬರಲೇಬೇಕು ಆಗ ಅವನು, ಈ ವೃದ್ಧಾಪ್ಯ ವೇತನದಾರರಿಗೆ, ಅವರ ಹಣವನ್ನು ಬಟವಾಡೆ ಮಾಡಬಹುದು ಅವನಿಗೆ ಸಾಮಾನ್ಯವಾಗಿ ಅವರೆಲ್ಲರೂ ತಿಳಿದಿರುವುದರಿಂದ, ಆ ಹಣ ದುರುಪಯೋಗಕ್ಕೆ ಅವಕಾಶವಿರುವುದಿಲ್ಲ ಬೇರೆಯವರಿಗೆ ನಿಂಗಮ್ಮ, ಬೋರಮ್ಮ ಯಾರು ಎಂದು ಗೊತ್ತಿರುವುದಿಲ್ಲ ಮಾನ್ಯ ಮಂತ್ರಿಗಳು ನೋಟೀಸ್‌ಗೆ ತರಬೇಕಾಗಿತ್ತು ಎಂದು ಹೇಳಿದರು ನಾವು ಅವರ ನೋಟೀಸ್‌ಗೆ ತರಲಿಕ್ಕೆ ಬಯಸಿದರೂ ಕೂಡ ಊರುಗಳಲ್ಲಿರುವ ಪುಢಾರಿಗಳಿಗೆ ಹೆದರಿ ಜನ ಹೇಳುತ್ತಿರಲಿಲ್ಲ. ನಾನು ಹೇಳುವುದೇನೆಂದರೆ, ವೃದ್ಧಾಪ್ಯವೇತನವನ್ನು ವಿಲೇವಾರಿ ಮಾಡುವುದಕ್ಕೆ ಇಟ್ಟಿರುವ ೬ ಲಕ್ಷ ರೂಪಾಯಿಗಳನ್ನು ಉಳಿಸುವುದಕ್ಕಾಗಿ ಈ ಕೆಲಸವನ್ನು ವಿಲೇಜ್ ಅಕೌಂಟೆಂಟಿಗೆ ಒಪ್ಪಿಸಿದರೆ ಒಳ್ಳೆಯದೆಂದು ಸಲಹೆ ಕೊಡುತ್ತೇನೆ ವೃದ್ಧಾಪ್ಯವೇತನವನ್ನು ಅನೇಕ ಸಲ ಅರ್ಹತೆ ಮತ್ತು ಯೋಗ್ಯತೆ ಇಲ್ಲದಂಥವರಿಗೆ ಕೂಡ ಕೊಡುತ್ತಿದ್ದಾರೆ ಕೆಲವು ಕಡೆ ಆಸ್ತಿ ಇದ್ದಂತವರಿಗೆ ಮಕ್ಕಳು ಇದ್ದಂತವರಿಗೆ ಕೂಡ ಕೊಟ್ಟಿದ್ದಾರೆ ಈ ರೀತಿ ಆಗಿರುವ ಅನ್ಯಾಯವನ್ನು ರದ್ದು ಮಾಡುವುದಕೋಸ್ಕರ ಒಂದು ಕಮಿಟಿ ಮಾಡಿದರೆ ಒಳ್ಳೆಯದೆಂದು ಸೂಚಿಸುತ್ತೇನೆ ಈ ಸಂದರ್ಭದಲ್ಲಿ ಮತ್ತೊಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತೇನೆ ವೃದ್ಧಾಪ್ಯ ವೇತನಕ್ಕಾಗಿ ಒಬ್ಬರಿಗೆ ೪೦ ರೂಪಾಯಿ ಕೊಡುವ ಸರ್ಕಾರ ಗ್ರಾಮಗಳಲ್ಲಿ ಕೆಲಸ ಮಾಡುವ ತಳವಾರರಿಗೆ ೨೦–೩೦ ರೂಪಾಯಿ ಕೊಡುತ್ತಿದೆ ಅವನು ಯಾವ ರೀತಿ ಜೀವನ ಮಾಡಬೇಕು? ಊರೂರುಗಳಿಗೆ ತಿರುಗತಕ್ಕ ವ್ಯಕ್ತಿಗೆ ೨೦_೩೦ ರೂಪಾಯಿ ಕೊಟ್ಟು ಏನೂ ಕೆಲಸ ಇಲ್ಲದೇ ಇರುವವನಿಗೆ ೪೦ ರೂಪಾಯಿ ಕೊಡುತ್ತಿದ್ದೀರಿ ಕಮಿಟಿ ಮೀಟಿಂಗ್‌ನಲ್ಲಿ ಅರ್ಥ ಇಲಾಖೆಯ ಕಾರ್ಯದರ್ಶಿಯವರನ್ನು ಈ ವಿಚಾರದಲ್ಲಿ ಕೇಳಿದ್ದಕ್ಕೆ ಸರ್ಕಾರದಿಂದ ೧೦೦ ರೂಪಾಯಿ ಕೊಡಲಿಕ್ಕೆ ಕಷ್ಟವಾಗುತ್ತದೆ ಎಂದು ಹೇಳಿದರು, ತಳವಾರ ವ್ಯಕ್ತಿ ಬಹಳ ಹಿಂದುಳಿದ ವರ್ಗದ ವ್ಯಕ್ತಿ ಅವನಿಗೆ ಕನಿಷ್ಟ ಪಕ್ಷ ೧೦೦ ರೂಪಾಯಿ ಸಂಬಳವನ್ನಾದರೂ ಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಸೂಚಿಸುತ್ತೇನೆ.

4-00 P.M.

ಡಿಮ್ಯಾಂಡ್ ನಂ. ೩೭ರಲ್ಲಿ ದೇವಸ್ಥಾನಗಳ ಪುನರುಜ್ಜೀವನಕ್ಕೆ ಹಣ ಬೇಕೆಂದು ೧೦ ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ ಈ ಸಂದರ್ಭದಲ್ಲಿ ನಾನು ಸಲಹೆ ಕೊಡುವುದೇನೆಂದರೆ, ನಮ್ಮಲ್ಲಿ ಅನೇಕ ಕಡೆ ಉತ್ತಮವಾದ ದೇವಸ್ಥಾನಗಳು ಇವೆ ಸಾಕಷ್ಟು ಆದಾಯವೂ ಕೂಡ ಇದೆ ಪ್ರತಿಯೊಂದು ಜಿಲ್ಲೆಯಲ್ಲಿ ೧೦–೧೫ ದೇವಸ್ಥಾನಗಳು ಇವೆ ಇವುಗಳಿಂದ ಬರತಕ್ಕ ಆದಾಯ ಸೋರಿಹೋಗುತ್ತದೆ ಈ ವಿಚಾರದಲ್ಲಿ ಆಮೂಲಾಗ್ರವಾದ ಒಂದು ಬಿಲ್‌ನ್ನು ತಂದು ಸರ್ಕಾರ ತನ್ನ ಹತೋಟಿಗೆ ಅವುಗಳ ಆಡಳಿತವನ್ನು ತೆಗೆದುಕೊಂಡು ಆ ಬಗ್ಗೆ ಒಂದು ಕಮಿಟಿ ಮಾಡಿ; ದೇವಸ್ಥಾನಗಳನ್ನು ಅಭಿವೃದ್ಧಿ ಮಾಡಿ ಅಲ್ಲಿಂದ ಬಂದಂತ ಆದಾಯವನ್ನು ಬೇರೆ ದೇವಸ್ಥಾನಗಳಿಗೂ ಉಪಯೋಗ ಮಾಡುವುದು ಒಳ್ಳೆಯದು ಈ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ಹೆಚ್ಚಿಗೆ ಗಮನ ಕೊಡಬೇಕೆಂದು ಹೇಳುತ್ತೇನೆ ಅದರಲ್ಲಿಯೂ ಬಳ್ಳಾರಿ ಜಿಲ್ಲೆಯಲ್ಲಿ ಒಂದು ದೊಡ್ಡ ಸಮಸ್ಯೆ ಏನು ಅಂದರೆ ಅಲ್ಲಿರುವ ದೇವಸ್ಥಾನಗಳು ಮದ್ರಾಸ್ ಸರ್ಕಾರದ ಎಂಡೋಮೆಂಟ್ ಆಕ್ಟ್‌ನೊಳಗೆ ಕೆಲಸ ಮಾಡುತ್ತಿವೆ ನಾವು ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಅಧಿಕಾರಿಗಳು ಹೇಳುತ್ತಾರೆ ಇದನ್ನು ಆರ್ಥಿಕ ಮಂತ್ರಿಗಳು ಪರಿಶೀಲನೆ ಮಾಡಿ, ಸರಿಯಾದ ಒಂದು ವ್ಯವಸ್ಥೆ ಮಾಡಬೇಕೆಂದು ಸೂಚಿಸುತ್ತೇನೆ.

ಇನ್ನು ಡಿಮ್ಯಾಂಡ್ ೪೨ರಲ್ಲಿ ಭೂಸಾರ ರಕ್ಷಣೆ ಬಗ್ಗೆ ನಮ್ಮ ಅರ್ಥ ಮಂತ್ರಿಗಳು ಹೇಳಿದ್ದಾರೆ ೧.೨೦ ಸಾವಿರ ಜನ ಈ ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದಾರೆ; ಬರಗಾಲ ಪ್ರದೇಶದಲ್ಲಿ ಇದರಿಂದ ಬಹಳ ಅನುಕೂಲವಾಗಿದೆ ಎಂದು ಹೇಳಿದ್ದಾರೆ ನಾನು ಕೂಡ ಅವರ ಹೇಳಿಕೆಯನ್ನು ಒಪ್ಪಿಕೊಳ್ಳುತ್ತೇನೆ ಈ

ವ್ಯವಸ್ಥೆಯಿಂದ ರೈತನ ಬೆನ್ನೆಲುಬು ಮುರಿಯುವ ವ್ಯವಸ್ಥೆಯಾಗಿದೆ ಎಂದರೆ ತಪ್ಪಾಗಲಾರದು ಇದರಿಂದ ರೈತನ ಮೇಲೆ ೪.೫೦ ಕೋಟಿ ರೂಪಾಯಿ ಸಾಲ ಹಾಕಿದಂತಾಗುತ್ತದೆ ನಿಜವಾಗಿಯೂ ಇದರಿಂದ ರೈತನಿಗೆ ತುಂಬಾ ಕಷ್ಟವಾಗುತ್ತದೆ ಇವತ್ತು ೮ ಆಣೆ ಸಂದಾಯ ಆಗುತ್ತಿತ್ತು, ರೈತನ ಜಮೀನುಗಳಲ್ಲಿ ಬದುಗಳನ್ನು ಹಾಕಿ ನಂತರ ಅವನಿಂದ ಸಾಲದ ರೂಪದಲ್ಲಿ ವಸೂಲು ಮಾಡುವುದನ್ನು ಬಿಟ್ಟುಬಿಡಬೇಕು ೧೯೭೩ನೇ ಇಸವಿಯಲ್ಲಿ ಬರಗಾಲ ಬಂದಾಗ ಸರ್ಕಾರ ೬೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಇವತ್ತು ೧೩ ಜಿಲ್ಲೆಗಳಲ್ಲಿ ಬರಗಾಲಕ್ಕಾಗಿ ಕೇವಲ ೧೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಇದರಲ್ಲಿ ಬರುವ ೫-೬ ಕೋಟಿ ರೂಪಾಯಿಗಳ ಖರ್ಚನ್ನು ಮುಫತ್ತಾಗಿ ಬಿಟ್ಟುಬಿಡಬೇಕೆಂದು ನಾನು ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

ಡಿಮ್ಯಾಂಡ್ ನಂ. ೪೪ರ ಪ್ರಕಾರ ಒಂದು ಮಾತು ಹೇಳಬೇಕಾದರೆ ಮುಂಚಿನಹಳ್ಳಿ ಗ್ರಾಮದಲ್ಲಿ ಗೋಡೌನ್ ಕಟ್ಟಲಿಕ್ಕೆ ೧೨ ಲಕ್ಷ ರೂಪಾಯಿ ಮಂಜೂರು ಮಾಡಿದ್ದು ಅದು ಒಂದು ವರ್ಷದಲ್ಲಿ ೧೮ ಲಕ್ಷ ರೂಪಾಯಿ ಜಾಸ್ತಿಯಾಯಿತು ೬ ಲಕ್ಷ ರೂಪಾಯಿ ಜಾಸ್ತಿ ಮಾಡಲಿಕ್ಕೆ ಕಾರಣ ಏನು? ಒಂದೇ ವರ್ಷದಲ್ಲಿ ಮುಗಿಸಿದ್ದರೆ ೬ ಲಕ್ಷ ರೂಪಾಯಿ ಉಳಿಯುತ್ತಿತ್ತು ಇಂಥ ಅನೇಕ ಕೆಲಸಗಳು ನಡೆದಿವೆ ಲೋಕೋಪಯೋಗಿ ಇಲಾಖೆಯ ವ್ಯವಹಾರದಿಂದ ಅನೇಕ ಎಸ್ಟಿಮೇಟುಗಳು ಜಾಸ್ತಿಯಾಗಿ ಈ ರಾಜ್ಯದ ಬೊಕ್ಕಸಕ್ಕೆ ತುಂಬಾ ನಷ್ಟವಾಗಿದೆ ಆದುದರಿಂದ ಅದಷ್ಟು ತೀವ್ರವಾಗಿ ಕೆಲಸಗಳನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಮತ್ತೊಂದು ವಿಚಾರ ಏನು ಎಂದರೆ, ಅನೇಕ ಸಲ ಮಂತ್ರಿಗಳು ಪರದೇಶಗಳಿಗೆ ಹೋದಂತ ಸಂದರ್ಭದಲ್ಲಿ ಟಿ.ಎ. ಬಿಲ್‌ನ್ನು ಅಸೆಂಬ್ಲಿಯಲ್ಲಿ ಇಟ್ಟು ಪಾಸುಮಾಡಿ ತೆಗೆದುಕೊಳ್ಳುತ್ತಾರೆ. ಖಾಸಗಿ ಬಸ್ಸುಗಳನ್ನು ಸರ್ಕಾರ ಸ್ವಾಧೀನಕ್ಕೆ ತೆಗೆದುಕೊಂಡು ಒಂದು ವರ್ಷದ ಮೇಲಾದರೂ ಅವರಿಗೆ ೧೦ ಸಾವಿರ ರೂಪಾಯಿ ಕೊಟ್ಟಿದ್ದಾರೆ. ಅವರ ೫-೬ ಕೋಟಿ ರೂಪಾಯಿಗಳ ಬಂಡವಾಳವನ್ನು ತೆಗೆದುಕೊಂಡು ೧೦-೧೨ ಸಾವಿರ ರೂಪಾಯಿಗಳನ್ನು ಕೊಟ್ಟರೆ ಅನ್ಯಾಯ ಅಲ್ಲವೆ? ಅದೂ ಅವರ ಬಸ್ಸಿನಲ್ಲಿ ದುಡಿದುಕೊಂಡು ಈ ರೀತಿ ಮಾಡುವುದು ನಿಜವಾಗಿಯೂ ವಿಷಾದದ ಸಂಗತಿ ತೀವ್ರವಾಗಿ ಇದರ ಕಡೆ ಸರ್ಕಾರ ಗಮನ ಕೊಟ್ಟು ಖಾಸಗಿ ಬಸ್ಸಿನವರಿಗೆ ಕೊಡಬೇಕಾದ ಹಣವನು ಕೂಡಲೇ ಕೊಡುವುದಕ್ಕೆ ಯೋಚನೆ ಮಾಡಬೇಕು. ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ. ವೆಂಕಟಲಿಂಗಯ್ಯ (ಕೃಷ್ಣರಾಜ) —ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಮಂಡಿಸಿರತಕ್ಕ ಬೇಡಿಕೆ ವಿಷಯದಲ್ಲಿ ಒಂದು ಮಾತು ಮುಖ್ಯವಾಗಿ ಹೇಳಬೇಕಾಗಿದೆ. ಅವರು ಈ ಬೇಡಿಕೆಯನ್ನು ಮಂಡಿಸುವುದಕ್ಕೆ ಅವರಿಗೆ ನೈತಿಕ ಶಕ್ತಿ ಇಲ್ಲ ಎಂದು ಹೇಳುತ್ತೇನೆ. ಸಾರ್ವಜನಿಕ ಲೆಕ್ಕ ಸಮಿತಿಯ ವರದಿ ಪ್ರಕಾರ ಈ ಸಭೆಯಲ್ಲಿ ಒಂದು ಅಧಿಕಾರಯುತ ವರದಿ ಇರುವಾಗ, ಅದರಲ್ಲಿ ಕೋಟ್ಯಾಂತರ ರೂಪಾಯಿಗಳು ದುರುಪಯೋಗವಾಗಿ ಅಕ್ರಮಣಗಳು ನಡೆದಿರುವಾಗ ಆದರ ಬಗ್ಗೆ ವಿಚಾರಣೆ ಕೂಡ ಇಲ್ಲದೇ ಇರುವಾಗ, ಈ ಅಕ್ರಮಗಳಿಗೆ ಸರ್ಕಾರ ಬದ್ಧವಾಗಿರುವಾಗ ಈ ಬೇಡಿಕೆಯನ್ನು ಮಂಡಿಸುವುದಕ್ಕೆ ನೈತಿಕ ಶಕ್ತಿ ಇಲ್ಲ. ತಮಿಳು ನಾಡಿನಲ್ಲಿ ನಾಲ್ಕುವರೆ ಲಕ್ಷ ರೂಪಾಯಿ ಆಕ್ರಮದ ಬಗ್ಗೆ ತನಿಖೆ ನಡೆಯುತ್ತಿದೆ. ಕರ್ನಾಟಕ ಸರ್ಕಾರದಲ್ಲಿ ನಾಲ್ಕುವರೆ ಕೋಟಿ ರೂಪಾಯಿಗಳು ದುರುಪಯೋಗವಾಗಿ ಆ ಬಗ್ಗೆ ವರದಿ ಇದ್ದರೂ ಕೂಡ ಯಾವುದೇ ರೀತಿಯ ನ್ಯಾಯಾಂಗ ತನಿಖೆಯಾಗಲಿ ಇಲ್ಲ. ಈ ಆಕ್ರಮಣಗಳಿಗೆ ಸರ್ಕಾರ ಬದ್ಧವಾಗಿರುವುದರಿಂದ ಯಾವುದೇ ಬೇಡಿಕೆಯನ್ನು ಕೇಳುವುದಕ್ಕೆ ನೈತಿಕ ಶಕ್ತಿ ಇಲ್ಲ ಎಂದು ಹೇಳುತ್ತೇನೆ.

ಇವೊತ್ತಿನ ದಿವಸ ಮದ್ರಾಸ್‌ನಲ್ಲಿ ನಾಲ್ಕೂವರೆ ಲಕ್ಷ ರೂಪಾಯಿ ಹಣ ದುರುಪಯೋಗವಾಗಿರುವ ಬಗ್ಗೆ ಎನ್‌ಕ್ವಯಿರಿ ನಡೆಯುತ್ತಿರುವಾಗ, ನಮ್ಮ ರಾಜ್ಯದಲ್ಲಿ ಕೋಟ್ಯಾಂತರ ರೂಪಾಯಿ ಹಣ ದುರುಪಯೋಗವಾಗಿದ್ದರು ಅದರ ಬಗ್ಗೆ ಎನ್‌ಕ್ವಯಿರಿ ನಡೆಯದೇ ಇರುವುದಕ್ಕೆ ಕಾರಣ ಏನು? ಅದನ್ನು ನಾನು ಪ್ರಶ್ನೆ ಮಾಡುತ್ತೇನೆ. ಈ ತಮ್ಮ ಒಂದು ಬೇಡಿಕೆಯಲ್ಲಿ ೨೦ ಪಾಯಿಂಟುಗಳ ಪ್ರೋಗ್ರಾಂ ಪ್ರಕಾರ ಸಿಬ್ಬಂದಿ ವರ್ಗಕ್ಕೆ ದಂಡನ್ನು ಒದಗಿಸಬೇಕು ಎಂದು ಹೇಳುತ್ತಿದ್ದೀರಿ. ನಾವುಗಳು ಈ ಇಪ್ಪತ್ತು ಪಾಯಿಂಟ್ ಪ್ರೋಗ್ರಾಂ ಪ್ರಕಾರ ಜನಗಳಿಗೆ ಅನುಕೂಲವಾಗುತ್ತದೆ, ನಮ್ಮಗಳ ಉದ್ದೇಶ ಸಫಲವಾಗುತ್ತದೆ ಎಂದು ತಿಳಿದುಕೊಂಡಿದ್ದೆವು ನಾವು ತಿಳಿದುಕೊಂಡಿರತಕ್ಕ ಮಟ್ಟಕ್ಕೆ ಈ ಇಪ್ಪತ್ತು ಪಾಯಿಂಟ್ ಪ್ರೋಗ್ರಾಂನಲ್ಲಿ ಅನುಕೂಲ ಆಗಿಲ್ಲ ಎಂದು ಹೇಳುತ್ತೇನೆ. ತಾವು ೨೦ ಪಾಯಿಂಟ್ ಪ್ರೋಗ್ರಾಂ ಪ್ರಕಾರ ಲಕ್ಷಾಂತರ ಸೈಟುಗಳನ್ನು ಬಡ ಜನರಿಗೆ ಹಂಚಿದ್ದೇವೆ ಎಂದು ಹೇಳುತ್ತಿದ್ದೀರಿ. ನೀವು ಕೊಟ್ಟಿರತಕ್ಕ ಸೈಟುಗಳು

ಜನರು ವಾಸ ಮಾಡತಕ್ಕಂತಹ ಸ್ಥಳವಲ್ಲ, ತಾವು ಎಲ್ಲೋ ಗುಂಡ್ಡದಲ್ಲಿ ತೆಗೆದುಕೊಂಡು ಹೋಗಿ ಸೈಟು ಗಳನ್ನು ಕೊಟ್ಟಿದ್ದೀರಿ. ಇದರಿಂದ ಅವನಿಗೆ ಒಳ್ಳೆಯ ಅನುಕೂಲ ದೊರೆತಂತೆ ಆಗಲಿಲ್ಲ ಇನ್ನು ಕುಡಿಯುವ ನೀರಿನ ಬಾವಿಗಳ ಬಗ್ಗೆ ಹೇಳಬೇಕು ಎಂದರೆ, ಎಷ್ಟೋ ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳ ಕೆಲಸವನ್ನು ಪೂರೈಸುವುದಕ್ಕೆ ಆಗಿಲ್ಲ ಇನ್ನು ಎಷ್ಟೋ ಕಡೆಗಳಲ್ಲಿ ಹೊಸದಾಗಿ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಬೇಕಾಗಿದೆ ಈ ಕೆಲಸವನ್ನು ತಮ್ಮಿಂದ ಮಾಡಲಿಕ್ಕೆ ಸಾಧ್ಯವಾಗುತ್ತದೆಯೋ ಎಂದು ನೋಡಿದರೆ, ಅದು ತಮ್ಮ ಕೈಯಿಂದ ಮಾಡಲಿಕ್ಕೆ ಎಂದೆಂದಿಗೂ ಸಾಧ್ಯವಾಗುವುದಿಲ್ಲ ತಾವು ಎಷ್ಟು ಸೈಟುಗಳನ್ನು ಹಂಚಿದ್ದೀರಾ, ಅದರ ಲೆಕ್ಕವನ್ನು ಮಾತ್ರ ಹೇಳುತ್ತೀರಾ ಅಷ್ಟೇ ಹೊರತು, ತಾವು ಕೊಟ್ಟಿರತಕ್ಕ ಸೈಟುಗಳಲ್ಲಿ ಜನರು ವಾಸ ಮಾಡಲಿಕ್ಕೆ ಸಾಧ್ಯವೇ ಇಲ್ಲವೇ ಎನ್ನುವುವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈ ಸೈಟುಗಳನ್ನು ಹಂಚುವ ಬಗ್ಗೆ ಪಟ್ಟಣಗಳನ್ನು ಸೇರಿಸಿಕೊಂಡು ಒಂದು ಸ್ಕೀಮು ಮಾಡಬೇಕಾಗಿತ್ತು ಅದನ್ನು ತಾವು ಮಾಡಲಿಲ್ಲ ಈಗ ಪಟ್ಟಣದಲ್ಲಿ ತಾವು ಎಷ್ಟು ಜನರಿಗೆ ಫ್ರೀ ಸೈಟು ಗಳನ್ನು ಹಂಚಿದ್ದೀರಿ? ಉದಾಹರಣೆಗೆ ಹೇಳಬೇಕು ಎಂದರೆ ಮೈಸೂರಿನಲ್ಲಿ ಎಷ್ಟು ಜನರಿಗೆ ಸೈಟುಗಳನ್ನು ಹಂಚಿದ್ದೀರಿ? ಇವೊತ್ತು ಸಿಟಿಗಳಲ್ಲಿ ದುರ್ಬಲವರ್ಗದವರು ಅನೇಕ ಜನರು ಇದ್ದಾರೆ ಅಂತಹ ಜನಗಳಿಗೆ ತಾವು ಎಷ್ಟು ಸೈಟುಗಳನ್ನು ಹಂಚಿದ್ದೀರಾ? ಒಂದು ಸಾರಿ ಟ್ರಸ್ಟ್ ಬೋರ್ಡಿನವರು ೧೦೦ ರೂಪಾಯಿ ಕೊಟ್ಟರೆ ಸಾಕು, ಒಂದೊಂದು ಫ್ರೀ ಸೈಟು ಕೊಡುತ್ತೇವೆ ಎಂದು ಹೇಳಿ ಅನೌನ್ಸ್ ಮಾಡಿ ಸುಮಾರು ೬-೭ ಲಕ್ಷ ರೂಪಾಯಿ ವಸೂಲು ಮಾಡಬಹುದು. ಈಗ ಅವರು ವಸೂಲು ಮಾಡಿದಂತಹ ಹಣವನ್ನು ಟ್ರಸ್ಟ್ ಬೋರ್ಡಿನವರು ಉಪಯೋಗಿಸಿಕೊಳ್ಳುತ್ತಿದ್ದಾರೆ. ಹಿಂದೆ ಮೈಸೂರಿನಲ್ಲಿ ಮಹಾರಾಜರು ಇದ್ದಂತಹ ಕಾಲದಲ್ಲಿ ಅವರ ಹತ್ತಿರ ಕೆಲಸ ಮಾಡಿದಂತಹ ಬಾಡಿಗಾರ್ಡ್ ಡಿಸ್‌ಮೌಂಟೆಡ್ ಫೋರ್ಸ್ ಅವರಿಗೂ ಮತ್ತು ಅವರ ಕೈಕೆಳಗೆ ಇದ್ದಂತಹ ನೌಕರರಿಗೂ ಸ್ವಲ್ಪ ಜಾಗವನ್ನು ಹಂಚಿಕೊಳ್ಳುವುದಕ್ಕೆ ಕೊಟ್ಟಿದ್ದರು. ಆ ಸೈಟುಗಳಲ್ಲಿ ಮನೆಗಳನ್ನು ಕಟ್ಟಲಿಕ್ಕೆ ಅವಕಾಶ ಕೊಟ್ಟಿಲ್ಲ. ಆ ಜಾಗದಲ್ಲಿ ನಿಮಗೆ ಸೈಟುಗಳನ್ನು ಕೊಡಲಿಕ್ಕೆ ಅವಕಾಶ ಇಲ್ಲ, ಬೇರೆ ಕಡೆ ಕೊಡುತ್ತೇವೆ ಎಂದು ಹೇಳಿ ಅಲ್ಲಿಯ ಬಡ ನೌಕರರು ಮನೆ ಕಟ್ಟಲಿಕ್ಕೆ ಅವಕಾಶ ಸಿಕ್ಕಿಲ್ಲ. ೧೯೫೦ನೇ ಇಸವಿಯಿಂದ ಮೈಸೂರು ಸಿಟಿಯ ಗಾಯತ್ರಿಪುರಂ ಪ್ರದೇಶದಲ್ಲಿ ಅನೇಕ ನೌಕರರು, ಎಕ್ಸ್ ಸರ್ವೀಸ್ ಮೆನ್ ಷೆಡ್ ಹಾಕಿಕೊಂಡು ಮನೆಗಳನ್ನು ಕಟ್ಟಿಕೊಂಡಿದ್ದರು ಅವರು ಕಟ್ಟಿರ ತಕ್ಕ ಮನೆಗಳನ್ನು ಅನ್ ಅಥರೈಸ್ಡ್ ಕನ್‌ಸ್ಟ್ರಕ್ಷನ್ ಇವುಗಳನ್ನು ಎವಿಕ್ಷನ್ ಮಾಡಬೇಕು ಎಂದು ಹೇಳಿ ಬಂತು. ಕೊನೆಗೆ ಸರ್ಕಾರ ಟ್ರಸ್ಟ್ ಬೋರ್ಡಿನವರು ಅವರ ಬಗ್ಗೆ ರೆಗ್ಯುಲರೈಸ್ ಮಾಡಬೇಕು ಎಂದು ಏರ್ಪಾಟು ಮಾಡಿದ್ದಾರೆ. ೧೯೫೦ನೇ ಇಸವಿಯಿಂದ ಅಲ್ಲಿ ಇರತಕ್ಕ ಎಕ್ಸ್ ಸರ್ವೀಸ್‌ಮೆನ್‌ಗಳು ಬಡ ನೌಕರರು ೨೦ ಪಾಯಿಂಟ್ ಪ್ರೋಗ್ರಾಂ ಪ್ರಕಾರ ನಾವು ಕಟ್ಟಿಕೊಂಡಿರತಕ್ಕ ಜಾಗವನ್ನು ಫ್ರೀ ಮಾಡಿಕೊಡಿ ಅದರಿಂದ ನಮಗೆ ಅನುಕೂಲವಾಗುತ್ತದೆ ಎಂದು ಹೇಳಿ ರೆಪ್ರಜೆಂಟೇಷನ್ ಕೊಟ್ಟಿದ್ದಾರೆ ಅದು ಇನ್ನು ಆಗಿಲ್ಲ. ಅದರ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದಾರೆ, ಸಂಬಂಧಪಟ್ಟ ಮಂತ್ರಿಗಳವರ ಗಮನಕ್ಕೆ ತಂದಿದ್ದಾರೆ ಕಡೆಗೆ ಫ್ರೀಯಾಗಿ ಕೊಡುವುದು ಬೇಡ ನಾಮಿನಲ್ ಚಾರ್ಜ್ ಮಾಡಿ ಕೊಡಿ ಎಂದು ಕೇಳಿದರು ಇದುವರೆಗೂ ಟ್ರಸ್ಟ್ ಬೋರ್ಡಿನವರು ತೀರ್ಮಾನ ಮಾಡಿಲ್ಲ. ಅದರ ಬಗ್ಗೆ ಸರ್ಕಾರದ ಗಮನಕ್ಕೆ ತಂದರೂ ತೀರ್ಮಾನ ಮಾಡಿಲ್ಲ ಇವರು ವಿಲೇಜ್‌ನಲ್ಲಿ ಇರತಕ್ಕವರಿಗೆ ಫ್ರೀ ಸೈಟುಗಳನ್ನು ಕೊಡುತ್ತಿದ್ದೇವೆ ಎಂದು ಹೇಳುತ್ತಾರೆ, ಇದರಿಂದ ಪಟ್ಟಣದಲ್ಲಿರ ತಕ್ಕವರಿಗೆ ಏನು ಅನುಕೂಲವಾಗುತ್ತದೆ ಅದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಫ್ಯಾಮಿಲಿ ಪ್ಲಾನಿಂಗ್ ವಿಷಯದ ಬಗ್ಗೆ ಹೇಳಬೇಕು ಎಂದರೆ ದೇಶದಲ್ಲಿ ಎಲ್ಲಾ ಕಡೆಗಳಲ್ಲಿ ಭಯ ಉಂಟಾಗಿದೆ. ಸರ್ಕಾರದಿಂದ ಏನು ಹೇಳುತ್ತಾರೆ ಅಂದರೆ ನಾವು ಯಾರಿಗೂ ಕೂಡ ಒತ್ತಾಯ ಮಾಡುವುದಿಲ್ಲ, ನಾವು ಜನರನ್ನು ಒಪ್ಪಿಸಿ ಅವರೇ ಪ್ರೀತಿಯಿಂದ ಮಾಡಿಸಿಕೊಳ್ಳುವಂತೆ ಮಾಡುತ್ತೇವೆ ಎಂದು ಹೇಳುತ್ತಾರೆ. ನಿಜ ಸ್ಥಿತಿ ನೋಡಿದರೆ ಈ ಫ್ಯಾಮಿಲಿ ಪ್ಲಾನಿಂಗ್ ಜೀಪುಗಳು ಯಾವ ಸಂದರ್ಭ ದಲ್ಲಿ ಬರುತ್ತವೆಯೋ ಎಂದು ಊರು ಬಿಟ್ಟು ಬೇರೆ ಊರುಗಳಿಗೆ ಹೋಗಿ ವಾಸ ಮಾಡತಕ್ಕಂತಹ ಸನ್ನಿವೇಶ ಗಳು ಕಂಡುಬಂದಿದೆ. ಇನ್ನು ಅನೇಕ ಜನರು ಅಂದರೆ ಮುನಿಸಿಪಾಲಿಟಿ ಏರಿಯಾಕ್ಕೆ ಸೇರಿದ ಕೆಲವು ಹಳ್ಳಿಯ ಜನರು ಬಂದು ನೀವು ನಮ್ಮಲ್ಲಿ ಬರಬೇಕು ಇಲ್ಲದೇ ಹೋದರೆ ನಮ್ಮನ್ನು ಜೀಪಿನಲ್ಲಿ ಕರೆದು ಕೊಂಡು ಹೋಗಿ ಅಪರೇಷನ್ ಮಾಡಿಬಿಡುತ್ತಾರೆ ಎಂದು ವಾದಿಸುತ್ತಿದ್ದರು ಅವರಿಗೆ ಎಷ್ಟು ಹೇಳಿದರು ಕೇಳುತ್ತಾ ಇರಲಿಲ್ಲ ಇಂತಹ ಸನ್ನಿವೇಶ ನಡೆದಿದೆ ಇನ್ನೊಂದು ವಿಷಯ ಹೇಳಬೇಕು ಎಂದರೆ ನಾವು ಎಲೆಕ್ಷನ್ ಟೈಮ್‌ನಲ್ಲಿ ಓಡಾಡುತ್ತಾ ಇರುವಾಗ ಒಬ್ಬ ಕೇರಳದ ವ್ಯಕ್ತಿ ಸಿಕ್ಕಿ ಆತನು ತಿಳಿಸಿದ ವಿಷಯ ಏನು ಎಂದರೆ,

ಅವನು ಆರ್.ಟಿ.ಓ. ಆಫೀಸಿಗೆ ಲೈಸನ್ಸ್‌ಗಾಗಿ ಅಪ್ಲೈ ಮಾಡಿದ್ದಕ್ಕೆ ಆತನನ್ನು ಫ್ಯಾಮಿಲಿ ಪ್ಲಾನಿಂಗ್ ಸರ್ಟಿಫಿಕೇಟ್ ತರಲು ತಿಳಿಸಿದರಂತೆ ಆತನು ನನಗೆ ಈಗ ತಾನೇ ಮದುವೆಯಾಗಿದೆ ನಾನು ಫ್ಯಾಮಿಲಿ ಪ್ಲಾನಿಂಗ್ ಸರ್ಟಿಫಿಕೇಟ್ ಯಾವ ರೀತಿ ತರಬೇಕು ಎಂದು ಕೇಳಿದ್ದಕ್ಕೆ ನೀನು ಫ್ಯಾಮಿಲಿ ಪ್ಲಾನಿಂಗ್ ಸರ್ಟಿಫಿಕೇಟ್ ತಂದರೆ ಮಾತ್ರ ಲೈಸೆನ್ಸ್ ಕೊಡುತ್ತೇವೆ ಇಲ್ಲದೇ ಇದ್ದರೆ ಇಲ್ಲ ಎಂದು ತಿಳಿಸಿದರಂತೆ ಕೊನೆಗೆ ಆತ ಅವನ ಸ್ನೇಹಿತನ ಮುಖಾಂತರ ಕೇರಳದಿಂದ ಲೈಸೆನ್ಸ್ ಮಾಡಿಸಿಕೊಂಡಿದ್ದು ತಿಳಿದುಬಂತು. ಎಲ್ಲಾ ಆಫೀಸುಗಳಿಗೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ ಇದನ್ನು ನೋಡಿದರೆ ಫ್ಯಾಮಿಲಿ ಪ್ಲಾನಿಂಗ್ ಎಷ್ಟರಮಟ್ಟಿಗೆ ಆಗುತ್ತದೆ ಎನ್ನುವುದನ್ನು ನಾವು ನೋಡಬಹುದು.

ಇನ್ನು ಜೀತ ಪದ್ಧತಿ ಬಗ್ಗೆ ಹೇಳಬೇಕು ಎಂದರೆ, ಜೀತ ಪದ್ಧತಿ ತೆಗೆದುಹಾಕಿ ಜೀತ ಪದ್ಧತಿಯಿಂದ ವಿಮುಕ್ತಿಮಾಡಿದ್ದೇವೆ ಎಂದು ಹೇಳುತ್ತಾರೆ, ಅವರು ಈಗ ಎಲ್ಲಿ ಇದ್ದಾರೆ ಎಂದು ನೋಡಿದರೆ ಅವರು ಬೀದಿಗಳಲ್ಲಿ ಭಿಕಾರಿಗಳಾಗಿ ಒಂದು ಹೊತ್ತು ಊಟಕ್ಕೆ ಸಿಕ್ಕದೆ ಹಳ್ಳಿಗಳನ್ನು ಬಿಟ್ಟು ವಲಸೆ ಹೋಗಿದ್ದಾರೆ ನಾವು ಎಲೆಕ್ಷನ್ ಸಮಯದಲ್ಲಿ ಜನರನ್ನು ವಿಚಾರಿಸಿದಾಗ ಕೆಲವರು ಮನೆಗಳ ಜಗಲಿ ಮೇಲೆ ಮಲಗಿದ್ದರು, ಅವರನ್ನು ಕಾರಣ ಕೇಳಿದರೆ ಜೀತಪದ್ಧತಿಯಿಂದಾಗಿ ನಮಗೆ ತೊಂದರೆ ಬಂದಿದೆ ಸರ್ಕಾರದವರು ನಮಗೆ ಕೆಲಸ ಒದಗಿಸಿಕೊಡುವುದರಲ್ಲಿ ವಿಫಲರಾಗಿದ್ದಾರೆ, ಈಗ ನಾವು ಎಲ್ಲಿಗೆ ಹೋಗಿ ಯಾವ ಕೆಲಸ ಮಾಡೋಣ ಎಂದು ನಮ್ಮನ್ನೇ ಕೇಳುತ್ತಾರೆ. ಇವೊತ್ತು ನಮಗೆ ಎರಡು ಹೊತ್ತು ಊಟ ಸಿಕ್ಕುವುದು ಕಷ್ಟವಾಗಿದೆ ಎಂದು ಹೇಳುತ್ತಾರೆ.

ಸ್ವಾಮಿ ಇನ್ನು ಡೆಟ್ ರಿಲೀಫ್ ಆಕ್ಟ್ ಎಂದು ಜಾರಿಗೆ ತಂದಿರಿ. ಇದರ ಮುಖ್ಯ ಉದ್ದೇಶ ಬಡವರಿಗೆ, ಅನುಕೂಲವಾಗಲಿ ಎಂಬ ದೃಷ್ಟಿ. ಸ್ವಾಮಿ, ತಾವು ಜಾರಿಗೆ ತಂದಿರುವ ಈ ಕಾನೂನಿನಿಂದ ಬಡವರಿಗೆ ಎಂತಹ ತೊಂದರೆಗಳು ಉಂಟಾಗಿವೆ ಎಂಬುದನ್ನು ತಾವು ನೋಡಿ ಅವರಿಗೆ ಬೇರೆ ಏನಾದರೂ ಒಂದು ಆಲ್ಟರ್‌ನೇಟಿವ್ ಮಾರ್ಗವನ್ನು ಮಾಡಿದ್ದೀರಾ ಎಂದು ನೋಡಿದರೆ, ತಾವು ಏನೂ ಕೂಡ ಮಾಡಿಲ್ಲ: ಇದರ ಬಗ್ಗೆ ತಮಗೆ ಒಂದೆರಡು ಉದಾಹರಣೆಗಳನ್ನು ಕೊಡಬೇಕೆಂದರೆ ಒಂದು ಸಾರಿ ಒಬ್ಬ ಬಡವ ನನ್ನ ಹತ್ತಿರ ಬಂದು ಸ್ವಾಮಿ ಸರ್ಕಾರದವರು ಬ್ಯಾಂಕ್‌ಗಳ ಮುಖಾಂತರ ಬಡವರಿಗೆ ಹಸು, ಎಮ್ಮೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸಾಲವನ್ನು ಕೊಡುತ್ತಾರಂತೆ ಮೊದಲು ನಾವು ೩೦೦-೪೦೦ ರೂಪಾಯಿಗಳನ್ನು ಕಟ್ಟಿದರೆ ಉಳಿದುದನ್ನು ಸರ್ಕಾರದಿಂದ ಕೊಡುತ್ತಾರಂತೆ ಏನು ಮಾಡುವುದು. ಈಗ ಸರ್ಕಾರದವರು ಏನೋ ಒಂದು ಕಾನೂನನ್ನು ತಂದು ನಮಗೆ ಸಾಲ ಹುಟ್ಟದ ರೀತಿಯಲ್ಲಿ ಮಾಡಿದ್ದಾರೆ, ಈಗ ನನಗೆ ಹಣ ಬೇಕಾದರೆ ಗಿರವಿ ಅಂಗಡಿಗಳಿಗೆ ನಮ್ಮ ಮನೆಯ ಒಡವೆಗಳನ್ನು ತೆಗೆದುಕೊಂಡು ಹೋದರೂ ಕೊಡುವುದಿಲ್ಲ, ಕೈ ಸಾಲ ಕೇಳಿದರೆ ಅದಕ್ಕೂ ಕೂಡ ಕೊಡುವುದಿಲ್ಲ, ಇಂಥ ಸಮಯದಲ್ಲಿ ನಾವು ಏನು ಮಾಡಬೇಕೆಂದು ಆ ಬಡ ಮನುಷ್ಯ ನನ್ನನ್ನು ಕೇಳುತ್ತಿದ್ದಾನೆ.

ಆದುದರಿಂದ ಸ್ವಾಮಿ, ನಾನು ಹೇಳುವುದೇನೆಂದರೆ, ತಾವು ಏನು ಒಂದು ಒಳ್ಳೆಯ ಉದ್ದೇಶವನ್ನು ಇಟ್ಟುಕೊಂಡು ಬಡವರಿಗೆ ಅನುಕೂಲವನ್ನು ಮಾಡಬೇಕೆಂದು ಕಾನೂನು ಮಾಡುತ್ತೀರಿ ಅದರಿಂದ ಬಡವರಿಗೆ ಇನ್ನೂ ಹೆಚ್ಚು ಹೆಚ್ಚು ಅನಾನುಕೂಲಗಳೇ ಆಗುತ್ತವೆಯೇ ಹೊರತು ಅನುಕೂಲವಾಗುತ್ತಿಲ್ಲ ಇವತ್ತು ಬಡವರು ಬಹಳ ತೊಂದರೆಗೆ ಸಿಕ್ಕಿದ್ದಾರೆ. ಇದನ್ನು ಹೇಗೆ ನಿವಾರಣೆ ಮಾಡಬೇಕೆನ್ನುವ ಬಗ್ಗೆ ಸರ್ಕಾರದವರು ಯಾವ ಯೋಚನೆಯನ್ನೂ ಕೂಡ ಇದುವರೆಗೂ ಮಾಡಿದಂತೆ ಕಾಣುತ್ತಿಲ್ಲ. ಸ್ವಾಮಿ, ಇವತ್ತಿನದಿವಸ ತಮಗೆ ಇನ್ನೊಂದು ಉದಾಹರಣೆ ಕೊಡಬೇಕೆಂದರೆ, ಒಬ್ಬ ಆಸ್ಪತ್ರೆಯಲ್ಲಿ ಸೀರಿಯಸ್ ಆಗಿದ್ದ, ಅವನಿಗೆ ಔಷಧಿ ತರಲು ಅವರ ಮನೆಯವರಿಗೆ ಕೈಯಲ್ಲಿ ದುಡ್ಡಿಲ್ಲದೆ ಕೊನೆಗೆ ಡಿಸ್‌ಛಾರ್ಜ್ ಮಾಡಿಸಿಕೊಂಡು ಬಂದರು ಅಲ್ಲಿಂದ ಹೊರಗೆ ಬಂದ ಮೇಲೆ ಆ ರೋಗಿ ಸತ್ತಿದ್ದಾನೆ.

ಇನ್ನು ಮರ ಕಡಿಯುವ ಬಗ್ಗೆ ಹೇಳಬೇಕೆಂದರೆ, ಯಾರಾದರೂ ಮರವನ್ನು ಕಡಿಯಬೇಕಾದರೆ ಅವರು ಸರ್ಕಾರದಿಂದ ಪರ್ಮಿಷನ್ ತೆಗೆದುಕೊಂಡು ಕಡಿಯಬೇಕೆಂದು ಮಾಡಿದಿರಿ. ಎಷ್ಟೋ ಜನ ರೈತರು ತಮ್ಮ ಜಮೀನುಗಳಲ್ಲಿ ನೂರಾರು ಮರಗಳನ್ನು ತಮ್ಮ ಸ್ವಂತ ಉಪಯೋಗಕ್ಕೋಸ್ಕರ ಬೆಳೆಸಿಕೊಂಡಿದ್ದರು. ಇವತ್ತು ಅವರು ತಾವು ಬೆಳೆಸಿದ ಮರಗಳು ಎಂದು ಧೈರ್ಯವಾಗಿ ಕಡಿಯುವಂತಿಲ್ಲ ಅದೇರೀತಿ ಇನ್ನೂ ಕೆಲವರು ತಮ್ಮ ಹೊಟ್ಟೆಪಾಡಿಗಾಗಿ ಕಾಡಿಗೆ ಹೋಗಿ ಸೈಕಲ್ ಮೇಲೆ, ತಲೆಯಮೇಲೆ ಸೌದೆಯನ್ನು ಕಡಿದು ಹೊತ್ತುಕೊಂಡು ಬಂದು ಪೇಟೆಯಲ್ಲಿ ಮಾರಿ ಜೀವನ ಮಾಡುತ್ತಿದ್ದರು. ತಾವು ಈ ಕಾನೂನು ಮಾಡಿದ್ದರಿಂದ ಈಗ ಅವರಿಗೆ ಬಹಳ ತೊಂದರೆಯಾಗಿದೆ. ಅವರು ಯಾರ ಹತ್ತಿರ ಹೋಗಿ ಪರ್ಮಿಷನ್ ತರ

ಬೇಕು? ತಾವು ಯಾವುದೇ ಒಂದು ಕಾರ್ಯಕ್ರಮವನ್ನು ಜಾರಿಗೆ ತಂದರೂ ಕೂಡ ಅದರಿಂದ ಒಳ್ಳೆಯ ಪರಿಣಾಮವಾಗುವ ಬದಲು ಕೆಟ್ಟ ಪರಿಣಾಮವೇ ಆಗುತ್ತಿದೆ. ಇದಕ್ಕೆ ಮುಖ್ಯ ಕಾರಣ ಎಂದರೆ ತಾವು ಯಾವುದೇ ಕಾನೂನನ್ನಾಗಲಿ ಪ್ರಾಕ್ಟಿಕಲ್ ಆಗಿ ನೋಡಿ ಜಾರಿಗೆ ತರದೇ ಇರುವುದೇ ಆಗಿದೆ.

ಸ್ವಾಮಿ, ತಾವು ಈ ೨೦ ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತರುವಾಗ ಅಧಿಕಾರಿಗಳ ಮುಖಾಂತರ ಮಾಡಿಸುತ್ತೀರಿ. ಆ ಅಧಿಕಾರಿಗಳು ತಮಗೆ ಪ್ರೋಗ್ರೆಸ್ ಕೊಡಬೇಕಾಗಿರುವುದರಿಂದ ವಿಧಿಯಿಲ್ಲದೆ ಜನಗಳ ಮೇಲೆ ಒತ್ತಾಯವಾಗಿ ಕಾನೂನನ್ನು ಅವರು ಜಾರಿಗೆ ತರಲೇ ಬೇಕಾಗುತ್ತದೆ.

ಸ್ವಾಮಿ ಇನ್ನು ಸ್ಟೇಷನರಿ ಮತ್ತು ಪ್ರಿಂಟಿಂಗ್ ಬಗ್ಗೆ ಹೇಳಬೇಕೆಂದರೆ ಜರ್ಮನ್ ಏಡ್‌ನಿಂದ ಟೆಕ್ಸ್ಟ್‌ಬುಕ್ ಪ್ರಿಂಟಿಂಗ್ ಪ್ರೆಸ್ಸನ್ನು ತೆರೆಯುಬೇಕೆಂದು ಹೇಳಿದ್ದೀರಿ. ಇದು ಸುಮಾರು ೮-೧೦ ವರ್ಷಗಳಿಂದ ಇದ್ದರೂ ಇದರಿಂದ ಪೂರ್ತಿಯಾಗಿ ಕೆಲಸಮಾಡುವುದಕ್ಕೆ ಅಂದರೆ ಅದರ ಉಪಯೋಗವನ್ನು ನೀವು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಈ ರೀತಿ ಆಗುವುದಕ್ಕೆ ಯಾರು ಕಾರಣರು ಎಂಬುದನ್ನು ತಾವು ಕಂಡು ಹಿಡಿದು ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಸ್ವಾಮಿ, ಇನ್ನು ಸ್ಕೂಲ್ ಬಿಲ್ಡಿಂಗ್ಸ್ ವಿಷಯದಲ್ಲಿ ಹೇಳಿದ್ದೀರಿ. ವಿದ್ಯಾ ಸಂಸ್ಥೆಗಳಿಗೂ ಕೂಡ ಪಿ. ಡಬ್ಲ್ಯು. ಡಿ. ಬಿಲ್ಡಿಂಗ್ಸ್‌ನಿಂದ ಸಹಾಯವನ್ನು ಕೇಳಿದ್ದೀರಿ. ಇವತ್ತು ಮೈಸೂರು ಸಿಟಿಯಲ್ಲಿ ಸ್ಕೂಲ್ ಬಿಲ್ಡಿಂಗ್ಸ್ ಇಲ್ಲಿ ಈಗ ಬೆಟರ್‌ಮೆಂಟ್ ಕಮಿಟಿ ಎಂದು ಮಾಡಿ ಸ್ಕೂಲ್ ಬಿಲ್ಡಿಂಗ್ಸ್‌ನ್ನು ನೀವು ನೋಡಿಕೊಳ್ಳಬೇಕೆಂದು ಹೇಳಿದ್ದೀರಿ. ಈ ಬೆಟರ್‌ಮೆಂಟ್ ಕಮಿಟಿಯವರು ಅಧಿಕಾರಿಗಳನ್ನು ಜೊತೆಗೆ ಹಾಕಿಕೊಂಡು ಲಕ್ಷಾಂತರ ರೂಪಾಯಿಯ ಟಿಕೆಟ್‌ಗಳನ್ನು ಪ್ರಿಂಟ್ ಮಾಡಿ ಅದನ್ನು ಪ್ರತಿಯೊಬ್ಬ ಉಪಾಧ್ಯಾಯರೂ ಕೂಡ ಇಂತಿಷ್ಟು ಟಿಕೆಟ್‌ಗಳನ್ನು ಮಾರಿ ದುಡ್ಡು ಕೊಡಬೇಕೆಂದು ವಿದ್ಯಾಭ್ಯಾಸ ಇಲಾಖೆಯ ಎ. ಇ. ಓ. ಅವರು ಉಪಾಧ್ಯಾಯರುಗಳಿಗೆ ನಿಗದಿ ಮಾಡಿದ್ದಾರೆ. ಎಷ್ಟೋ ಜನ ಉಪಾಧ್ಯಾಯರುಗಳು ಟಿಕೆಟ್‌ಗಳನ್ನು ಮಾರುವುದಕ್ಕಾಗದೇ ತಮ್ಮ ತಮ್ಮ ಕೈಯಿಂದಲೇ ಹಣವನ್ನು ಕಟ್ಟಿ ಕೊಟ್ಟಿದ್ದಾರೆ. ವಿದ್ಯಾಭ್ಯಾಸ ಇಲಾಖೆಯವರು ಒಬ್ಬೊಬ್ಬ ಉಪಾಧ್ಯಾಯರಿಂದಲೂ ೨ ಸಾವಿರ, ೩ ಸಾವಿರ, ೬ ಸಾವಿರ ರೂಪಾಯಿಗಳನ್ನು ಕಲೆಕ್ಟ್ ಮಾಡಿದ್ದನ್ನು ಯಾರ ಕೈಗೆ ಕೊಟ್ಟಿದ್ದಾರೆ, ಮತ್ತು ಯಾವ ಆಧಾರದ ಮೇಲೆ ಕೊಟ್ಟಿದ್ದಾರೆ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ, ಇನ್ನು ಅರ್ಬನ್ ಡೆವಲಪ್‌ಮೆಂಟ್ ವಿಷಯದಲ್ಲಿ ಹೇಳಬೇಕೆಂದರೆ, ಮೈಸೂರು ಸಿಟಿಯಲ್ಲಿ ಥರ್ಡ್ ಸ್ಟೇಜ್ ವಾಟರ್ ಸಪ್ಲೈ ಸ್ಕೀಮ್ ಎಂದು ಮಾಡಿದಿರಿ. ಇದನ್ನು ೧೯೭೧ ನೇ ಇಸವಿಯಲ್ಲಿ ಸ್ಯಾಂಕ್ಷನ್ ಮಾಡಿದ್ದು ಅದನ್ನು ಇದುವರೆಗೂ ಕೂಡ ಪೂರೈಸಿಲ್ಲ. ೧೯೭೧ ನೇ ಇಸವಿಯಲ್ಲಿ ಏನು ಜನಸಂಖ್ಯೆ ಮೈಸೂರು ಸಿಟಿಯಲ್ಲಿ ಇತ್ತು, ಈಗ ಎಷ್ಟಿದೆ ಎಂಬುದನ್ನು ತಾವೇ ನೋಡಬೇಕು. ಇವತ್ತು ಅಲ್ಲಿಯ ಜನರಿಗೆ ಬೇಕಾದಷ್ಟು ನೀರು ಸರಬರಾಜು ಆಗುತ್ತಿಲ್ಲ. ಅದೇರೀತಿಯಲ್ಲಿ ಸ್ಯೂರೇಜ್ ಸಿಸ್ಟಂ ಕೂಡ ಆಗಿದೆ. ತಾವು ಇದರ ಕಡೆಗ ಗಮನವನ್ನು ಕೊಟ್ಟಿಲ್ಲ ಎಂದು ಹೇಳಬೇಕಾಗುತ್ತದೆ. ಇದೇ ಸಮಯದಲ್ಲಿ ಇನ್ನೊಂದು ಮಾತನ್ನು ಹೇಳಬೇಕೆಂದರೆ ಅಲ್ಲಿಯ ಜನರು ಯಾರನ್ನು ಹೋಗಿ ಕೇಳಬೇಕು, ಏಕೆಂದರೆ ತಾವು ಅಲ್ಲಿಯ ಪೌರಸಭೆಯ ಚುನಾವಣೆಯನ್ನೇ ಕೆ ನಡೆಸಿಲ್ಲ. ಅಲ್ಲಿ ಅಧಿಕಾರವನ್ನು ನಡೆಸುವವರು ಸರ್ಕಾರದವರಿಂದ ನಾಮಿನೇಟ್ ಆಗಿರುವ ಅಧಿಕಾರಿಗಳು. ಅಲ್ಲೇ ಅಲ್ಲದೇ ರಾಜ್ಯದ ಅನೇಕ ಕಡೆಗಳಲ್ಲಿ ತಾವು ಚುನಾವಣೆಗಳನ್ನೇ ಮಾಡಿಲ್ಲ. ಆದುದರಿಂದ ನಾನು ಹೇಳುವುದೇನೆಂದರೆ ರಾಜ್ಯದಲ್ಲಿ ಜನತೆಗೆ ಏನು ತೊಂದರೆಗಳಾಗಿವೆ ಅದಕ್ಕೆಲ್ಲಾ ಕಾರಣ ಸರ್ಕಾರದವರೇ ಎಂದು ಹೇಳಬಯಸುತ್ತೇನೆ.

ಸ್ವಾಮಿ ಇನ್ನು ಬೆಗ್ಗರ್ ರಿಲೀಫ್ ಕಾನೂನು ಎಂದು ಸರ್ಕಾರದವರು ಮಾಡಿದ್ದಾರೆ. ಇದರಿಂದ ಕೂಡ ಜನತೆಗೆ ಯಾವ ಅನುಕೂಲವೂ ಕೂಡ ಆಗಿಲ್ಲವೆಂದು ಹೇಳಬಯಸುತ್ತೇನೆ.

ಇನ್ನು ಸರ್ಕಾರಿ ಆಡಳಿತದಲ್ಲಿರತಕ್ಕ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ನೌಕರರಿಗೆ ಬೋನಸ್ ಕೊಡುವುದಕ್ಕೆ ಹಣವನ್ನು ಕೇಳಿದ್ದಾರೆ, ಅದೇರೀತಿ ಖಾಸಗಿ ಕಾರ್ಖಾನೆಗಳಲ್ಲಿ ಕೆಲಸಮಾಡುವ ನೌಕರರಿಗೂ ಬೋನಸ್ ಕೊಡುವ ಹಾಗೆ ಪ್ರಯತ್ನ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಪೆನ್‌ಷನ್‌ದಾರರ ವಿಷಯದಲ್ಲಿ ಹೇಳುವುದಾದರೆ ಅವರು ತಮ್ಮ ಪೆನ್‌ಷನ್ ತೆಗೆದುಕೊಳ್ಳಬೇಕಾದರೆ ಅರ್ಜಿಯನ್ನು ಕೊಡಬೇಕಾಗಿರುತ್ತದೆ. ಆ ರೀತಿ ಅರ್ಜಿಯನ್ನು ಕೊಟ್ಟಿದ್ದಕ್ಕೆ ದಾಖಲೆ ಇರುವುದಿಲ್ಲ, ಅಕ್ನಾಲೆಡ್ಜ್‌ಮೆಂಟ್ ಕೊಡುವುದಿಲ್ಲ. ಆರೂ ತಿಂಗಳಾದರೂ ಅದಕ್ಕೆ ಯಾವ ಉತ್ತರವೂ ಬರುವುದಿಲ್ಲ. ವಿವರವನ್ನು ಕೇಳಿದರೆ ಅಪ್ಲಿಕೇಶನ್ ಬರಲಿಲ್ಲವೆಂದು ಹೇಳುತ್ತಾರೆ. ಅದಕ್ಕೆ ನಾನೇ

ಸಹಿಯನ್ನು ಹಾಕಿಕೊಟ್ಟಿರುತ್ತೇವೆ. ಮತ್ತೆ ನಮ್ಮಲ್ಲಿಯೇ ಒಂದು ಹೇಳುತ್ತಾರೆ. ಆದ್ದರಿಂದ ದಯವಿಟ್ಟು ಅರ್ಜಿಗಳನ್ನು ಸಲ್ಲಿಸಿದವರಿಗೆ ದಾಖಲೆಯನ್ನು ಕೊಡುವ ಏರ್ಪಾಡನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೊಂದು ವಿಷಯವೇನೆಂದರೆ ನಿಜವಾಗಿಯೂ ಬಡವರು ಯಾರು ಇರುತ್ತಾರೆ ಅವರಿಗೆ ಈ ಸೌಲಭ್ಯವೂ ಸಿಗುತ್ತಿಲ್ಲ. ಕೆಲವು ಜನ ಏಜೆಂಟರು ಈ ಕಾರ್ಯಕ್ಕೆ ಮುಂದೆ ನಿಂತಿರುತ್ತಾರೆ. ಅವರು ಒಂದು ಅಪ್ಲಿಕೇಶನ್ ತೆಗೆದುಕೊಳ್ಳಬೇಕಾದರೆ ಇಷ್ಟು ದುಡ್ಡನ್ನು ಕಲೆಕ್ಟ್ ಮಾಡುತ್ತಾರೆ. ಅದರಂತೆ ಕೊಡಬೇಕಾಗಿರುತ್ತದೆ. ಈ ರೀತಿ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

4-30 P. M.

ಇನ್ನು ಕೆ. ಎಸ್. ಆರ್. ಟಿ. ಸಿ. ಯವರು ಕಾಂಟ್ರಾಕ್ಟ್ ಕ್ಯಾರೇಜ್ಗಸ್ ಬಸ್‍ಗಳನ್ನು ನ್ಯಾಷನಲೈಸ್ ಮಾಡಿಕೊಂಡರು. ಅವರಿಗೆ ಇದುವರೆವಿಗೂ ಕಾಂಪೆನ್‌ಸೇಷನ್ ಕೊಟ್ಟಿಲ್ಲ. ಅವರ ಬಸ್ಸುಗಳನ್ನು ಓಡಿಸಿ ಸಂಪಾದನೆ ಮಾಡುತ್ತಿದ್ದಾರೆ. ಮತ್ತೊಂದು ವಿಷಯವೇನೆಂದರೆ ಒಂದೊಂದು ಬಸ್ಸಿಗೆ ಎಂಟೆಂಟು ಜನರಂತೆ ಕೆಲಸವನ್ನು ಕೊಡುತ್ತೇವೆಂದು ಇದೇ ಅಸೆಂಬ್ಲಿಯಲ್ಲಿ ಘೋಷಣೆಯನ್ನು ಸಂಬಂಧಪಟ್ಟ ಮಂತ್ರಿಗಳು ಮಾಡಿದ್ದರು. ಅದರಂತೆ ಇದುವರೆವಿಗೂ ಕೊಟ್ಟಿಲ್ಲ. ೨೦, ೩೦, ಸಾವಿರದಷ್ಟು ಜನರನ್ನು ಒಂದೇ ದಿವಸದಲ್ಲಿ ನಿರುದ್ಯೋಗಿಗಳನ್ನಾಗಿ ಮಾಡಿಬಿಟ್ಟರು. ನ್ಯಾಯವಾಗಿ ಕಂಡುಬಂದ ಸಂದರ್ಭದಲ್ಲಿ ಅವರಿಗೆ ಕೆಲಸವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ದೋಷಾರೋಪಣೆ ಮತ್ತು ದುರುಪಯೋಗ ಇಟ್ಟುಕೊಂಡು ಪುನಃ ಬೇಡಿಕೆಗಳನ್ನು ಕೇಳುವುದು ಸೂಕ್ತವಲ್ಲವೆಂದು ಹೇಳಿ ಈ ಸಂದರ್ಭದಲ್ಲಿ ಮಾತನಾಡಲು ಇಷ್ಟು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ) — ಸನ್ಮಾನ್ಯ ಸಭಾಧ್ಯಕ್ಷರೆ, ನಾನು ನೆನ್ನೆಯ ದಿವಸವೇ ಮಾತನಾಡಬೇಕೆಂದು ಕಾತುರನಾಗಿದ್ದೆ. ಆ ದಿವಸ ನನ್ನ ಆರೋಗ್ಯವು ಚೆನ್ನಾಗಿಲ್ಲದ ಕಾರಣ ಮಾತನಾಡಲಿಲ್ಲ. ಆದರೆ ಈ ದಿವಸ ಆರೋಗ್ಯವು ಚೆನ್ನಾಗಿ ಇಲ್ಲದಿದ್ದರೂ ಸಹ ಮಾತನಾಡಬೇಕು ಎನ್ನುವ ಪ್ರಯತ್ನದಲ್ಲಿ ನಿಂತಿದ್ದೇನೆ. ನಿಮ್ಮನ್ನು ನೋಡಿದರೆ ದೇಶದ ಜನತೆಗೆ ಚೆನ್ನಾಗಿಲ್ಲದಿರುವಾಗ ನಾನು ಒಬ್ಬನೇ ಏತಕ್ಕೆ ಚೆನ್ನಾಗಿಲ್ಲವೆಂದು ಹೇಳಲು ಸಾಧ್ಯ!

ರಾಜ್ಯದ ಮಾನ್ಯ ಹಣಕಾಸಿನ ಸಚಿವರು ಹೆಚ್ಚುವರಿ ಬೇಡಿಕೆಯನ್ನು ಮಂಡಿಸಿದ್ದಾರೆ. ಹಾಗೂ ೧೯೭೭-೭೮ರ ಓಟ್ ಆನ್ ಅಕೌಂಟ್ ಬೇಡಿಕೆಯನ್ನೂ ಮಂಡಿಸಿದ್ದಾರೆ. ಅವರ ಇಂಗಿತವನ್ನು ಇದರಲ್ಲಿ ತಿಳಿಸಿದ್ದಾರೆ. ಇದರಲ್ಲಿ ಎಲ್ಲಿ ಹಣ ದೇಶದ ಶ್ರೇಯೋಭಿವೃದ್ಧಿಗೆ, ಅಭಿವೃದ್ಧಿ ಕಾರ್ಯಗಳಿಗೆ ಮಾತ್ರ ವೆಚ್ಚವಾಗಿದೆಯೆಂದು ಅಪ್ಪಣೆ ಮಾಡಿದ್ದಾರೆ. ನಾನು ತಿಳಿದುಕೊಂಡಿದ್ದ ಶ್ರೀಮಾನ್ ಘೋರ್ಪಡೆಯವರು ಯೋಗ್ಯರು ಉತ್ತಮರು ಸಾಮಾನ್ಯರು ಎಂದು ತಿಳಿದುಕೊಂಡಿದ್ದೆ. ಅವರ ಬಾಯಲ್ಲಿ ಏತಕ್ಕೆ ಇಂಥ ತಪ್ಪು ಮಾಡಿದ್ದು ಬಂದಿತು ಎಂದು ಇಲ್ಲಿ ನಾನು ಅಂದುಕೊಂಡೆ. ಸನ್ಮಾನ್ಯ ಅಧ್ಯಕ್ಷರೆ ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಅವರ ಪಕ್ಷದವರೇ ಆದ ಶ್ರೀಮಾನ್ ಹನುಮಂತಯ್ಯನವರು ಒಂದು ಮಾತನ್ನು ಹೇಳಿದ್ದರು. ಅದೇನೆಂದರೆ ''ಮುರುಕಲು ಮಂಟಪಕ್ಕೆ ಮೂವತ್ತು ಕಂಬಗಳೆಂದು.'' ಈ ದರಿದ್ರ ರಾಜ್ಯಕ್ಕೆ, ಬರಗಾಲ ಬವಣೆ ಇರತಕ್ಕಂಥ ರಾಜ್ಯಕ್ಕೆ ಮೂವತ್ತು ಮಂತ್ರಿಗಳ ಅವಶ್ಯಕತೆ ಏನು ಇತ್ತೆಂದು ಕೇಳುತ್ತೇನೆ. ಏನೋ ದೈವವಶಾತ್ ಶ್ರೀ ನಾಗರಾಳ್ ಒಬ್ಬರು ಕಮ್ಮಿಯಾದರು. ನಾನು ಈ ಮಾತನ್ನು ಹೇಳುವಾಗ ಒಂದು ವಿಷಯವನ್ನು ಹೇಳುತ್ತೇನೆ. ಭಾರತದಲ್ಲಿ ಆಡಳಿತವನ್ನು ನಡೆಸಬೇಕಾದರೆ ನಿಮ್ಮ ಪಕ್ಷದ ಶ್ರೀ ಹನುಮಂತಯ್ಯನವರು ಹೇಳಿದ ಮಾತನ್ನು ಹೇಳುತ್ತೇನೆ, ಆಡಳಿತ ರಾಜ್ಯದಲ್ಲಿ ಆಗಲಿ ರಾಷ್ಟ್ರದಲ್ಲಿಯಾಗಲಿ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ನಡೆಯಬೇಕಾದರೆ ಸ್ವಚ್ಛವಾದ ಕೆಲವೇ ಜನ ಆಡಳಿತಗಾರರು ಇದ್ದರೆ ಮಾತ್ರ ಸಾಧ್ಯವೆಂದು ಹೇಳುತ್ತೇನೆ. ಇವರು ಹೆಚ್ಚುವರಿ ಬೇಡಿಕೆಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಗೌವರ್ನರ ಮತ್ತು ಮಂತ್ರಿಗಳಿಗೆ ಕೆಲವು ವೆಚ್ಚಗಳನ್ನು ಕೇಳಿದ್ದಾರೆ. ನಾನಾದರೂ ಕೇಳುತ್ತೇನೆ ಮಂತ್ರಿಗಳ ಕಸಬು ಏನೆಂದು. ಕ್ಷೌರ ಮಾಡುವವನು ಕತ್ತಿಯನ್ನು ಮಸೆದುಕೊಂಡು ಇಟ್ಟುಕೊಂಡಿರುತ್ತಾರೆ. ಹಾಗೆಯೇ ಆಡಳಿತ ಮಾಡತಕ್ಕಂಥವರು ಸ್ವಚ್ಛವಾಗಿರಬೇಕು ಕೈ ಚೆನ್ನಾಗಿರಬೇಕೆಂದು ನಾನಾದರೂ ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಮಂತ್ರಿಗಳ ಕಸಬು ಏನು?. ಕಸಬು ಎಂದರೆ ತಾವು ಅಪಾರ್ಥ ಮಾಡಿಕೊಳ್ಳಬಾರದು. ಏತಕ್ಕೆ ನಿಮಗೆ ಸಂಬಳ ಕೊಡಬೇಕು. ಯಾರಪ್ಪನ ಮನೆ ದುಡ್ಡು. ನಾನಾದರೂ ಅಧ್ಯಕ್ಷರೆ ಪ್ರಾರ್ಥನೆ ಮಾಡಿಕೊಂಡು ಹೇಳುತ್ತೇನೆ, ಶ್ರೀಮಾನ್ ಘೋರ್ಪಡೆಯವರ ಮೇಲೆ

ನನಗೆ ಅಪಾರವಾದ ಗೌರವವಿದೆ. ಅವರ ಹಿನ್ನೆಲೆ, ಚರಿತ್ರೆಯನ್ನು ನಾನು ಚೆನ್ನಾಗಿ ಅರಿತುಕೊಂಡಿದ್ದೇನೆ. ನಾನು ಕೇಳುತ್ತೇನೆ ಯಾವ ಅಭಿವೃದ್ಧಿ ಕಾರ್ಯಗಳಿಗೋಸ್ಕರವಾಗಿ ಇಷ್ಟೊಂದು ದುಡ್ಡನ್ನು ಉಪಯೋಗಿಸಿದ್ದೀರೆಂದು. ನಿಮ್ಮ ನಾಲಿಗೆಯಲ್ಲಿ ಏತಕ್ಕೆ ಈ ಮಾತನ್ನು ಆಡುತ್ತೀರಿ, ಯಾರನ್ನು ಮೆಚ್ಚಿಸುವುದಕ್ಕೆ ಯಾರ ಹಂಬಲಕ್ಕಾಗಿ ಈ ಮಾತನ್ನು ಆಡುತ್ತಿರುವಿರೋ ನನಗೆ ಅರ್ಥವಾಗುತ್ತಿಲ್ಲ. ಕರ್ನಾಟಕ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ನಾವು ನೀವು ಕಂಕಣಬದ್ಧರಾಗಿ ದುಡಿಯೋಣ ಏತಕ್ಕೆಂದರೆ ನಾನು ಈಗಾಗಲೆ ಹೇಳಿದ್ದೇನೆ ತಮ್ಮ ಬಗ್ಗೆ ಕಿಂಚಿತ್ ನಂಬಿಕೆ ಇರುವುದರಿಂದ ಒಂದು ಮಾತನ್ನು ಹೇಳುತ್ತೇನೆ. ನಿಮ್ಮ ಪಕ್ಷದ ನಾಯಕ ನಾಯಕಿ ನಿಮಗೆ ಮೊಕಮಲ್ ಟೋಪಿಯನ್ನು ಹಾಕಿ ನಿಮ್ಮನ್ನು ಇಟ್ಟುಕೊಂಡಿದ್ದಾರೆ. ಮಾನ್ಯ ಅಧ್ಯಕ್ಷರೇ, ಈ ಹೆಚ್ಚುವರಿ ಬೇಡಿಕೆಯಲ್ಲಿ 8 ಲಕ್ಷ ರೂಪಾಯಿಗಳನ್ನು ಟೆಲಿಫೋನ್ ವೆಚ್ಚಕೋಸ್ಕರ ಕೇಳಿದ್ದಾರೆ. ಇದು ಮಾಮೂಲಿಯಾಗಿ ಆಗುವ ಖರ್ಚಿಗಿಂತ ಹೆಚ್ಚುವರಿಯಾಗಿದೆ. ಮಾನ್ಯ ಮಂತ್ರಿಯವರಾದ ಘೋರ್ಪಡೆಯವರನ್ನು ಒಂದು ಮಾತು ಕೇಳುತ್ತೇನೆ. ಯಾವ ಕಸುಬು ಇಲ್ಲದೆ ಇರತಕ್ಕ ಮಂತ್ರಿಯವರಿಗೆ ಫೋನ್ ಮಾಡುವ ಆವಶ್ಯಕತೆ ಏನಿತ್ತು; ಅವರಿಗೆ ಹಣಕಾಸು ಕೊಡುವಾಗ ಇದರಲ್ಲಿ ಏನಾದರೂ ಹತೋಟಿ, ನಿಯಮವನ್ನೇನಾದರೂ ಇಟ್ಟಿದ್ದಾರೇನು? ಹಿಂದೆ ಈ ಸದನದಲ್ಲಿ ಶ್ರೀಮಾನ್ ಗೋಪಾಲಗೌಡರು ಭಾಷಣ ಮಾಡುತ್ತಿದ್ದಾಗ ಮಾನ್ಯ ಮುಖ್ಯಮಂತ್ರಿಯವರಾಗಿದ್ದ ನಿಜಲಿಂಗಪ್ಪನವರು ಈ ಸದನದಲ್ಲಿ ಕುಳಿತಿದ್ದರು. ಮಾನ್ಯ ಗೋಪಾಲಗೌಡರು "ನೀವು ದೇಶಕ್ಕೆ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ದ್ರೋಹ ಮಾಡುತ್ತಿದ್ದೀರಿ; ಜನತೆ ನಿಮ್ಮ ಚರ್ಮ ಸುಲಿದು ನೇತು ಹಾಕುತ್ತಾರೆ" ಎಂದು ಹೇಳಿದ್ದಾರೆ. ಅದೇ ರೀತಿ ನಿಮ್ಮನ್ನು ಕರ್ನಾಟಕ ಜನ ಉಪ್ಪಿನಕಾಯಿ ಮಾಡುತ್ತಾರೆ. ನೀವು ಮಾಡಿರುವಂತ ಕಸಬುಗಳು ಇದೆಯಲ್ಲಾ ಆ ಕಸಬುಗಳನ್ನು ಕರ್ನಾಟಕದ ಜನತೆಗೆ ತಿಳಿಸುವುದಕ್ಕೆ ನಮಗೆ ಅವಕಾಶ ಸ್ವಲ್ಪ ಕಡಿಮೆ ಇತ್ತು. ಆಗ ನೀವು ಮಾಡುವ ಕಸಬುಗಳನ್ನು ಹೇಳುವುದಕ್ಕೆ ತುರ್ತುಪರಿಸ್ಥಿತಿ ಇತ್ತು. ನೀವು ಮಾಡಿರುವ ಕಸಬನ್ನು ಸಾರಿ ಹೇಳುತ್ತಾ ಹೋದರೆ ಜನ ನಿಮ್ಮ ಚರ್ಮ ಸುಲಿದು ತೋರಣ ಕಟ್ಟುವುದಿಲ್ಲ; ನಿಮ್ಮ ಚರ್ಮ ಸುಲಿದು ಕೈಮ ಮಾಡಿ ಉಪ್ಪಿನಕಾಯಿ ಹಾಕುತ್ತಾರೆ. ಈ ಮಾತನ್ನು ಹೇಳುವಾಗ ನಾನು ಬಹಳ ಗಂಭೀರವಾಗಿ ಹೇಳುತ್ತಿದ್ದೇನೆ. ಇವುಗಳನ್ನೆಲ್ಲಾ ಪರೀಕ್ಷಿಸತಕ್ಕಂಥ ಸಾಮರ್ಥ್ಯದಿಂದ ಹೇಳುತ್ತಿದ್ದೇನೆ. ನನ್ನ ಮಾತು ಪತ್ರಿಕೆಯಲ್ಲಿ ಬರಬೇಕು, ಈ ಸದನದ ಅಥವಾ ಕರ್ನಾಟಕ ರಾಜ್ಯದ ಜನತೆ ನನ್ನ ಮಾತನ್ನು ಮೆಚ್ಚಬೇಕು ಎಂದು ಸಮಾಧಾನಕೋಸ್ಕರ ಮಾತನಾಡತಕ್ಕಂಥ ಮಾತನ್ನು ನಾನು ಹೇಳುತ್ತಿಲ್ಲ, ನನ್ನ ಅಂತಕರಣಕೋಸ್ಕರ ಹೇಳುತ್ತಿದ್ದೇನೆ. ನಮ್ಮ ನಿಮ್ಮ ಹೃದಯ ಸಮ್ಮಿಳನ ಆಗದಹೊರತು ಈ ಕರ್ನಾಟಕ ರಾಜ್ಯಕ್ಕೆ ಅಭಿವೃದ್ಧಿ ಇಲ್ಲ ಈಗ ನಿಮ್ಮ ಹೃದಯ ಕಲ್ಲಾಗಿದೆ. ಈ ಹುಡುಗ ಸಂಜಯ ಗಾಂಧಿಯಿಂದ ನೀವು ಬುದ್ಧಿ ಹೇಳಿಸಿಕೊಳ್ಳುತ್ತಿದ್ದೀರಿ; ದೇವರಾಜ್ ಅರಸ್‌ರವರೇ, ಸಿದ್ದವೀರಪ್ಪನವರೇ ಚನ್ನಬಸಪ್ಪನವರೇ ಆ ಹುಡುಗನನ್ನು ಏತಕ್ಕೆ ಮೆರವಣಿಗೆ ಮಾಡಿಸುತ್ತಿದ್ದೀರಿ ಎಂದು ಕೇಳಿದಾಗ 'ಹೀ' ಎಂದು ನಕ್ಕಂಥ ಜನ ನೀವು. ಎಲ್ಲಿ ಅವನ ಹೆಸರನ್ನು ಹೇಳಿ ಇನ್ನೊಂದು ಸಾರಿ ಮೆರವಣಿಗೆ ಮಾಡಿ ನೋಡೋಣ? ನಿಮ್ಮನ್ನು ಕೈಮ ಏನು ಕಸವರ್ ಮಾಡುತ್ತಾರೆ. ಈ ದೇಶದ ಸ್ವತ್ತು ನಿಮ್ಮದು. ಈ ದೇಶದ ಜನತೆ ನಿಮ್ಮವರು.

ಶ್ರೀ ಕೆ. ಶ್ರೀರಾಮುಲು.—ನಿಮಗೆ ಜ್ವರ ಬಂದಿಲ್ಲ ತಾನೆ!

ಶ್ರೀ ಬಿ. ಪುಟ್ಟಸ್ವಾಮಯ್ಯ.—ನನಗೆ ಏನು ಬಂದರೂ ನಿಮ್ಮ ಕಸಬು ನೋಡಿದರೆ ಎಲ್ಲವೂ ಹೊರಟು ಹೋಗುತ್ತದೆ ಈ ದೇಶದ ಅಧಿಕಾರವನ್ನು ಹೊಂದಿದಂಥ ಜನರ ನಡೆನುಡಿಯನ್ನು ನೋಡಿದಾಗ ನಮಗೆ ಸಂಕಟವಾಗುತ್ತದೆ. ಸ್ವಾತಂತ್ರ್ಯಕೋಸ್ಕರ ಭಾರತದಲ್ಲಿ ಸೆರೆಮನೆಯಲ್ಲಿ ಇದ್ದಂತ ಧೀಮಂತ ವ್ಯಕ್ತಿಗಳು ಆ ಕಡೆಯಲ್ಲಿ ಇದ್ದಾರೆ. ಈ ಭಾರತ ದೇಶದ ಸ್ವಾತಂತ್ರ್ಯಕೋಸ್ಕರ ಸರ್ವಸ್ವವನ್ನೂ ತೆತ್ತಂಥಹ ಕೆಲವು ವ್ಯಕ್ತಿಗಳು ಅಲ್ಲಿದ್ದಾರೆ. ಅಂತಹವರನ್ನು ಬಿಟ್ಟು ಆ ಹುಡುಗನ ಮೆರವಣಿಗೆಯನ್ನು ಮಾಡಿಸಿದರಲ್ಲಾ; ಅದು ನಿಮ್ಮಪ್ಪನ ಮನೆಯ ದುಡ್ಡೆ? ಎಲ್ಲಪ್ಪ ಆ ಗುಂಡೂರಾವ್; ಇದು ಯಾರ ಸ್ವತ್ತು? ಅಯ್ಯೋ ಶಿವನೇ, ಅಲ್ಲಿ ಸ್ಕೂಲಿಗೆ ಹೋಗುವ ಮಕ್ಕಳು ಉಪವಾಸ ಇದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಅದಕ್ಕೆ ಬಜೆಟ್‌ನಲ್ಲಿ ಖರ್ಚು ಬಿದ್ದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅವರು ನಮ್ಮ ಅಣ್ಣ ತಮ್ಮಂದಿರು. ದುರಾದೃಷ್ಟವಶಾತ್ ಬೇರೆ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ್ದಾರೆ ಅಡ್ಡ ಕಸಬು ಮಾಡಿ ನಮ್ಮನ್ನು ದೇಶದ್ರೋಹಿಗಳು ಎಂದು ಹೇಳಿ, ಶ್ರೀ ಜಯಪ್ರಕಾಶ್‌ನಾರಾಯಣ್, ಶ್ರೀ ಮೊರಾರ್ಜಿ ಭಾಯಿ ಅವರೆಲ್ಲರನ್ನೂ ದೇಶದ್ರೋಹಿಗಳೆಂದು ಹೇಳಿ ಜೈಲಿನಲ್ಲಿ ಇಟ್ಟರು. ದೇವರು ಇವತ್ತು ನಿಮಗೆ ಶಿಕ್ಷೆಯನ್ನು ಮಾಡದೇ ಇದ್ದರೂ ನಿಮ

ಆತ್ಮ ನಿಮಗೆ ಹೇಳುತ್ತಿದೆ. ಅವರಿಗೂ ಬಿಳಿ ಮತ್ತು ಕೆಂಪು ರಕ್ತ ಕಣಗಳು ಇವೆ, ಅದರಲ್ಲೂ ನಾವೆಲ್ಲರೂ ಒಂದೇ ತಾಯಿಯ ಮಕ್ಕಳು ಆಗಿದ್ದೇವೆ. ಆದರೂ ಅವರು ಸಂಕಟ ಪಡುತ್ತಿದ್ದಾರೆ.*** ದೇಶದ ಸ್ವತ್ತು, ಸಂಪತ್ತು, ಭೂಮಿ ಎಲ್ಲಾ ನಿಮ್ಮದು ಮತ್ತು ನಮ್ಮದು. ನಾವು ಮತ್ತು ನೀವು ಸಮಭಾಗಿಗಳಾಗಿ ಏಕ ಮನೋಭಾವದಿಂದ ದುಡಿದರೆ ಮಾತ್ರ ಕರ್ನಾಟಕ ರಾಜ್ಯ ಮತ್ತು ಭಾರತ ದೇಶಕ್ಕೆ ಶ್ರೇಯಸ್ಸು ಉಂಟಾಗುತ್ತದೆ. ಇದನ್ನು ಅರಿತಂಥ ನೀವು ನಮ್ಮನ್ನು ಬಿಗಿ ಮಾಡಿದರೆ ಏನು ಲಾಭ? ನಾನು ನಿಮ್ಮನ್ನು ನಾಲ್ಕು ಮಾತಿನಲ್ಲಿ ಕಠಿಣವಾಗಿ ಬೈಯುತ್ತೇನೆ. ನೀವು ಎಂಟು ಮಾತಿನಲ್ಲಿ ಕಠಿಣವಾಗಿ ಬೈಯ್ದರೆ ಏನು ಲಾಭ?

ಶ್ರೀ ಕೆ. ಹೆಚ್. ಹನುಮೆಗೌಡ.—ಮಾನ್ಯ ಸದಸ್ಯರು ಹೇಳಿದಂತ ಮಾತನ್ನು ಎಕ್ಸ್‌ಪಂಜ್ ಮಾಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಅವರು ಉಪಯೋಗಿಸಿದಂತ ಪದ, ಅವರು ಹೇಳಿದಂತ ಧಾಟಿ ಗೌರವಯುತವಾದುದಲ್ಲ ಎಂದು ಹೇಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಹನುಮೆಗೌಡರಿಗೆ ಈಗ ಹೇಗೆ ಆಗಿದೆ ಅಂದರೆ ಇಲ್ಲಿ ಕುಳಿತ್ತಿದ್ದಾಗ......

ಶ್ರೀ ಕೆ. ಎಚ್. ಹನುಮೆಂಗೌಡ.—ನಿಮಗೆ ಅಧಿಕಾರ ಇದೆ, ಏನು ಬೇಕಾದರೂ ಹೇಳಿ ಆದರೆ ಅದನ್ನು ಗೌರವಯುತವಾಗಿ ಹೇಳಿ,

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅಧ್ಯಕ್ಷರೇ, ಮಾನ್ಯ ಸದಸ್ಯರು ನನಗೆ ಭೋದನೆ ಮಾಡಬೇಕಾದ ಅವಶ್ಯಕತೆ ಇಲ್ಲ. ನಾನು ತಮ್ಮಲ್ಲಿ ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡುತ್ತೇನೆ; ನಾನು ಈ ಸದನದ ಗೌರವವನ್ನು ಕಾಪಾಡಿಕೊಂಡು ಸಹಬಾಳ್ವೆಯಿಂದ ಬಾಳಿ ಕರ್ನಾಟಕ ರಾಜ್ಯದ ಶ್ರೇಯಸ್ಸನ್ನು ಮಾಡಬೇಕು ಎಂಬ ಧಾಟಿಯಲ್ಲಿ ಭಾಷಣವನ್ನು ಮಾಡುತ್ತಿದ್ದೆನೆಯೇ ಶಿವಾಯಿ ಶ್ರೀಮಾನ್ ಹನುಮೆಗೌಡರು ಅವರಿಂದ ಪಾಠಪ್ರವಚನ ಮಾಡಿಸಿಕೊಂಡು ಭಾಷಣ ಮಾಡತಕ್ಕಂಥ ಅವಶ್ಯಕತೆ ನನಗೆ ಇಲ್ಲ. ಇದು ಮೊದಲನೆಯದು. ಎರಡನೆಯದಾಗಿ ನಾನು ಆಗಲೇ ಹೇಳಿದೆ ನಾನು ಅವರ ಬಗ್ಗೆ ನಾಲ್ಕು ಮಾತಿನಲ್ಲಿ ಟೀಕಾತೀತವಾಗಿ ಮಾತನಾಡಲಿ, ಅಥವಾ ಅವರು ನನ್ನನ್ನು ಎಂಟು ಮಾತಿನಲ್ಲಿ ಟೀಕೆ ಮಾಡಿ ಮಾತನಾಡಲಿ ಅದರಿಂದ ಏನೂ ಫಲ ಇಲ್ಲ,

ಶ್ರೀ ಕೆ. ಶ್ರೀರಾಮುಲು.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ಸದಸ್ಯರು ಮಾತನಾಡುವುದಕ್ಕೆ ನನ್ನ ಅಭ್ಯಂತರ ಏನೂ ಇಲ್ಲ. ಆದರೆ ನನ್ನ ಅಭಿಪ್ರಾಯದಲ್ಲಿ ಅವರು ಮಾತನಾಡಿದಂತ ಮಾತುಗಳು ವಿರೋಧ ಪಕ್ಷದ ಸದಸ್ಯರಿಗೆ ಗೌರವ ತರತಕ್ಕಂಥ ಮಾತಲ್ಲ ಎಂದು ಹೇಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನು ಈಗಾಗಲೇ ಈ ಸಭೆಗೆ ಮನವರಿಕೆ ಮಾಡಿಕೊಂಡಿದ್ದೇನೆ. ಈ ವಿರೋಧ ಪಕ್ಷಕ್ಕೆ ಅಗೌರವ ತರತಕ್ಕಂಥ ಭಾಷಣವನ್ನು ನಾನು ಮಾಡಿಯೇ ಇಲ್ಲ, ನೀವು ನಮಗೆ ಪಾಠ ಹೇಳತಕ್ಕಂಥ ಸಾಮರ್ಥ್ಯ ನಿಮಗೆ ಎಂದೆಂದಿಗೂ ಇಲ್ಲ. ಅದನ್ನು ಮಾನ್ಯ ಅಧ್ಯಕ್ಷರ ಮಧ್ಯಾಂತರ ತಮ್ಮಲ್ಲಿ ಬಿನ್ನಹ ಮಾಡಿಕೊಂಡು ನನ್ನ ಭಾಷಣವನ್ನು ಮುಂದುವರಿಸುವುದಕ್ಕೆ ಅಧ್ಯಕ್ಷರ ಅಪ್ಪಣೆಯನ್ನು ಬೇಡುತ್ತೇನೆ, ಮಾನ್ಯ ಅಧ್ಯಕ್ಷರೇ, ಹೆಚ್ಚುವರಿ ಬೇಡಿಕೆಯಲ್ಲಿ ನಮ್ಮ ಗುಣವಂತರಾದ ನಮ್ಮ ಅರ್ಥಸಚಿವರು ೯ನೇ ಐಟಮ್‌ನಲ್ಲಿ ಒಂದು ಮಾತು ಹೇಳಿದ್ದಾರೆ. ಒಂದು ಕಡೆ ರಿಟ್ ಪಿಟಿಷನ್‌ನಲ್ಲಿ ಒಂದುಕೋಟಿ ೬೦ ಲಕ್ಷ ರೂಪಾಯಿ ಬಡ್ಡಿ ಸಮೇತ ಕೊಡಬೇಕು ಎಂದು ಹೈಕೋರ್ಟಿನಲ್ಲಿ ಆಜ್ಞೆ ಆಗಿದೆ ಎಂದು ಹೇಳಿದ್ದಾರೆ. ಅಧ್ಯಕ್ಷರೇ ಇದನ್ನು ನಾನು ಪ್ರಶ್ನೆ ಮಾಡುತ್ತೇನೆ. ಸಕಲ ಗುಣವಂತರಾದಂತಹ ಸಮರ್ಥರಾದಂತಹ ಸಿಬ್ಬಂದಿಯನ್ನು ಹೇರಳವಾಗಿ ಜೊತೆಗೆ ಲಾ ಪದವೀಧರನ್ನು ಮತ್ತು ಲೀಗಲ್ ಅಡ್ವೈಸರ್ಸ್‌ಗಳನ್ನು ಹೊಂದಿರುವಂತಹ ಕಾನೂನು ಇಲಾಖೆ ನಮ್ಮ ಸರ್ಕಾರದಲ್ಲಿ ಇದೆ. ಇಷ್ಟೆಲ್ಲಾ ಇದ್ದಮೇಲೆ ಇಷ್ಟು ದುಡ್ಡನ್ನು ಕೊಡಬೇಕಾದ ಅವಶ್ಯಕತೆ ಏನು ಇದೆ? ಈ ದೌರ್ಬಲ್ಯಕ್ಕೆ ಕಾರಣರಾರು? ಇವಕ್ಕೆ ಹೊಣೆಗಾರರು ಯಾರು ಎಂದು ಮಾನ್ಯ ಘೋರ್ಪಡೆಯವರನ್ನು ಕೇಳಬಯಸುತ್ತೇನೆ. ಈ ಸಮಯದಲ್ಲಿ ಒಂದು ವಿಷಯ ನನಗೆ ಜ್ಞಾಪಕಕ್ಕೆ ಬರುತ್ತದೆ ಅದು ಏನೆಂದರೆ ನಮ್ಮ ಹಳ್ಳಿಯಲ್ಲಿ ಸೊಗಸುಗಾರ ಎಂದು ಹೇಳುತ್ತೇವೆ. ನೀನು ತಪ್ಪು ಮಾಡಿದರೂ ಬಹಳ ಸೊಗಸಾಗಿ ಮಾತನಾಡಿ ಬಚಾವ್ ಮಾಡಿಕೊಳ್ಳುತ್ತೀಯೆಂದು ಅವರ ಬುದ್ಧಿವಂತಿಕೆಯನ್ನು ಮೆಚ್ಚಿ ಹೇಳುವ ವಾಡಿಕೆ ಉಂಟು. ಆದ್ದರಿಂದ ಮಾನ್ಯ ಘೋರ್ಪಡೆಯವರು ಒಂದು ಕೋಟಿ ೬೦ ಲಕ್ಷ ರೂಪಾಯಿ ಸರ್ಕಾರದಿಂದ ಕೊಡತಕ್ಕಂಥ ವೈಫಲ್ಯಕ್ಕೆ

*** Wordar words expunged as ordered by the Chair.

ಯಾವ ಅಧಿಕಾರಿ ಅಥವಾ ಆಡಳಿತಾಧಿಕಾರಿ ಕಾರಣಕರ್ತ ಎನ್ನುವುದನ್ನು ತಿಳಿಸಬೇಕು. ಯಾವುದೇ ಸರ್ಕಾರದ ಸಂಸ್ಥೆ ನಷ್ಟಹೊಂದಬೇಕಾದರೆ ಅದಕ್ಕೆ ಯಾರು ಹೊಣೆ, ಆ ಹೊಣೆಗಾರಿಕೆಯನ್ನು ಹೊರಿಸಿದ್ದೀರಿ ಎಂದು ದಯವಿಟ್ಟು ತಿಳಿಸಬೇಕು. ವಿರೋಧಪಕ್ಷದವರು ನೇರವಾಗಿ ಹಣಕಾಸಿನ ಸಚಿವರನ್ನೇ ಜವಾಬ್ದಾರರಾಗಿ ಮಾಡಬಾರದು ಆದ್ದರಿಂದ ಮಾನ್ಯ ಅಧ್ಯಕ್ಷರೆ ಇದನ್ನು ಲಂಬಿಸುವುದಕ್ಕೆ ಇಷ್ಟಪಡದೇ ಮುಂದೆ ಲಾಟ್ರಿ ಯೋಜನೆಯ ಬಗ್ಗೆ ಒಂದು ಮಾತೂ ಹೇಳಬಯಸುತ್ತೇನೆ. ಇದಕ್ಕೆ ಒಬ್ಬರು ಮಂತ್ರಿಗಳಿದ್ದಾರೆ ಕರ್ನಾಟಕ ಮಂತ್ರಿಮಂಡಲದ ಮೇಲೆ ವಿರೋಧಪಕ್ಷದವರು ಒಳ್ಳೆಯ ಮಾತು ಹೇಳಬೇಕೆಂದರೆ ಮೂರು ಸಾರಿ ಮೂರು ತರಹ ಕಾರ್ಯಕ್ರಮ ಮಾಡಿದ್ದಾರೆ. ಅದಕ್ಕೆ ಒಬ್ಬನೇ ನಾಯಕ ಕಸಬು ಗೊತ್ತಿಲ್ಲದೆ ಹೋದರೆ ಅಡ್ಡ ಕಸಬಿ ಕೆಲಸಮಾಡಿದರೆ ಹೀಗೆ ಆಗುತ್ತದೆ ಒಬ್ಬರೇ ನಾಯಕರು ಅಧಿಕಾರವನ್ನು ಚಲಾಯಿಸಿದ್ದಾರೆ. ಆಂಜನೇಯ ಅಥವಾ ಕೃಷ್ಣ ವಿಶ್ವರೂಪ ತೋರಿಸಿದಂತೆ ನಮ್ಮ ಅಡ್ಡ ಕಸಬಿನವರು ಕಸಬು ಮಾಡಿದಂತೆ ಮೂರು ಸಾರಿ ಬದಲಾವಣೆ ಆಯಿತು ಅವರ ಕಾಂಗ್ರೆಸ್ ಮುಖಂಡರೇ ಹೇಳಿದ್ದಾರೆ. ಆದ್ದರಿಂದ ಯಾವಾಗ ಮಂತ್ರಿ ಪದವಿಯಿಂದ ತೆಗೆದಮೇಲೆ ಅವರನ್ನು ಕಾಂಗ್ರೆಸ್‌ನಿಂದ ಏತಕ್ಕೆ ತೆಗೆಯಲಿಲ್ಲ ಎಂದು ಹೇಳಿದರು ನಾನಲ್ಲ. ನಿಮ್ಮ ಪಕ್ಷದವರೇ ಹೇಳುತ್ತಿರುವುದು. ಆದರೆ ನನ್ನ ಮೇಲೆ ಬಿದ್ದು ಸಾಯುತ್ತಿದ್ದಾರೆ ನಿಮ್ಮ ಮಂತ್ರಿಗಳು. ನೀವು ಬೇಕಾದರೆ ನಿಮ್ಮ ನಾಯಕನ ಮೇಲೆ ಬಿದ್ದು ಸಾಯಿರಿ. "ಇದ್ದ ಮಾತನ್ನು ಇದ್ದ ಹಾಗೆ ಹೇಳಿದರೆ ಎದ್ದು ಬಂದು ಎದೆಗೆ ಒದ್ದನಂತೆ" ಎಂಬ ರೀತಿಯಲ್ಲಿ ನನ್ನ ಮೇಲೆ ಇವರು ಏತಕ್ಕೆ ಕೋಪ ಮಾಡಿಕೊಳ್ಳುತ್ತಾರೆ? ಮಾನ್ಯ ಅಧ್ಯಕ್ಷರೇ, ನಾನು ಅವರಲ್ಲಿ ವಿಜ್ಞಾಪಣೆ ಮಾಡಿಕೊಳ್ಳುವುದೇನೆಂದರೆ ತಪ್ಪು ಮಾಡಿದಂತಹ ವ್ಯಕ್ತಿಯನ್ನು ತಪ್ಪು ಮಾಡಿದ್ದಾರೆಂದು ಹೇಳಿವರೆ ಸಾಬೀತು ಮಾಡಿದರೂ ಕೂಡ ನೀವು ಏತಕ್ಕೆ ತೆಗೆಯಲಿಲ್ಲವೆಂದು ತಮ್ಮ ಮುಖಾಂತರ ಮಾನ್ಯ ಮಿತ್ರರಿಗೆ ಹೇಳಿದರೆ ಅದು ಅಪರಾಧವೇ? ಈ ಕರ್ನಾಟಕಕ್ಕೆ ನಿಮ್ಮ ಸಂಸ್ಥೆಗೆ ಬೆಂಬಲಿಸಿರಿ ಅಪ್ಪಾ ಎಂದು ಪುಟ್ಟಸ್ವಾಮಯ್ಯನವರು ಎದ್ದು ನಿಂತು ಹೇಳಿದರೆ ಮೇಲೆ ಬೀಳಲಿಕ್ಕೆ ಬರುತ್ತಾ ಇದ್ದಾರೆ. ನಾನು ಒಂದು ಮಾತನ್ನು ಲಾಟ್ರಿ ಬಗ್ಗೆ ಹೇಳುತ್ತಾ ಕೆಲವು ಪ್ರಾಯಶ: ನನ್ನ ಬಗ್ಗೆ ಸೌಜನ್ಯಶೀಲರಾದ ಆದ ಶ್ರೀಮಾನ್ ಘೋರ್ಪಡೆಯವರಿಗೆ ಹೇಳುವುದು ಇಷ್ಟೆ. ನಾನು ಲಾಟ್ರಿ ಬಗ್ಗೆ ಹೇಳುತ್ತಾ ಒಂದು ಜ್ಞಾಪಕ ನೆನಸಿಕೊಂಡೆ ಅದು ಏನೆಂದರೆ ಮಂತ್ರಿಗಳು ಒಂದು ಆಜ್ಞೆಯನ್ನು ಮಾಡಿದರೆ ಅದು ರಾಮಬಾಣ ಇದ್ದಂತೆ ಇರಬೇಕು ಎಂದು ಮಾನ್ಯ ಶ್ರೀ ಹನುಮಂತಯ್ಯನವರು ಹೇಳಿದ್ದಾರೆ. ಮಂತ್ರಿಗಳ ಬಾಯಿಂದ ಮಾತು ಬಂದಮೇಲೆ ಅದು ಒಂದು ಸ್ಥಿರವಾಗಿ ಇರಬೇಕು ಎಂದು ನಾನು ಹೇಳುವ ಮಾತಲ್ಲ. ಅವರ ಪಕ್ಷದವರು ಹೇಳಿರುವ ಮಾತನ್ನೇ ನಾನು ಇಲ್ಲಿ ಜ್ಞಾಪಕಕ್ಕೆ ತರುತ್ತಿದ್ದೇನೆ. ಇದನ್ನು ನಾವು ನೀವು ಹೇಳಿಕೊಂಡು ಓಡಾಡುವುದಲ್ಲ ಯಾರುಯಾರು ರುಜುವಾತು ಮಾಡುವುದಿಲ್ಲ ಅವರ ಪಕ್ಷ ರುಜುವಾತು ಮಾಡುತ್ತದೆ. ಅವರ ಪಕ್ಷದವರು ಹೇಳುವ ಮಾತನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಪುಟ್ಟಸ್ವಾಮಯ್ಯನವರಲ್ಲಿ ಒಂದು ಮಾತನ್ನು ಹೇಳುತ್ತೇನೆ. ಮಾತಿನಿಂದ ವಿವಾದಕ್ಕೆ ಹೋಗಬಾರದು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನು ಮಾತನಾಡುತ್ತಿರುವಾಗ ಮಧ್ಯೆ ಮಾತನಾಡುವುದು ಸರಿಯಲ್ಲ. ನಾನು ಹೇಳುವುದನ್ನು ನಾನು ರುಜುವಾತುಪಡಿಸುತ್ತೇನೆ ಎಳ್ಳಷ್ಟು ಹಿಂದಕ್ಕೆ ಸರಿಯುವುದಿಲ್ಲ. ಹಾಗೇನಾದರೂ ನಾನು ಹೇಳಿರುವುದರಲ್ಲಿ ತಪ್ಪಿದ್ದರೆ ನನ್ನ ತಲೆಯನ್ನು ತೆಗೆದರೂ ತೆಗೆಸಿಕೊಳ್ಳುವುದಕ್ಕೆ ಸಿದ್ಧನಿದ್ದೇನೆ.

MR. CHAIRMAN.—It is only a general and sweeping remark.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನು ನನ್ನ ಕಾಲಮೇಲೆ ನಿಂತಿದ್ದೇನೆ. ಅವರಿಗೆ ಕಸಬು ಗೊತ್ತೇ ಇಲ್ಲ. ನಾನು ರೈತನ ಮಗ ನೇಗಿಲು ಹೊತ್ತು ಹೊಲ ಉಳುವವನು?

SRI M. Y. GHORPHADE.—When an hon. member on this side made a much milder remark, you were good enough to uphold it. Now serious remarks are made which are of far serious consequence.

MR; CHAIRMAN.—That was a direct and personal attack. Here it is not so.

SRI M. Y. GHORPADE.—This is also a direct attack.

SRI D. B. KALMANKAR.—Those sweeping remarks should be expunged.

SRI S. M. KRISHNA.—I rise to a point of order. ಸ್ವಾಮಿ, ಮಾನ್ಯ ಪುಟ್ಟಸ್ವಾಮಯ್ಯನವರು ಕೆಲವೊಂದು ಆರೋಪಣೆಗಳನ್ನು ಮಾಡಿದ್ದಾರೆ. ಒಬ್ಬರು ಮತ್ತೆ ಒಬ್ಬರ ಮೇಲೆ ಆರೋಪಣೆ ಮಾಡಿಕೊಂಡು ಹೋಗುತ್ತಾ ಇದ್ದರೆ ಅದಕ್ಕೆ ಕೊನೆಯಿರುವುದಿಲ್ಲ. ಈಗ ಮಾನ್ಯ ಪುಟ್ಟಸ್ವಾಮಯ್ಯನವರ ಪಕ್ಷ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರತಕ್ಕಂಥ ಪಕ್ಷ. ಆದ್ದರಿಂದ ಅವರ ಮೇಲೆ ಇನ್ನು ಹೆಚ್ಚಿನ ಜವಾಬ್ದಾರಿ ಇದೆಯೆಂದು ಜ್ಞಾಪಿಸಿಕೊಳ್ಳಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನು ಎಲ್ಲರನ್ನು ಎಂದು ಹೇಳಲಿಲ್ಲ. ಆ ಪಕ್ಷದ ಮೇಲೆ ಹೇಳಿರತಕ್ಕಂಥಾದ್ದು. ಅದನ್ನು ಸಭೆಯಲ್ಲಿ ಒಪ್ಪಿದ್ದೇನೆ. ಅಂಥಾದ್ದನ್ನು ಹೇಳಿ ಮುಂದೆ ನನ್ನ ಭಾಷಣವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಕೃಷ್ಣಾರವರು ಒಂದು ಮಾತು ಹೇಳಿದರು ಕೇಂದ್ರದಲ್ಲಿ ನಮ್ಮ ಸರ್ಕಾರ ಇದೆಯೆಂದು. ನಾನು ಹಿಂದೆ ಮಾತನಾಡುವಾಗ ಕೇಂದ್ರದಲ್ಲಿ ನಿಮ್ಮ ಸರ್ಕಾರ ಇತ್ತು. ಆದರೆ ಇರುವುದನ್ನು ಇದ್ದ ಹಾಗೆ ಮಾತನಾಡುವುದಕ್ಕೆ ನಮ್ಮ ಸರ್ಕಾರ ನಿಮ್ಮ ಸರ್ಕಾರ ಮುಖ್ಯವಲ್ಲ.

ನಾನು ಬೇಜವಾಬ್ದಾರಿಯುತವಾಗಿ ಈ ಮಾತನ್ನು ಉಪಯೋಗಿಸುತ್ತಿಲ್ಲ, ಆ ರೀತಿ ಉಪಯೋಗಿಸಬೇಕಾದಂಥ ಪ್ರಮೇಯವೂ ಇಲ್ಲ, ನಾನು ಈ ಪಕ್ಷದಲ್ಲಿಯೇ ಇರಲಿ ಇಲ್ಲ ಆ ಪಕ್ಷದಲ್ಲಿಯೇ ಇರಲಿ ಅಸತ್ಯವನ್ನು ಅಸತ್ಯವೆಂದು ಹೇಳದೆ ಸುಮ್ಮನೇ ಕುಳಿತುಕೊಳ್ಳತಕ್ಕಂಥ ವ್ಯಕ್ತಿ ಅಲ್ಲವೆಂದು ತಮ್ಮ ಮುಖಾಂತರ ಮಾನ್ಯ ಸ್ನೇಹಿತರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಹಿಂದೆ ನಿಮ್ಮ ಪಕ್ಷದ ಸಚಿವರ ಮೇಲೆ ತೀವ್ರವಾದ ಅಪಾದನೆ ಮಾಡಿದ್ದೆ, ಸಮಾಜ ಕಲ್ಯಾಣ ಸಚಿವರ ಮೇಲೆ ಶ್ರೀಮಾನ್ ರಾಚಯ್ಯನವರ ಮೇಲೆ ಅಪಾದನೆ ಮಾಡಿದ್ದೆ. ಆದರೆ ನಾನು ಮಾಡಿದಂಥ ಅಪಾದನೆಗಳಿಗೆ ಯಾರು ಈ ದಿವಸ ಎದ್ದು ನನ್ನನ್ನು ಪ್ರತಿಭಟಿಸುತ್ತಿದ್ದಾರೆ ಅವರು ಒಂದು ಎನ್‌ಕ್ವೈರಿ ಮಾಡತಕ್ಕ ಒಂದು ಸಣ್ಣ ನಿರ್ಣಯಕ್ಕೆ ಪ್ರಯತ್ನ ಮಾಡಲಿಲ್ಲವೆಂದು ಕೇಳುತ್ತೇನೆ. ಇದನ್ನು ನಾನು ಅಧ್ಯಕ್ಷರ ಮುಖಾಂತರ ಕರ್ನಾಟಕ ಜನತೆಯ ಮುಂದೆ ಹೇಳಿದರೆ ತಪ್ಪೇನು? ಇದು ಯಾರ ಮನೆಯ ಆಸ್ತಿ? ಆಗಿರತಕ್ಕಂಥ ಅನ್ಯಾಯ ಸಾರ್ವಜನಿಕ ಸ್ವತ್ತಿನ ಲೂಟಿಯನ್ನು ಮಂತ್ರಿಯವರ ಹೆಸರಿನಲ್ಲಿ ಅಥವಾ ಪಕ್ಷದ ಹೆಸರಿನಲ್ಲಿ ಮಾಡಿದರೆ ಅದನ್ನು ಅಧ್ಯಕ್ಷರ ಮುಖಾಂತರ ನಾವು ಹೇಳದೇ ಹೋದರೆ ಇಲ್ಲಿ ನಾವು ಏತಕ್ಕೆ ಕುಳಿತುಕೊಳ್ಳಬೇಕು? ಅದನ್ನು ಹೇಳುವುದಕ್ಕೆ ಆಗದೆ ಹೋದರೆ ನಾವು ಇಲ್ಲಿ ಏತಕ್ಕೆ ಇರಬೇಕು? ಅದನ್ನು ಹೇಳಿದರೆ ತಪ್ಪೇನಿದೆ? ಆದುದರಿಂದ ನಾವೆಲ್ಲರೂ ಬಿಚ್ಚು ಮನಸ್ಸಿನಿಂದ ಮಾತನಾಡೋಣ. ಕರ್ನಾಟಕ, ಹಿಂದೆ ಮೈಸೂರು ಆಗಿತ್ತು. ಇದು ಕನ್ನಡ ನಾಡು ಚಿನ್ನದ ನಾಡು, ಗಂಧದಗುಡಿ ಆದ್ದರಿಂದ ನಾವು ಆಡಳಿತವನ್ನು ಸರಿಯಾಗಿ ನಡೆಸಿಕೊಂಡು ಹೋಗೋಣವೆಂದು ಹೇಳಿದೆನೇ ಸಿವಾಯಿ, ನಿಮ್ಮ ಪಕ್ಷದ ಹೆಸರಿನಲ್ಲಿ ನೀವು ದುಡ್ಡು ಹೊಡಿದಿರಿ, ಅದು ಸರಿಯೋ ತಪ್ಪೋ ಅದು ನಿಮ್ಮ ಪಕ್ಷಕ್ಕೆ ಬಿಟ್ಟದ್ದು. ಆದುದರಿಂದ ಅದರ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ

5–00 P.M.

ಇನ್ನು ಮಾನ್ಯ ಘೋರ್ಪಡೆಯವರ ಬಗ್ಗೆ ನಾನೊಂದು ಮಾತನ್ನು ಹೇಳಿದೆ. ಇನ್ನು ನಿಮ್ಮ ವಿಷಯ ಮುಟ್ಟಲಿಲ್ಲ ಆಗಲೇ ಕೆರೆದುಕೊಳ್ಳುತ್ತೀರಲ್ಲಾ. ಅಷ್ಟು ಮೈ ನೋವೇ ಪಾಪ. ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಹೇಳಿದರು ನೀವು ಇಟ್ಟಿರತಕ್ಕ ಹೆಚ್ಚುವರಿ ಬೇಡಿಕೆಯ ಪ್ರತಿಯೊಂದು ಕಾಸೂ ಕರ್ನಾಟಕದ ಅಭಿವೃದ್ಧಿಗೋಸ್ಕರ ಮೀಸಲು ಎಂದು ; ನಿನ್ನೆ ಹೇಳಿದರು ಅದನ್ನು ಕೇಳಿದಾಗ ನನಗೆ ಬಹಳ ಸಂತೋಷವಾಯಿತು. ಆದರೆ ಒಳಹೊಕ್ಕು ನೋಡಿದಾಗ ಅದರ ಬಗ್ಗೆ ಇವತ್ತು ಸಾಯಂಕಾಲ ೭ ಗಂಟೆಯವರೆಗೂ ಅವಕಾಶ ಕೊಟ್ಟರೂ ಹೇಳಬಹುದು. ಆದರೆ ಕಾಲದ ಅಭಾವವಿದೆ. ಇವತ್ತು ೩೨ ಕೋಟಿ ರೂಪಾಯಿಗಳೇ ಇರಲಿ, ೩೦ ರೂಪಾಯಿಗಳೇ ಇರಲಿ, ೩೦ ಪೈಸೇನೇ ಇರಲಿ ಅದು ಸಾರ್ವಜನಿಕರ ದುಡ್ಡು. ಅವರ ಆತ್ಮ ಒಪ್ಪುವ ಹಾಗೆ ಅವರು ಹೇಳಿ ಬಿಡಲಿ, ಅವರು ಇಲಾಖೆಗಳಿಗೆ ಕೊಟ್ಟ ದುಡ್ಡಿನಲ್ಲಿ ಇಲಾಖೆಯವರು ೫ ಪರ್ಸೆಂಟ್‌ಗಿಂತ ಮೀರಿ ದುಡ್ಡು ಹೊಡಿದಿದ್ದರೆ ನೀವು ರಾಜೀನಾಮೆ ಕೊಡುತ್ತೀರಾ ಸ್ವಾಮಿ ? ಇದನ್ನು ನಾವು ಕೇಳಬಾರದೇ ? ಈ ಮಾತನ್ನು ಹೇಳಿದರೆ ಮಾನ್ಯ ಕೃಷ್ಣರವರು ಕುಪಿತರಾಗುತ್ತಾರೆ. ಆದುದರಿಂದ ಇದನ್ನು ನಾನು ಹೇಳದೆ ಕಾದ ಎಣ್ಣೆ ಕೊಪ್ಪರಿಕೆಯಲ್ಲಿ ಬೀಳಲೇ ?

ಚೇರ್ಮನ್‌ರವರು.—ಮಾನ್ಯ ಸದಸ್ಯರು ಬೇಗನೆ ಭಾಷಣವನ್ನು ಮುಗಿಸಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ — ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನಾವೆಲ್ಲರೂ ಈ ದೇಶದ ಅಭಿವೃದ್ಧಿಯನ್ನು ಬಯಸುವವರು ಚಿಕ್ಕೇಗೌಡರವರು ಮಂತ್ರಿ ಮಾನ್ಯ ಯಾಗಿದ್ದಾಗ ಹಾಲಿನ ಬೆಲೆ ೬೦ ಪೈಸೆ ಕಡಿಮೆಯಾಗಿದ್ದು ಇವತ್ತು ೨೦ ಪೈಸೆ ಜಾಸ್ತಿಯಾಗಿದೆ, ಇದು ಏತಕ್ಕೆ ಜಾಸ್ತಿ ಮಾಡಿದ್ದಾರೆ ಎಂದು ಕೇಳುವುದು ತಪ್ಪೇ, ಆ ರೀತಿನೂ ಕೇಳಬಾರದೇ ? ಇದು ಏನು ಸ್ವಾಮಿ, ನ್ಯಾಯ ಒಬ್ಬ ಮಂತ್ರಿ ಬಂದಾಗ ಕಡಿಮೆ ಬೆಲೆ, ಇನ್ನೊಬ್ಬ ಮಂತ್ರಿ ಬಂದಾಗ ಜಾಸ್ತಿ...

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಬೇಸಿಗೆ ಕಾಲದಲ್ಲಿ ಹಾಲು ಸಿಗುವುದಿಲ್ಲ ಎನ್ನುವುದನ್ನು ಮಾನ್ಯ ಸದಸ್ಯರು ಮರೆತು ಬಿಟ್ಟಿದ್ದಾರೆಂದು ಕಾಣುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನೀವು, ನಾನು ಮತ್ತು ನನ್ನ ಹೆಂಡ್ತಿ ದನ ಮೇಯಿಸುವುದಿಲ್ಲ. ಆದುದರಿಂದ ನಾನು ಹೇಳುತ್ತಿದ್ದೆ, ಮಾನ್ಯ ಚಿಕ್ಕೇಗೌಡರವರು ಇದ್ದಾಗ ಕಡಿಮೆಯಾಗಿದ್ದ ಹಾಲಿನ ಬೆಲೆಯನ್ನು ಮಾನ್ಯ ಬಣಕಾರ್‌ರವರು ಮಂತ್ರಿಗಳಾಗಿ ಬಂದಮೇಲೆ ೨೦ ಪೈಸೆ ಜಾಸ್ತಿ ಏತಕ್ಕೆ ಮಾಡಿದ್ದಾರೆ ಎನ್ನುವ ಬಗ್ಗೆ ಮಾರ್ಕೆಟ್ಟಿನ ಹತ್ತಿರ ಜನ ಮಾತನಾಡುತ್ತಿದ್ದರು, ಮುಖ್ಯ ಮಂತ್ರಿಗಳವರೆಗೆ ೨೦ ಲಕ್ಷ ರೂಪಾಯಿಗಳನ್ನು ಕೊಟ್ಟು ಮಾನ್ಯ ಬಣಕಾರ್‌ವರು ಮಂತ್ರಿಗಳಾದರು, ಅದಕ್ಕೆ ಈಗ ೨೦ ಪೈಸೆ ಜಾಸ್ತಿ ಮಾಡಿದ್ದಾರೆ ಎನ್ನುವ ದೂರು ಇದೆ ಅದನ್ನು ನಾನು ಕೇಳಿಕೊಂಡು ಬಂದೆ.

ಶ್ರೀ ಎಸ್. ಎಂ. ಕೃಷ್ಣ.—ರಸ್ತೆಯಲ್ಲಿ ಜನ ಹೇಳುವುದನ್ನೆಲ್ಲಾ ಕೇಳಿಕೊಂಡು ಬಂದು ಹೇಳುವುದು ಸರಿಯಲ್ಲ.

ಚೇರ್ಮನ್‌ರವರು.—ಮಾನ್ಯ ಶ್ರೀ ಬಿ. ಪುಟ್ಟಸ್ವಾಮಯ್ಯನವರು ಮಾತನಾಡುವಾಗ, * ಎನ್ನುವ ಪದವನ್ನು ಉಪಯೋಗಿಸಿದ್ದಾರೆ. * ಆ ಪದವನ್ನು ತೆಗೆದು ಹಾಕಬೇಕು. ಹಾಗೂ ಆ ವಿಷಯವನ್ನೇ ರಿಕಾರ್ಡ್‌ನಿಂದ ತೆಗೆದು ಹಾಕುವುದು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಆಡಳಿತ ನಡೆಸುವಾಗ ಜಾಗರೂಕತೆಯಿಂದ, ದಕ್ಷತೆಯಿಂದ ನಡೆಸಬೇಕು ನಾಳೆ ಇನ್ನೊಬ್ಬ ಮಂತ್ರಿ ಬಂದರೂ ಕೂಡ ಅದನ್ನು ಹೆಚ್ಚು ಬೇಕು ಅಂಥಾ ಆಡಳಿತ ನಡೆಸಬೇಕಲ್ಲ ಹೊರತು, ಒಬ್ಬ ಮಂತ್ರಿ ಬಂದಾಗ ೨೦ ಪೈಸೆ ಜಾಸ್ತಿ ಮಾಡುವುದು ಇನ್ನೊಬ್ಬ ಮಂತ್ರಿ ಬಂದಾಗ ಕಡಿಮೆ ಮಾಡುವುದು ಸರಿಯೇ ಎನ್ನುವ ಬಗ್ಗೆ ಪ್ರಶ್ನೆ ಮಾಡಿದೆನೇ ಶಿವಾಯಿ, ಮತ್ತೆ ಇನ್ನಾವ ಅಭಿಪ್ರಾಯದಿಂದಲೂ ಅಲ್ಲ. ಮತ್ತೆ ಮಾನ್ಯ ಘೋರ್ಪಡೆಯವರು ಒಂದು ಮಾತನ್ನು ಹೇಳಿದರು ಅದರಿಂದ ನನ್ನ ಮನಸ್ಸಿಗೆ ಬಹಳ ನೋವು ಆಗುತ್ತದೆ. ಅದು ಏನೆಂದರೆ ಅಪ್ರಾಮಾಣಿಕವಾದ ರೀತಿಯಲ್ಲಿ ಮಾತನಾಡಬೇಕೆಂದು ಹೇಳಿದರು, ಆದರೆ ಆಡಳಿತ ಪಕ್ಷದವರು ವಿರೋಧ ಪಕ್ಷದವರನ್ನು ಟೀಕಿಸಿ ಮಾತನಾಡಿದರೆ ಅದು ಅಪ್ರಾಮಾಣಿಕವಾಗಿರುತ್ತದೆಯೋ ? ನಾವು ವಿರೋಧ ಪಕ್ಷದವರು ಅಪ್ರಾಮಾಣಿಕವಾಗಿ ಮಾತನಾಡಬೇಕೆಂದು ಹೇಳಿದರೆ ನಾವು ಏನು ಡ್ಯಾನ್ಸ್ ಮಾಡಿಕೊಂಡು ಮಾತನಾಡಿದರೆ ಅವರಿಗೆ ಅಪ್ರಾಮಾಣಿಕವಾಗಿರುತ್ತದೆಯೋ ? ಆದುದರಿಂದ ಮಾನ್ಯ ಅಧ್ಯಕ್ಷರೆ ಕಡೆಯದಾಗಿ ಇನ್ನೊಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸಿ ಬಿಡುತ್ತೇನೆ. ಪ್ರಮುಖ್ಯವಾಗಿ ವಯಸ್ಸಾಗಿರತಕ್ಕಂಥ ಮಾನ್ಯ ಸಚಿವರುಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ ಅದರಲ್ಲೂ ವಯಸ್ಸಾಗಿರತಕ್ಕಂಥ ಮಾನ್ಯ ದೇವರಾಜ್ ಅರಸ್‌ರವರು, ಮಾನ್ಯ ಸಿದ್ದವೀರಪ್ಪನವರು, ಮಾನ್ಯ ಚನ್ನ ಬಸಪ್ಪನವರು ಒಬ್ಬ ಹುಡುಗನಿಗೋಸ್ಕರ ಲೆಕ್ಕಾಚಾರವಿಲ್ಲದ ೨೮–೩೦ ಲಕ್ಷ ರೂಪಾಯಿಗಳನ್ನು ಹಾಳುಮಾಡಿದಿರಿ, ಆದುದರಿಂದ ನೀವು ಇವತ್ತು ವಿರೋಧ ಪಕ್ಷದವರಾಗಿ ವಿರೋಧ ಪಕ್ಷಕ್ಕೆ ಬಂಡವಾಳ ಮಾಡಿಕೊಳ್ಳಬೇಕೆಂದು ಅವರನ್ನು ಕರೆಸಿ ೨೦–೩೦ ಲಕ್ಷ ರೂಪಾಯಿಗಳನ್ನು ಸಂಗ್ರಹಣೆ ಮಾಡಿಕೊಳ್ಳಿ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೇ ಈಗಾಗಲೇ ಆನೇಕ ಮಾನ್ಯ ಮಿತ್ರರು ಹೆಚ್ಚುವರಿ ಬೇಡಿಕೆಯ ವಿರುದ್ಧ ಮಾತನಾಡಿ, ರಾಜಕೀಯದ ಬಗ್ಗೆ ಮತ್ತು ಇಂದಿನ ಪರಿಸ್ಥಿತಿಯ ಬಗ್ಗೆ ಬಹಳ ವಿವರವಾಗಿ ಮಾತನಾಡಿದ್ದಾರೆ ಇನ್ನು ಕೆಲವರು ತೀಕ್ಷ್ಣವಾಗಿ ಮಾತನಾಡಿದ್ದಾರೆ. ಮಾನ್ಯ ಪುಟ್ಟ ಸ್ವಾಮಯ್ಯನವರು ಬಹಳ ಕಟುವಾಗಿ ಮಾತನಾಡಿದ್ದನ್ನು ನಾವು ಕೇಳಿದ್ದೇವೆ. ನಾನು ಈ ರಾಜಕೀಯ ವಿಷಯದ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ, ನಮ್ಮ ಪಕ್ಷದ ಪರವಾಗಿ ಮಾನ್ಯ ಗೆಳೆಯರಾದ ಕಕ್ಕ

*Expunged as ordered by the Chair.

ಲಯಂವರು ಮತ್ತು ಪಾಟೀಲ್‌ರವರು ಮಾತನಾಡಿದ್ದಾರೆ. ಆದರೆ ಒಂದು ಮಾತನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪರಿಸ್ಥಿತಿ ಇಂದು ಬದಲಾವಣೆಯಾಗಿದೆ ಮತ್ತು ಪೂರ್ತಿ ಬದಲಾವಣೆಯಾಗಿದೆ ಎನ್ನುವುದನ್ನು ನಾವೆಲ್ಲರೂ ಅರಿತುಕೊಳ್ಳಬೇಕು ಅದು ಮೊದಲನೇ ಬಿನ್ನಹ. ಹಿಂದೆ ಇದ್ದಂಥ ವಾತಾವರಣ, ಪರಿಸ್ಥಿತಿ ಇಂದು ನಮ್ಮ ದೇಶದಲ್ಲಿ ಇಲ್ಲ, ಪೂರ್ತಿಯಾಗಿ ಬದಲಾವಣೆಯಾಗಿದೆ. ಅವಿಚ್ಛಿನ್ನವಾಗಿ ೩೦ ವರ್ಷಗಳ ಕಾಲ ರಾಜ್ಯಭಾರ ನಡೆಸಿದಂಥ ಕಾಂಗ್ರೆಸ್ ಪಕ್ಷ ಬೇರೆ ಒಂದು ಪಕ್ಷಕ್ಕೆ ಅದು ಜನತಾ ಪಕ್ಷಕ್ಕೆ ಬಿಟ್ಟು ಕೊಡಬೇಕಾದಂಥ ಒಂದು ಸಂದಿಗ್ಧ ಪರಿಸ್ಥಿತಿ ಬಂದಿದೆ. ಮತ್ತೆ ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅತಿ ಹೆಚ್ಚಿನ ಬಹುಮತದಿಂದ ಲೋಕ ಸಭೆಗೆ ತನ್ನ ಸದಸ್ಯರನ್ನು ಆರಿಸಿ ಕಳುಹಿಸಿದೆ. ಇದರಿಂದ ಅನೇಕ ಪ್ರಶ್ನೆಗಳು ಉದ್ಭವವಾಗುತ್ತದೆ ಎಂದು ನನ್ನ ಅಭಿಪ್ರಾಯ. ಈಗ ಮಾನ್ಯ ಅರ್ಥಸಚಿವರು ನಮ್ಮ ಮುಂದೆ ಬಡ್ಜೆಟ್‌ನ್ನು ಮಂಡಿಸಿದ್ದಾರೆ.

ಆದರೆ ಹೆಚ್ಚುವರಿ ಬೇಡಿಕೆಯಾಗಲೀ, ಆಯವ್ಯಯ ಮಂಡನೆಯಾಗಲೀ ಅಥವ ಸರ್ಕಾರದವರು ಹಾಕಿಕೊಂಡಿರುವ ಕಾರ್ಯಕ್ರಮಗಳಾಗಲೀ ಅವೆಲ್ಲವೂ ಕೇಂದ್ರದ ನೀತಿಯ ಮೇಲೆ ಸಹ ಹೊಂದಿಕೊಂಡಿವೆ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಏನಾದರೂ, ಈಗಿನ ಕೇಂದ್ರ ಸರ್ಕಾರ ಮೊದಲಿದ್ದ ಕಾಂಗ್ರೆಸ್ ಪಕ್ಷದ ನೀತಿಗಳನ್ನನುಸರಿಸುವುದಿಲ್ಲ ಎನ್ನುವುದು ಅವರ ಹೇಳಿಕೆಗಳಿಂದಲೇ ತಿಳಿದುಬರುತ್ತದೆ. ಇದಕ್ಕಿಂತಲು ಮುಖ್ಯವಾಗಿ ನಮ್ಮ ದೇಶದಲ್ಲಿ ಇಂಥಾ ಪರಿಸ್ಥಿತಿ ಬರಲು ಕಾರಣವೇನು? ಏತಕ್ಕೋಸ್ಕರ ಬಂದಿತೆನ್ನುವುದನ್ನು ಆಳವಾಗಿ ಆಲೋಚನೆ ಮಾಡಿ ಅದಕ್ಕೆ ಸರಿಯಾದ ಪಾಠಗಳನ್ನು ಕಲಿಯುವ ಜವಾಬ್ದಾರಿ ಮತ್ತು ಕರ್ತವ್ಯ ಆಳುವ ಪಕ್ಷದವರಿಗೂ ಮತ್ತು ಇತರ ಎಲ್ಲರಿಗೂ ಅವಶ್ಯವಿದೆ. ಗೆದ್ದಿರುವ ಜನತಾ ಪಕ್ಷದವರಿಗೆ, ನಾವು ಗೆದ್ದು ಬಿಟ್ಟಿದ್ದೇವೆ, ಎಲ್ಲವನ್ನೂ ಮಾಡುತ್ತೇವೆ ನಮ್ಮನ್ನು ಮೀರಿಸುವವರಾರೂ ಇಲ್ಲ ಎನ್ನುವ ಅಭಿಪ್ರಾಯವಿದ್ದರೆ, ಅದು ಸರಿಯಾದುದಲ್ಲ ಎನ್ನುವುದು ನನ್ನ ಅಭಿಪ್ರಾಯ. ಇಲ್ಲಿ ಆ ಕಡೆಯುವರು ಹೇಳುವ ಧಾಟಿ ಮಾತನಾಡುವ ಶೈಲಿ ಗಮನಿಸಿದರೆ, ಅವರನ್ನು ಮೀರಿಸುವವರಾರೂ ಇಲ್ಲವೆನ್ನುವಂತೆ ಕಾಣುತ್ತಿದೆ. ನಾವು ಎಲ್ಲವನ್ನೂ ಸರಿ ಮಾಡಿಬಿಡುತ್ತೇವೆ ಎನ್ನುವ ಅಭಿಪ್ರಾಯವನ್ನಿಟ್ಟುಕೊಂಡಿರುವವರಂತೆ ಕಾಣುತ್ತಿದ್ದಾರೆ. ಆದರೆ, ಇದು ಎಷ್ಟರಮಟ್ಟಿಗೆ ನಿಜ ಅಥವಾ ಸುಳ್ಳು ಎನ್ನುವುದನ್ನು ನಾಳೆ ಕಾದು ನೋಡಬೇಕಾಗಿದೆ. ಸಾಮಾನ್ಯವಾಗಿ, ಚಲನಚಿತ್ರ ಪುಸ್ತಕಗಳಲ್ಲಿ ಸ್ವಲ್ಪ ಕಥೆಹೇಳಿ, ಉಳಿದಿದ್ದನ್ನು ಪರದೆಯ ಮೇಲೆ ನೋಡಿ ಎಂದು ಇರುತ್ತದೆ. ಹಾಗೆಯೇ, ಇದನ್ನು ಕೂಡ ನಾವು ಕಾದು ನೋಡಿ ತೀರ್ಮಾನವಾಗಬೇಕಾಗಿದೆಯೇ ವಿನಹ ಈಗಲೇ ಹೇಳುವುದು ಸಾಧ್ಯವಾದುದಲ್ಲ. ಇಂದಿನ ಈ ಪರಿಸ್ಥಿತಿ ಬರುವುದಕ್ಕೆ ಈ ಸರ್ಕಾರ ಮತ್ತು ಸರ್ಕಾರದ ಧೋರಣೆಯೇ ಕಾರಣ ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಇದರ ವಿಚಾರವಾಗಿ ಎಲ್ಲೆಡೆಯಲ್ಲೂ ಬಹಳವಾಗಿ ಚರ್ಚೆ ನಡೆದಿದೆ. ಮುಖ್ಯವಾದ ಘಟನಾವಳಿಗಳನ್ನು ನೋಡಿದರೆ, ಕೇಂದ್ರದಲ್ಲಿ ಸಂವಿಧಾನೇತರವಾಗಿ ಅಂಟಿಕೊಂಡಿರುವ ವ್ಯಕ್ತಿಗಳು ಮತ್ತು ಅವರ ಚಟುವಟಿಕೆಗಳು ಹಾಗೂ ಅವರ ಹಾವಳಿಗಳು ಕಾಂಗ್ರೆಸ್ ಪಕ್ಷದ ಸೋಲಿಗೆ ಕಾರಣ ಎಂದು ಹೇಳಬಹುದಾಗಿದೆ. ತುರ್ತು ಪರಿಸ್ಥಿತಿ ಮತ್ತು ಅದರಿಂದಾದ ಅನ್ಯಾಯಗಳು ; ಕುಟುಂಬ ಯೋಜನೆ ಕೃತ್ಯಗಳೂ ಕಾರಣವಾದವು. ಒತ್ತಾಯಪಡಿಸಿ ಶಸ್ತ್ರಚಿಕಿತ್ಸೆ ಮಾಡಿಸಲಾದ ಕಾರಣದಿಂದ ನಮ್ಮ ದೇಶದ ಅನೇಕರಿಗೆ ಅನ್ಯಾಯವಾದ ಅನಾಹುತಗಳಾಗಿವೆ, ಕರ್ನಾಟಕ ರಾಜ್ಯದಲ್ಲಿ, ತಮಿಳುನಾಡಿನಲ್ಲಿ, ಕೇರಳ ಮತ್ತು ಆಂಧ್ರ ಪ್ರದೇಶದಲ್ಲಿ ಈ ಪ್ರಮಾಣದಲ್ಲಿ ನಡೆದಿಲ್ಲದಿರಬಹುದು. ಆದರೆ, ಅದರ ಬಿಸಿ ಇವತ್ತು ಯಾವ ರೀತಿ ತಟ್ಟಿದೆ ಎನ್ನುವುದನ್ನು ನಾವು ಈಗಾಗಲೇ ನೋಡಿದ್ದೇವೆ. ೨೦ ಅಂಶಗಳ ಕಾರ್ಯಕ್ರಮವನ್ನು ಸರಿಯಾದ ರೀತಿಯಲ್ಲಿ ಕಾರ್ಯರೂಪಕ್ಕೆ ತರದೆ, ಅಧಿಕಾರಿಗಳ ಮೇಲೆ ಅವಲಂಬಿತವಾಗಿದ್ದರಿಂದ ಮತ್ತು ಸಾರ್ವಜನಿಕ ಸಹಕಾರ ಮತ್ತು ಸಹಾಯಗಳನ್ನು ಪಡೆದು ನಿಷ್ಠೆಯಿಂದ ಕಾರ್ಯರೂಪಕ್ಕೆ ತರಲು ಸಾಧ್ಯವಾಗದೇ ಇರುವುದರಿಂದ, ಇಂಥಾ ಪರಿಸ್ಥಿತಿ ಬಂದಿದೆ ಎನ್ನುವುದು ನನ್ನ ಸ್ಪಷ್ಟ ಅಭಿಪ್ರಾಯ. ಈಗ ಅದರ ಬಗ್ಗೆ ನಾನು ಹೆಚ್ಚು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಈ ಹಿನ್ನೆಲೆ ಈಗ ಹೆಚ್ಚುವರಿ ಬೇಡಿಕೆಯಲ್ಲಿ ಮಾನ್ಯ ಅರ್ಥ ಮಂತ್ರಿಗಳು ಸಭೆಯ ಮುಂದೆ ತಂದಿದ್ದಾರೆ. ಅದನ್ನು ಮಂಡಿಸುತ್ತಾ ಮಾನ್ಯ ಮಂತ್ರಿಗಳು, ಅಭಿವೃದ್ಧಿ ಕಾರ್ಯಗಳಿಗಾಗಿ ಹೆಚ್ಚು ಹಣ ಬೇಕಾಯಿತು ಎಂದು ಹೇಳಿದ್ದಾರೆ. ಇದನ್ನು ಸ್ವಲ್ಪಮಟ್ಟಿಗೆ ಪರಿಶೀಲನೆ ಮಾಡಲು ಪ್ರಯತ್ನಪಟ್ಟೆ. ನಮ್ಮ ರಾಜ್ಯದಲ್ಲಿ ಎಷ್ಟರಮಟ್ಟಿಗೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ ಎನ್ನುವ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸಲು ಪ್ರಯತ್ನಪಟ್ಟೆ. ಆದರೆ ಸಫಲವಾಗಲಿಲ್ಲ. ಈ ಸೆಕ್ರೆಟರಿಯೇಟ್‌ನಲ್ಲಿ ಯೋಜನೆಗಾಗಿ ಮತ್ತು ಯೋಜನೇತರ ಬಾಬುಗಳಿಗಾಗಿ ಎಷ್ಟು

ಖರ್ಚು ಮಾಡಲಾಗಿದೆ ಎಂಬುದನ್ನು ತಿಳಿದೆನು. ಹೊರತು ದೇವರಾಜ ಅರಸ್ ಅವರು ಬಂದಕಾಲದಿಂದ ಇಲ್ಲಿಯವರೆಗೆ ಡೆವಲಪ್‌ಮೆಂಟ್ ಮತ್ತು ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಎಷ್ಟು ಮಾಡಲಾಗಿದೆ ಎಂಬುದನ್ನು ತಿಳಿಯಲಿಕ್ಕೆ ಪ್ರಯತ್ನಪಟ್ಟು ವಿಫಲನಾದೆನು.

ಶ್ರೀ ಎಂ. ವೈ. ಘೋರ್ಪಡೆ.—ಬಡ್ಜೆಟ್‌ನ್ನು ಗ್ಲಾನ್ಸ್ ಮಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ಬಡ್ಜೆಟ್ ಗ್ಲಾನ್ಸ್ ಮಾಡಿದರೆ, ಸ್ವಲ್ಪ ಸಂಶಯ ಬರುತ್ತ ಅವಕಾಶವಿದೆ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಜಾಸ್ತಿಯಾಗಿದೆಯೆಂದೂ, ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಜಾಸ್ತಿ ಮಾಡಿಲ್ಲವೆಂದು ಭಾವಿಸುವುದು ತಪ್ಪಾಗುತ್ತದೆ ಇದರ ಬಗ್ಗೆ ಕೇಂದ್ರದಲ್ಲಿ ಅನಾಲಿಸಿಸ್ ಮಾಡಿ, ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಶೇಕಡ ೧೦ಕ್ಕಿಂತ ಜಾಸ್ತಿಯಿದೆ ಎಂದು ತೀರ್ಮಾನಕ್ಕೆ ಬಂದಿದ್ದಾರೆ. ಆದರೂ ಅವರು ಅದು ಸರಿಯಾದುದಲ್ಲವೆನ್ನುವ ಅಭಿಪ್ರಾಯ ತಾಳಿದ್ದಾರೆ. ಆದುದರಿಂದ ಈ ಪ್ರಮಾಣಕ್ಕಿಂತಜಾಸ್ತಿಯಿದೆಯೇ ಇಲ್ಲವೋ ಎನ್ನುವ ಬಗ್ಗೆ ಯೋಚನೆ ಮಾಡುವ ಕಾಲ ಈಗ ಬಂದಿದೆ ಎಂದು ನನಗನ್ನಿಸುತ್ತದೆ. ಹೀಗಾಗಿ ಏತಕ್ಕೆ ಹೆಚ್ಚುವರಿ ಬೇಡಿಕೆಗೆ ಅವಕಾಶ ಕೊಡಬೇಕೆನ್ನುವ ಸಂಶಯ ಬರುವುದಕ್ಕೆ ಅವಕಾಶವಾಗಿದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ತಮ್ಮ ಉತ್ತರದಲ್ಲಿ ಸಮಂಜಸವಾಗಿ ತಿಳಿಸಬೇಕೆಂದು ಪ್ರಾರ್ಥನೆ.

೧೯೭೨ ರಿಂದ ಇಲ್ಲಿಯವರೆಗೆ ಪ್ರತಿಯೊಂದು ವರ್ಷಕ್ಕೂ ಆಗಿರುವ ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್‌ನ್ನು ನೋಡಿದರೆ, ನನ್ನ ಅನುಮಾನ ಇನ್ನೂ ಪರಿಹಾರವಾಗಿಲ್ಲ ಎಂದು ಹೇಳಬೇಕಾಗಿದೆ. ಹೆಚ್ಚುವರಿ ಬೇಡಿಕೆಯಲ್ಲಿ ಹಣ ಕೊಡಿ ಎಂದರೆ, ಯಾವ ರೀತಿ ಕೊಡುವುದೆಂಬ ಅನುಮಾನ ನನಗೆ ಬರುತ್ತಿದೆ. ಈಗ ಸರ್ಕಾರದವರು ಸಪ್ಲಿಮೆಂಟರಿ ಎಸ್ಟಿಮೇಟಿನಲ್ಲಿ ಸುಮಾರು ೩೦ ಕೋಟಿ ರೂಪಾಯಿಗಳು ಬೇಕು ಎಂದು ಕೇಳಿದ್ದಾರೆ; ಅದೂ ಅಲ್ಲದೆ, ಓಟ್ ಆನ್ ಅಕೌಂಟ್ ಕೂಡ ಕೇಳಿದ್ದಾರೆ. ಬೇಡಿಕೆ ಸಂಖ್ಯೆ ೫೬ರಲ್ಲಿ ಆರು ಕೋಟಿ ೫೭ ಲಕ್ಷ ೩೬ ಸಾವಿರರೂಪಾಯಿಗಳನ್ನು ಇಟ್ಟಿದ್ದಾರೆ. ಅದರಲ್ಲಿ ಮುಖ್ಯವಾಗಿ ಕೃಷ್ಣ ಮೇಲ್ದಂಡೆ ಬಗ್ಗೆ ಮಾನ್ಯ ಮಂತ್ರಿಗಳುಮಾತನಾಡಿದ್ದರೆ. ಕೃಷ್ಣ ಮೇಲ್ದಂಡೆ ಯೋಜನೆಯನ್ನು ಆದಷ್ಟು ಬೇಗ ಮುಗಿಸಬೇಕೆನ್ನುವುದು ಎಲ್ಲರ ಅಭಿಪ್ರಾಯವಾಗಿದೆ. ನಾವು ಸಹ ಪದೇ ಪದೇ ಮಾತನಾಡಿ ಅದನ್ನು ಬೇಗನೆ ಕಾರ್ಯಗೊಳಿಸಬೇಕೆಂದು ಒತ್ತಾಯ ಮಾಡುತ್ತಿದ್ದೇವೆ. ಇದು ಪಕ್ಷರಹಿತ ಪ್ರಶ್ನೆಯಾಗಿದೆ. ಆದರೆ ಸರ್ಕಾರ ಇದರ ಬಗ್ಗೆ ಹೆಚ್ಚುಗಮನಕೊಟ್ಟಿಲ್ಲ ಎನ್ನುವ ಟೀಕೆಗಳೂ ಇವೆ ಈ ಯೋಜನೆಗೆ ಸಾಕಷ್ಟು ಗಮನ ಹರಿಸಿ, ಅದಕ್ಕೆ ಬೇಕಾದಹಣವನ್ನು ಸರಿಯಾದ ಪ್ರಮಾಣದಲ್ಲಿ ಕೊಟ್ಟಿಲ್ಲವೆನ್ನುವುದು ನನ್ನ ಸ್ಪಷ್ಟವಾದ ಅಭಿಪ್ರಾಯ ಈಗ ಹೆಚ್ಚುವರಿ ಬೇಡಿಕೆಯಲ್ಲಿಟ್ಟಿರುವ ಹಣ ಆ ಯೋಜನೆಗೆ ಎಲ್ಲಿಗೆ ಸಾಕಾಗುತ್ತದೆ? ಒಂದು ವರ್ಷಕ್ಕೆ ಸುಮಾರು ಹದಿನೈದು ಕೋಟಿ ರೂಪಾಯಿಗಳಾದರೂ ಬೇಕು ಎಂದು ಇಂಜಿನಿಯರ್ ಹೇಳಿದರೆ, ನಮ್ಮ ಹತ್ತಿರ ಹಣವಿಲ್ಲ ಎಂದು ಸರ್ಕಾರದವರು ಹೇಳುತ್ತಿದ್ದಾರೆ ಆದರೆ, ಇಂಥಾ ಒಂದು ಯೋಜನೆಗೆ ಹತ್ತು ಕೋಟಿ ರೂಪಾಯಿಗಳನ್ನು ಕೇಳಿದರೂ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನೀರಾವರಿ ಯೋಜನೆಗಳು ರೈತರಿಗೆ ಮತ್ತು ದೇಶಕ್ಕೆ ಕ್ಷೇಮದಾಯಕವೆಂದು ಎಲ್ಲರೂ ಒಪ್ಪುತ್ತಾರೆ. ಆದರೆ, ಈಗ ಕೇವಲ ಆರು ಕೋಟಿ ರೂಪಾಯಿಗಳನ್ನು ಮಾತ್ರ ಕೇಳಿದ್ದಾರೆ. ಇದರಲ್ಲಿ ಇನ್ನೊಂದು ಅಂಶ ಏನೆಂದರೆ, ಈ ಯೋಜನೆಗೆ ಹಣವನ್ನು ಪಡೆಯುವುದರಲ್ಲಿ ಸರ್ಕಾರದವರು ತಮ್ಮ ಅಸಮರ್ಥತೆಯನ್ನು ತೋರಿಸಿದ್ದಾರೆ ಎನ್ನುವುದು ಈಗೇನೋ ಮಾತುಕತೆ ನಡೆದಿದೆ; ವಿಶ್ವಬ್ಯಾಂಕಿನವರು ನೂರ ಹತ್ತು ಕೋಟಿ ರೂಪಾಯಿಗಳನ್ನು ಕೊಡಿ ಎಂದು ಇವರು ಕೇಳಿದ್ದಾರೆ ಎಂದು ಹೇಳಲಾಗಿದೆ ಆದರೆ, ಆ ನೂರು ಹತ್ತು ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಅವರು ತಯಾರಾಗಿಲ್ಲ. ಸುಮಾರು ಎರಡು ವರ್ಷಗಳಿಂದ ಕೃಷ್ಣ ಮೇಲ್ದಂಡೆ ಯೋಜನೆಗೆ ಹಣ ಮಂಜೂರು ಮಾಡಲಿಕ್ಕೆ ವಿಶ್ವಬ್ಯಾಂಕಿನವರು ಮೀನ ಮೇಷ ಎಣಿಸಿ ವ್ಯವಹಾರ ನಡೆಸಿದರೂ ಇನ್ನೂ ಅದು ತೀರ್ಮಾನವಾಗಿಲ್ಲ. ಅರವತ್ತು ಕೋಟಿಯೋ ನೂರು ಕೋಟಿಯೋ ನೂರ ಹತ್ತುಕೋಟಿ ಕೊಡುವರೆ ಎನ್ನುವುದೂಗೊತ್ತಿಲ್ಲ. ಅವರು ಕೊಟ್ಟರೂ, ಅದು ಕರ್ನಾಟಕದ ಕೃಷ್ಣ ಮೇಲ್ದಂಡೆ ಯೋಜನೆಗೆ ಬರುತ್ತದೆಯೋ ? ಬರುವುದಿಲ್ಲ. ಅವರು ಕೊಡುವಾಗ ನೇರವಾಗಿ ಕೃಷ್ಣ ಮೇಲ್ದಂಡೆ ಯೋಜನೆಗೆಂದೇ ಕೊಡುವುದಿಲ್ಲ. ಇಲ್ಲಿಯವರೆಗೂ ವಿಶ್ವಬ್ಯಾಂಕಿನ ನೆರವು ಸಿಕ್ಕಿದಾಗ, ಕೇಂದ್ರ ಸರ್ಕಾರದವರು ಅದನ್ನು ಸ್ವಲ್ಪಮಟ್ಟಿಗೆ ರಾಜ್ಯಕ್ಕೆ ಕೊಟ್ಟು, ಇನ್ನುಳಿದದ್ದನ್ನು ಬೇರೆಯದಕ್ಕೆ ಉಪಯೋಗಿಸಿದ್ದಾರೆ. ಇದರ ಬಗ್ಗೆ ಈ ಸಂಸತ್ತಿನಲ್ಲೂ ಮತ್ತು ರಾಜ್ಯದ ಶಾಸನ ಸಭೆಗಳಲ್ಲೂ ಟೀಕೆಗಳು ಬಂದಿವೆ. ಆದುದರಿಂದ, ವಿಶ್ವಬ್ಯಾಂಕಿನವರು ನೆರವು ನೀಡುವ ಪ್ರಶ್ನೆ ಯಾವ ಹಂತದಲ್ಲಿದೆ ? ಅವರು ಕೊಡುತ್ತಾರೆ ಎಂದು ಸರ್ಕಾರದವರು ಹೇಳಿದ್ದಾರೆ ಹಾಗಾದರೆ, ಇದರಲ್ಲಿ ಕೃಷ್ಣ ಮೇಲ್ದಂಡೆಗೆ ಎಷ್ಟು ಬರುತ್ತದೆ? ಇದರ ಬಗ್ಗೆ ಕೇಂದ್ರದವರನ್ನು ಒತ್ತಾಯ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಹಿಂದೆ ಏನು ಕ್ರಮ ತೆಗೆದುಕೊಂಡಿದ್ದಿರಿ ಎಂದು ಒತ್ತಾಯಪೂರ್ವಕವಾಗಿ ಕೇಳಬೇಕಾಗಿದೆ. ಇದುವರೆಗಿನ ಪರಿಸ್ಥಿತಿಯನ್ನು ನೋಡಿದರೆ ಹಾಗೆ ಕೇಳಲಿಕ್ಕೆ ಏನೊಂದು ಹಕ್ಕಿಲ್ಲ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಈಗ ಪರಿಸ್ಥಿತಿ ಬದಲಾವಣೆಯಾಗಿದೆ. ಕೇಂದ್ರದಲ್ಲಿ ಜನತಾ ಪಕ್ಷದ ಸರ್ಕಾರವಿದೆ. ಇನ್ನೂ ಹೆಚ್ಚಿಗೆ ಪಡೆಯಬಹುದು ನನ್ನ ಅಭಿಪ್ರಾಯ, ಕಾರಣ ಏನು ಎಂದರೆ ಅವರಿಗೆ ಅಮೆರಿಕಾ ದೇಶದವರ ಕೈವಾಡ ಇದೆ. ವರ್ಲ್ಡ್ ಬ್ಯಾಂಕ್ ಇದೆ ಆದುದರಿಂದ ಹೆಚ್ಚು ಪಡೆಯುವುದಕ್ಕೆ ಪ್ರಯತ್ನ ಮಾಡಬಹುದು. ಹೆಚ್ಚು ನೆರವು ಪಡೆಯುವುದಕ್ಕೆ ಆಗದೇ ಹೋದರೆ ನೀವು ಏನು ಮಾಡುತ್ತೀರಿ? ಜನತಾ ಪಕ್ಷಕ್ಕೆ ಸೇರುತ್ತೀರೋ? ಅಥವಾ ರಾಜ್ಯದಲ್ಲಿ ಚಳುವಳಿ ನಡೆಸುತ್ತೀರೋ ಎಂದು ಕೇಳುತ್ತೇನೆ. ಆ ರೀತಿ ನೀವು ಚಳುವಳಿ ನಡೆಸಿ ಕೇಳುವುದಾದರೆ ನಿಮ್ಮ ಜೊತೆಗೆ ಕಮ್ಯೂನಿಷ್ಟ ಪಕ್ಷವು ಬೆಂಬಲ ಕೊಡುತ್ತದೆ ಎಂದು ಹೇಳುತ್ತೇನೆ. ಇನ್ನೊಂದು ವಿಷಯವನ್ನು ಇಲ್ಲಿ ಹೇಳಬೇಕಾಗಿದೆ ಯೋಜನೆಗಳಿಗೆ ಕೊಟ್ಟಿರುವಂತ ಹಣ ಯಾವರೀತಿ ವಿನಿಯೋಗವಾಗುತ್ತದೆ ಎಂಬುದನ್ನು ಆಳವಾಗಿ ಯೋಚನೆ ಮಾಡಬೇಕಾಗಿದೆ. ಕೊಟ್ಟಿರುವಂತಹ ಹಣದಲ್ಲಿ ಎಷ್ಟು ಹಣ ಸೋರಿಹೋಗುತ್ತದೆಯೋ ಗೊತ್ತಿಲ್ಲ. ಇದೇ ರೀತಿ ಅನೇಕ ಕಡೆ ಹಣ ಸೋರಿಹೋಗುತ್ತಿದೆ. ಒಂದು ಉದಾಹರಣೆಯನ್ನು ಹೇಳುವುದಾದರೆ ಕರ್ನಾಟಕ ಕನಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ಯೋಜನೆಯ ಕೆಲಸವನ್ನು ಕೊಟ್ಟಿದ್ದೀರಿ. ಇದು ಸರ್ಕಾರವೇ ನಡೆಸುತ್ತಾ ಇರುವ ಒಂದು ಸಂಸ್ಥೆ. ಈ ಕಾರ್ಪೊರೇಷನ್ ಮಾಡುತ್ತಾ ಇರುವ ಕೆಲಸವಾದರೂ ಏನು? ಖಾಸಗೀ ಕಂಟ್ರಾಕ್ಟರ್‌ದಾರರುಗಳಿಗೆ ಕೊಟ್ಟಿದ್ದರೆ ದುಡ್ಡು ಹೊಡೆದರು, ಮನೆಕಟ್ಟಿಕೊಂಡರು ಎಂದು ಹೇಳಬಹುದಾಗಿತ್ತು. ಇದು ಸರ್ಕಾರವೇ ನಡೆಸುತ್ತಿರುವ ಸಂಸ್ಥೆಯಾದ್ದರಿಂದ ಸರಿಯಾಗಿ ನಡೆದುಕೊಳ್ಳಬೇಡವೇ? ಆ ಸಂಸ್ಥೆಯ ವ್ಯವಹಾರವನ್ನು ನೋಡಿದರೆ ಹೆಚ್ಚುವರಿ ಬೇಡಿಕೆ ಕೊಡುವುದಕ್ಕೆ ಹೇಗೆ ತಾನೇ ನಮಗೆ ಮನಸ್ಸು ಬರುತ್ತದೆ? ನಾನೂ ಕೂಡ ಸಾರ್ವಜನಿಕ ಉದ್ಯಮಗಳ ಸಮಿತಿಯಲ್ಲಿ ಇದ್ದೇನೆ. ಅದರ ವರದಿ ಕೂಡ ತಮ್ಮ ಮುಂದೆ ಇದೆ. ಅದರಲ್ಲಿರುವ ಒಂದು ವಿಷಯವನ್ನು ತಮ್ಮ ಮುಂದೆ ಓದಿ ಹೇಳುತ್ತೇನೆ.

I will read only the MAIN CONCLUSIONS AND RECOMMENDATIONS of the P.U.C. The report says:

> (*a*) Though the Company was formed with the main object of undertaking the construction works of the Government by competing with private contractors to effect utmost economy and improving the standarard of execution of construction the impact of this Company on the contractors is negligible since the quantum of work executed by the Company is less than Rs. 75 lakhs per annum and it is a long way before achieving that objective.
>
> (*b*) The main reasons for the failure of the Company are:
>
> (i) failure to recruit proper men;
>
> (ii) failure to introduce proper systems and procedures;
>
> (iii) grant of advances to piece workers without obtaining agreement/guarantee;
>
> (iv) submission of quotations without proper analysis and scrutiny and failure to take adequate precautions regarding price escalation etc.

Unless the Company sets its house in order by recruiting proper staff and unless structural changes take place at all levels in the set up of the Organisation to improve its managerial and operational efficiency the position of the Company may not improve significantly.

ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿನ ಚಿತ್ರ ಇದು. ಅವರಿಗೆ ಅಪ್ಪರ್ ಕೃಷ್ಣ ಯೋಜನೆ, ಮಲಪ್ರಭ ಯೋಜನೆ, ನ್ಯಾಷನಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬೆಂಗಳೂರು ಯೂನಿವರ್ಸಿಟಿ ಬಿಲ್ಡಿಂಗ್ಸ್ ಇತರೇ ಕೆಲಸಗಳನ್ನು ವಹಿಸಿದ್ದೀರಿ. ಪ್ರತಿ ವರ್ಷವೂ ಲಾಸ್‌ನಲ್ಲಿಯೇ ಬಂದಿದ್ದಾರೆ. ಈ ಕಾರ್ಪೊರೇಷನ್ನಿನ ಪ್ರಾಫಿಟ್ ಮತ್ತು ಲಾಸ್ ಅಕೌಂಟ್ ನೋಡಿದರೆ ೧೯೭೧-೭೨ನೇ ಇಸವಿಯಿಂದ ೧೯೭೩-೭೪ನೇ ಇಸವಿಯುವರೆವಿಗೂ ಪ್ರತಿ ವರ್ಷ ನಷ್ಟದಲ್ಲಿಯೇ ಬಂದಿದೆ. ಇಂಥ ಕಂಪನಿಗೆ ಮಲಪ್ರಭ ಹಾಗೂ ಅಪ್ಪರ್ ಕೃಷ್ಣ ಯೋಜನೆಯ ಕೆಲಸಗಳನ್ನು ಕೊಟ್ಟಿದ್ದೀರಿ. ಸರ್ಕಾರ ಕೊಡುವಂತ ಹಣ ಎಲ್ಲಿ ಹೋಗುತ್ತದೆ ? ಈ ರೀತಿ ಆದರೆ ನಂಬಿಕೆ ಬರುವುದಕ್ಕೆ ಸಾಧ್ಯವಿದೆಯೇ ? ಸಮಿತಿಗಳು ಕೊಟ್ಟಂತ ವರದಿಗಳನ್ನು ಮೂಲೆಗೆ ಹಾಕುತ್ತೀರಿ ? ಕಾರಿಗೆ ಸಂಸ್ಥೆಗೆ ಸಂಬಂಧಪಟ್ಟಂತೆ ಒಂದು ವರದಿ ಹಾಗೆ ಇದೆ. ಇದನ್ನೆಲ್ಲಾ ನೋಡಿದರೆ ನಿಮಗೆ ಯಾವ ರೀತಿಯಿಂದಲೂ ಹಣ ಕೇಳುವುದಕ್ಕೆ ಹಕ್ಕಿಲ್ಲವೆಂದು ನಾನು ಹೇಳುತ್ತೇನೆ. ಈ ಸರ್ಕಾರದವರು ಅನೇಕ ಕಾರ್ಪೊರೇಷನ್‌ಗಳು ಮತ್ತು ಬೋರ್ಡುಗಳನ್ನು ಮಾಡಿದ್ದಾರೆ. ತಮಗೆ ಬೇಕಾದುತವರನ್ನು ಬೋರ್ಡುಗಳಲ್ಲಿ ಮತು ಕಾರ್ಪೊರೇಷನ್‌ಗಳಲ್ಲಿ ಹಾಕುತ್ತಾರೆ. ಈ ಬೋರ್ಡುಗಳು ಮತ್ತು ಕಾರ್ಪೊರೇಷನ್‌ಗಳ ಮೇಲೆ ಎಷ್ಟು ಹತೋಟಿ ಇಟ್ಟಿದ್ದೀರಿ ? ಯಾವ ರೀತಿ ನಡೆಯುತ್ತವೆ ಎಂದು ಏನಾದರೂ ಚೆಕ್‌ಅಪ್ ಮಾಡಿದ್ದೀರಾ ? ಹಳೇ ಕಾರ್ಪೊರೇಷನ್‌ಗಳಾಗಿರಲಿ ಹೊಸ ಕಾರ್ಪೊರೇಷನ್‌ಗಳು ಆಗಿರಲಿ ಪ್ರತಿಯೊಂದು ಲಾಸ್‌ನಲ್ಲಿಯೇ ನಡೆಯುತ್ತಿವೆ. ಆದರೂ ಮತ್ತೆ ಇವತ್ತು ಬೇಡಿಕೆ ಕೇಳುತ್ತಿದ್ದೀರಿ ? ಮೆಜಾರಿಟಿ ತೆಗೆದುಕೊಂಡು ಹೋಗುತ್ತೀರಿ. ಯಾರು ಯಾರು ದುಡ್ಡುಮಾಡಿಕೊಂಡು, ಹಣ ತೆಗೆದುಕೊಂಡು ಹೋಗಿದ್ದಾರೋ ಏನೂ ಗೊತ್ತಿಲ್ಲ. ಇಲ್ಲಿಯತನಕ ಹೇಗಿತ್ತು ಎಂದರೆ, ಒಂದೊಂದು ಕಾರ್ಪೊರೇಷನ್‌ಗಳು ಒಬ್ಬೊಬ್ಬ ಮಂತ್ರಿಗಳಿಗೆ ಗುತ್ತಿಗೆಯಾಗಿವೆ ಎಂದು ಕೇಳಿಬಂದಿದೆ. ಅವರವರು ದುಡ್ಡು ಮಾಡಿಕೊಳ್ಳುವುದಕೋಸ್ಕರ ಈ ರೀತಿ ಮಾಡಿದ್ದಾರೆಂದು ತಿಳಿದು ಬಂದಿದೆ. ತುರ್ತು ಪರಿಸ್ಥಿತಿ ಬಂದಮೇಲಂತೂ ತಮ್ಮ ಅಧಿಕಾರವನ್ನು ಅತಿಯಾಗಿ ದುರುಪಯೋಗಪಡಿಸಿಕೊಂಡು ವರ್ತಿಸಿದ್ದಾರೆಂದು ತಿಳಿದು ಬಂದಿದೆ. ಸ್ಮಗಲರ್ಸ್‌ನ್ನು ಬಿಡಿಸುವುದಕ್ಕೆ ಮಂತ್ರಿಗಳೇ ಮುಂದೆ ಹೋಗಿದ್ದಾರೆಂದರೆ ನಾವು ಏನು ಹೇಳುವುದಕ್ಕಾಗುತ್ತದೆ ? ಈಗಿನ ಸರ್ಕಾರ ಪ್ರಜಾಪ್ರಭುತ್ವದ ಹೆಸರಿನಲ್ಲಿ ಮೀಸಾದಲ್ಲಿದ್ದವರನ್ನು ಬಿಟ್ಟಿದ್ದಾರೆ. ಅವರು ಮುಂದೆ ಏನು ಮಾಡುತ್ತಾರೆ. ಅದರಿಂದ ಅರ್ಥ ವ್ಯವಸ್ಥೆಯ ಮೇಲೆ ಏನು ಪರಿಣಾಮ ಬೀರುತ್ತದೆ ಎಂದು ಕಾದು ನೋಡೋಣ. ಅವರು ಪಾಪ ಮಾಡಿದ್ದಾರೆ. ನೀವು ಏತಕ್ಕೆ ಅವರ ಪಾಪಕ್ಕೆ ಹೊಣೆಯಾಗುತ್ತೀರಿ ? ಎಲ್ಲರನ್ನೂ ಬಿಡಬೇಕು ಬಿಟ್ಟಿದ್ದಾರೆ. ಇನ್ನು ಸ್ವಲ್ಪ ದಿವಸಗಳಾದ ಮೇಲ ಗೊತ್ತಾಗುತ್ತದೆ. ಮಂತ್ರಿಗಳು ಹೋಗಿ ಮುಖ್ಯ ಮಂತ್ರಿಗಳ ಕಾಲು ಹಿಡಿದು ಕೊಳ್ಳುತ್ತಾರೆ. ಇನ್ನು ಏನೇನು ನಡೆದಿದೆಯೋಗೊತ್ತಿಲ್ಲ. ಹೀಗಿರಬೇಕಾದರೆ ನಮಗೆ ಹೇಗೆ ತಾನೇ ನಂಬಿಕೆ ಬರುತ್ತದೆ ?

5-30 P.M.

ಇನ್ನೊಂದು ಡಿಮ್ಯಾಂಡ್, ತೆರಿಗೆ ಬಗ್ಗೆ ಕೇಳಿದ್ದಾರೆ. ಇವೊತ್ತು ಈ ಪ್ರೊಫೆಷನಲ್ ಟ್ಯಾಕ್ಸ್ ತೆಗೆದುಕೊಂಡು ಬಂದು ನಮ್ಮ ಬೆಂಗಳೂರು ನಗರದಲ್ಲಿರತಕ್ಕ ಸಾಮಾನ್ಯ ಕಾರ್ಮಿಕರ ಮೇಲೆ ಹಾಕಿದ್ದಾರೆ. ಈ ಪ್ರೊಫೆಷನಲ್ ಟ್ಯಾಕ್ಸ್ ಬೇಕಾದರೆ ದೊಡ್ಡ ದೊಡ್ಡವರು ಬೇಕಾದರೆ ಕೊಡಲಿ, ಹೆಚ್ಚು ಹಣ ಇರತಕ್ಕವರು ಬೇಕಾದರೆ ಕೊಡಲಿ, ಅವರಿಗೆ ಮಾತ್ರ ನಾನು ಬೇಡ ಎಂದು ಹೇಳುವುದಿಲ್ಲ. ಇವೊತ್ತು ಸಾಮಾನ್ಯ ಕಾರ್ಮಿಕರು, ಹೆಚ್.ಎ.ಎಲ್., ಹೆಚ್.ಎಂ.ಟಿ., ಬಿ.ಇ.ಎಲ್., ಫ್ಯಾಕ್ಟರಿಗಳಲ್ಲಿ ಕೆಲಸ ಮಾಡತಕ್ಕಂತಹವರು ಈ ಒಂದು ಪ್ರೊಫೆಷನಲ್ ಟ್ಯಾಕ್ಸ್ ಹತ್ತು, ಹದಿನೈದು ರೂಪಾಯಿಗಳವರೆಗೆ ಕೊಡುತ್ತಿದ್ದಾರೆ. ಇದು ಅಲ್ಲದೆ ಮೇಲಿಂದ ಮೇಲೆ ಮತ್ತೆ ತೆರಿಗೆ ಬರುತ್ತಾ ಇದೆ. ಈಗ ಬಜೆಟ್ಟಿನಲ್ಲಿ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್ ಸೇರಿಸಿದ್ದೀರಿ. ಇದು ಜನಗಳ ಮೇಲೆ ಇನ್‌ಡೈರೆಕ್ಟಾಗಿ ಈ ಒಂದು ಟ್ಯಾಕ್ಸ್ ಬೀಳುತ್ತದೆ ಎನ್ನುವುದನ್ನು ನೀವು ಒಪ್ಪಿಕೊಳ್ಳಬೇಕು. ಈಗಲಾದರೂ ತಾವು ಮನಸ್ಸು ಮಾಡಿ ಈ ಪ್ರೊಫೆಷನಲ್ ಟ್ಯಾಕ್ಸ್ ಹಾಕಿರತಕ್ಕದ್ದನ್ನು ತೆಗೆಯಬೇಕು ಎಂದು ಕೇಳಿಕೊಳ್ಳುತ್ತೇನೆ. ಇನ್ನು ಡಿಮ್ಯಾಂಡ್ ನಂಬರ್ ೨೯, ಕಾರ್ಮಿಕರ ಉದ್ಯೋಗದ ಬಗ್ಗೆ ಡಿಮ್ಯಾಂಡ್ ಇದೆ. ನಮ್ಮ ಸ್ನೇಹಿತರು ಹೇಳಿದ ಹಾಗೆ ಅವರ ಮಾತಿಗೆ ದನಿಗೊಡಬೇಕಾಗಿದೆ. ಇವೊತ್ತು ಕಂಪಲ್‌ಸರಿ ಡಿಪಾಸಿಟ್ ಹೋಗಬೇಕು, ಮತ್ತೆ ಈ ಬೋನಸ್ ಶಾಸನ ಜಾರಿಗೆ ತರಬೇಕು. ಇದನ್ನು ಮಾಡಬೇಕಾದರೆ ಇದು ಕೇಂದ್ರಸರ್ಕಾರದ ಜವಾಬ್ದಾರಿ ಇದೆ. ಕಂಪಲ್‌ಸರಿ ಡಿಪಾಸಿಟ್ ತೆಗೆದುಹಾಕಿ ಆ ಹಣವನ್ನು ಒಂದೇ ಕಂತಿನಲ್ಲಿ ಕೊಡಬೇಕು ಎಂದು ಮಾನ್ಯಸದಸ್ಯರಾದ ಕಕ್ಕಿಲಾಯ ಅವರು ಏನು

ಹೇಳಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಇದುವರೆಗೂ ಕೇಂದ್ರ ಮಂತ್ರಿಗಳ ಬಜೆಟ್ ಸ್ಪೀಚ್ ಬಂದಿರಲಿಲ್ಲ, ರಾಷ್ಟ್ರಪತಿಯವರ ಭಾಷಣವಾಗಿರಲಿಲ್ಲ ಇವೊತ್ತು ಬೆಳಿಗ್ಗೆ ರಾಷ್ಟ್ರಪತಿಯವರ ಭಾಷಣ, ಮಂತ್ರಿಗಳ ಭಾಷಣ ಬಂದದ್ದನ್ನು ನೋಡಿದರೆ ಯಾವ ಮೂಲೆಯಲ್ಲಿಯೂ ಇದನ್ನು ವಾಪಸ್ಸು ತೆಗೆದು ಕೊಳ್ಳುತ್ತೇವೆ ಎಂದು ಹೇಳಿಲ್ಲ. ಸುಮ್ಮನೆ ಸೈಲೆಂಟ್ ಆಗಿದ್ದಾರೆ ಇವರು ಸೈಲೆಂಟ್ ಆಗಿರುವಾಗ ಅರ್ಥ ಏನು, ಏತಕ್ಕೆ ಸೈಲೆಂಟ್ ಆಗಿರಬೇಕು. ನಾನು ಇದನ್ನು ಏತಕ್ಕೆ ಹೇಳುತ್ತೇನೆ ಎಂದರೆ ತಾವು ಸೆಂಟ್ರಲ್ ಗವರ್ನಮೆಂಟಿನಲ್ಲಿ ಇದರ ಬಗ್ಗೆ ಒತ್ತಾಯ ತರಬೇಕು. ಇವೊತ್ತಿನದಿವಸದ ಭಾಷಣ ನೋಡಿ ದರೆ ಇದರ ಬಗ್ಗೆ ಏನನ್ನು ಹೇಳಿಲ್ಲ. ಇದರ ಬಗ್ಗೆ ಏನಾದರೂ ಪ್ರಧಾನಮಂತ್ರಿ ಮುರಾರ್ಜಿಯವರು ಹೇಳಬಹುದಿತ್ತು. ಅಥವಾ ಪಟೇಲರು ಹೇಳಬಹುದಿತ್ತು. ಇವರು ಮೊದಲು ಏನು ಹೇಳುತ್ತಿದ್ದರು ಎಂದರೆ ನಾವು ಹೋದ ತಕ್ಷಣ ಮೊದಲನೆ ಕೆಲಸ ಏನು ಎಂದರೆ ಬೋನಸ್ ಕೊಡುತ್ತೇವೆ, ಕಂಪಲ್‌ಸರಿ ಡಿಪಾಸಿಟ್ ತೆಗೆದು ಬಿಡುತ್ತೇವೆ ಎಂದು ಹೇಳಿದ್ದರು ಅದು ಆಗಿಲ್ಲ. ಬೋನಸ್ ಬಗ್ಗೆ ಬಂದಿರುವುದು ಶ್ರೀಮಾನ್ ವರ್ಮ ಅವರು ಹೇಳಿರತಕ್ಕದ್ದು ಈ ರೀತಿ ಇದೆ.—Mr. Ravindre Varma said about deferred wage. There is nothing new in what Mr. Varma says. There is a ruling of the Supreme Court on that ಈಗ ಕೇಂದ್ರ ಸರ್ಕಾರದವರು ಬೋನಸ್ ಶಾಸನದ ಬಗ್ಗೆ ಹೇಳಬೇಕಾಗಿತ್ತು ಅವರು ಅದನ್ನು ಹೇಳಿಲ್ಲ. ಮೊದಲು ಕಂಪಲ್‌ಸರಿ ಡಿಪಾಸಿಟ್ ಜಾರಿಗೆ ತಂದದ್ದು ನಿಮ್ಮ ಸರ್ಕಾರ, ಈಗ ಅದನ್ನು ಸಮರ್ಥನೆ ಮಾಡುವುದು ಒಳ್ಳೆಯದಲ್ಲ. ಈಗಲಾದರೂ ಕೂಡ ಸರಿಯಾದ ರೀತಿಯಲ್ಲಿ ಒಂದು ಕಾರ್ಯಕ್ರಮ ಹಾಕಿಕೊಂಡು ಈ ಕಂಪಲ್‌ಸರಿ ಡಿಪಾಸಿಟ್ ಸ್ಕೀಮ್ ತೆಗೆಯಬೇಕು ಎಂದು ಹೇಳುತ್ತೇನೆ ಮೊನ್ನೆದಿವಸ ಕಾರ್ಮಿಕರಿಗೆ ಸಂಬಂಧಪಟ್ಟಂತ ಲೇಬರ್ ಡಿಪಾರ್ಟ್‌ಮೆಂಟ್ ಆಫೀಸುಗಳನ್ನು ಪ್ಯಾಲೇಸ್ ರೋಡಿನಲ್ಲಿ ಇದ್ದುದನ್ನು ತೆಗೆದುಕೊಂಡು ಹೋಗಿ ವಿ.ಸಿ. ರೋಡಿಗೆ ಹಾಕಿದ್ದಾರೆ. ಈ ಆಫೀಸುಗಳನ್ನು ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ಷಿಫ್ಟ್ ಮಾಡತಕ್ಕದ್ದು ಇದ್ದೇ ಇರುತ್ತದೆ. ಮೊದಲಿದ್ದಂತಹ ಸ್ಥಳ ಕಾರ್ಮಿಕರಿಗೂ ಮಾಲೀಕರು ಗಳಿಗೂ, ಲಾಯರ್ಸ್‌ಗಳಿಗೂ, ಪ್ರತಿಯೊಬ್ಬರಿಗೂ ಬಹಳ ಅನುಕೂಲ ಇತ್ತು, ಈಗ ಬೇರೆ ಕಡೆಗೆ ಷಿಫ್ಟ್ ಮಾಡಿರುವುದರಿಂದ ಎಲ್ಲ ಜನರಿಗೂ ತೊಂದರೆಯಾಗಿದೆ. ಇದರ ಬಗ್ಗೆ ಕೇಳಿದರ ಟೆಂಪರರಿಯಾಗಿ ಯುನೈಟೆಡ್ ಆರ್ಗನೈಸೇಷನ್ ಆಫೀಸಿಗೆ ಜಾಗ ಕೊಡಬೇಕಾಗಿದ್ದು ಮಾಡಿದ್ದೇನೆ ಎಂದು ಹೇಳುತ್ತಾರೆ. ಅವರಿಗೆ ಟೆಂಪರರಿಯಾಗಿ ಜಾಗ ಕೊಡಬೇಕಾಗಿದ್ದರೆ ಬೇರೆ ಕಡೆ ಎಲ್ಲಿಯಾದರೂ ಖಾಲಿ ಜಾಗ ಕೊಡ ಬಹುದಿತ್ತು. ಅದನ್ನು ಬಿಟ್ಟು ಇರುವುದನ್ನು ಬೇರೆ ಕಡೆಗೆ ವರ್ಗಾಯಿಸಿ ತೊಂದರೆ ಮಾಡಿದ್ದಾರೆ ಇದನ್ನು ಸರಿಪಡಿಸಿಕೊಳ್ಳಬೇಕು ಎಂದು ಹೇಳುತ್ತೇನೆ. ಈಗ ಅಧ್ಯಕ್ಷರು ಕಾಲಾವಕಾಶವನ್ನು ಕಡಿಮೆ ಕೊಟ್ಟಿರುವುದರಿಂದ, ನಾನು ಬೇರೆ ಸಮಯದಲ್ಲಿ ಎಲ್ಲಾ ವಿಷಯವನ್ನು ತಿಳಿಸುತ್ತೇನೆ ಎಂದು ಹೇಳಿ, ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಂತ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಹಿರಿಯ ಶಾಸಕರಾದ ಮಾನ್ಯ ಪುಟ್ಟಸ್ವಾಮಿಯವರು ಬಹಳ ಆವೇಶದಿಂದ ಭಾಷಣ ಮಾಡಿ ಹೊರಟು ಹೋದರು, ಅವರು ಈ ಸಭೆಯಲ್ಲಿ ನನ್ನ ಉತ್ತರ ಕೇಳಲಿಕ್ಕೆ ಇದ್ದಿದ್ದರೆ ಬಹಳ ಚೆನ್ನಾಗಿತ್ತು, ಅವರಿಗೆ ಅಪಾರ ಅನುಭವ ಇದೆ, ಆ ಅನುಭವ ನಮ್ಮಗೆ ಸಿಕ್ಕುವ ರೀತಿಯಲ್ಲಿ ಮಾತನಾಡಿದ್ದರೆ ಚೆನ್ನಾಗಿತ್ತು. ಅದನ್ನು ಬಿಟ್ಟು ಅವರು ವಿಪರೀತ ಶಬ್ದಗಳನ್ನು ಉಪಯೋಗಿಸಿ ಬರೀ ಬಯ್ಯುವ ಧಾಟಿಯಲ್ಲಿ ಮಾತ ನಾಡಿದರೆ ಯಾರಿಗೂ ಪ್ರಯೋಜನವಾಗುವುದಿಲ್ಲ. ಈ ಮಾತನ್ನು ಅವರು ಇಲ್ಲಿ ಇದ್ದಾಗ ಹೇಳಿದ್ದರೆ ಚೆನ್ನಾಗಿತ್ತು ಎಂದು ಅನಿಸುತ್ತದೆ ಅವರು ಈ ಸಪ್ಲಿಮೆಂಟರಿ ಡಿಮ್ಯಾಂಡ್ ಮೇಲೆ ಮಾತನಾಡುವಾಗ ಒಂದು ಗುರುತರವಾದ ಅಪಾದನೆ ಮಾಡಿದ್ದಾರೆ. ಅದು ಏನೆಂದರೆ ಸತ್ಯಕ್ಕೆ ದೂರವಾದ ವಿಷಯವನ್ನು ಈ ಸಭೆಗೆ ತಿಳಿಸಿದ್ದಾರೆ. ಇದರಲ್ಲಿ ಅಭಿವೃದ್ಧಿಗೆ ಸಂಬಂಧಪಟ್ಟ ವೆಚ್ಚ ಬಹಳ ಕಡಿಮೆ, ಆದರೂ ಕೂಡ ಮಂತ್ರಿಯವರಿಗೆ ೨೬ ಕೋಟಿ ರೂಪಾಯಿ ಅಭಿವೃದ್ಧಿ ಖರ್ಚು ಸೇರಿದೆ ಎಂದು ಸುಳ್ಳು ಎಂಬ ಶಬ್ದವನ್ನು ಉಪಯೋಗಿಸಲಿಲ್ಲವಾದರೂ ಅದೇ ಧಾಟಿಯಲ್ಲಿ ಮಾತನಾಡಿದರು. ಆದ್ದರಿಂದ ಇದರ ಬಗ್ಗೆ ನಾನು ಹೆಚ್ಚುವರಿ ಬೇಡಿಕೆ ಮಂಡಿಸುವಾಗ ಬಹಳ ದೀರ್ಘವಾಗಿ ಹಲವಾರು ಅಂಶಗಳ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಅವರು ಆ ಮಾತನ್ನು ಹೇಳಿದ ಮೇಲೆ ಪುನಃ ನಾನು ಸಂಕ್ಷಿಪ್ತವಾಗಿ ಈ ಪೂರಕ ಬೇಡಿಕೆ ಯಲ್ಲಿರತಕ್ಕ ಅಭಿವೃದ್ಧಿ ವೆಚ್ಚ ಏನು ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಈಗ ಒಟ್ಟು ೩೧ ಕೋಟಿ ರೂಪಾಯಿ ಹಣದಲ್ಲಿ, ೨೬ ಕೋಟಿ ೪೫ ಲಕ್ಷ ರೂಪಾಯಿ ಹಣವನ್ನು ಅಭಿವೃದ್ಧಿಗೋಸ್ಕರ ಖರ್ಚು

ಮಾಡುತ್ತಿದ್ದೇವೆ. ಬೋರ್‌ವೆಲ್ಸ್‌ಗಾಗಿ ೩ ಕೋಟಿ ೨೦ ಲಕ್ಷ ರೂಪಾಯಿ ಹಣ ಖರ್ಚುಮಾಡುತ್ತಿದ್ದೇವೆ. ಮನೆಗಳಿಗಾಗಿ ೧ ಕೋಟಿ ೭ ಲಕ್ಷ ರೂಪಾಯಿ, ಇನ್‌ಫರ್‌ಮೇಷನ್ ಅಂಡ್ ಪಬ್ಲಿಸಿಟಿಗಾಗಿ ೩೮ ಲಕ್ಷ ರೂಪಾಯಿ, ಓಲ್ಡ್ ಏಜ್ ಪೆನ್‌ಷನ್‌ಗಾಗಿ ೩ ಕೋಟಿ ೬ ಲಕ್ಷ ರೂಪಾಯಿ ಇನ್‌ವೆಸ್ಟ್‌ಮೆಂಟ್. ಇನ್ ಸರ್ವೀಸಸ್ ಕೋ ಆಪರೇಟೀವ್‌ಗಾಗಿ ೧ ಕೋಟಿ ೧೬ ಲಕ್ಷರೂಪಾಯಿ. ಮಿಲ್ಕ್ ಪ್ರಾಡ್ಯೂಸರ್ಸ್ ಕೋ ಅಪರೇಟೀವ್ ಸೊಸೈಟಿಗಾಗಿ ೪೯ ಲಕ್ಷ ರೂಪಾಯಿ, ಡಿಸೆಟ್ರಿಸ್ಸ್‌ಡ್ ರಿಲೀಫ್‌ಟು ಫಿಷರ್‌ಮೆನ್‌ಗಾಗಿ ೨೫ ಲಕ್ಷ ರೂಪಾಯಿ. ಎನ್ ಸಿ. ಡಿ. ಸಿ. ಮಾರ್ಜಿನ್ ಮನಿ ನಮ್ಮ ಮಾರ್ಕೆಟಿಂಗ್ ಕೋ ಅಪರೇಟೀವ್ ಸೊಸೈಟಿಗೆ ಕೊಟ್ಟಿರತಕ್ಕದ್ದು ೮೦ ಲಕ್ಷರೂಪಾಯಿ. ಗೋಡವಾನ್ ಕಟ್ಟುವುದಕ್ಕಾಗಿ ೫೦ ಲಕ್ಷ ರೂಪಾಯಿ, ಸಾಯಿಲ್ ಕನ್‌ಸರ್‌ವೇಷನಗಾಗಿ ೧ ಕೋಟಿ ೭೫ ಲಕ್ಷ ರೂಪಾಯಿ, ರೀ ಹ್ಯಾಬಿಲಿಟೇಷನ್ ಆಫೋರ್‌ಸ್ಟೇಷನ್‌ಗೋಸ್ಕರ ೩೦ ಲಕ್ಷ ರೂಪಾಯಿ ನಮ್ಮ ಸೋಪ್ ಫ್ಯಾಕ್ಟರಿ ಅಭಿವೃದ್ಧಿಯಾಗುವುದಕ್ಕೆ ವರ್ಕಿಂಗ್ ಕ್ಯಾಪಿಟಲ್ ೯೦ ಲಕ್ಷ ರೂಪಾಯಿ, ಸ್ಯಾಂಡಲ್ ಆಯಿಲ್ ಫ್ಯಾಕ್ಟರಿ ಅವರಿಗೆ ವರ್ಕಿಂಗ್ ಕ್ಯಾಪಿಟಲ್ ೧ ಕೋಟಿ ೮೦ ಲಕ್ಷ ರೂಪಾಯಿ.

[MADAM SPEAKER.—(In the Chair.)]

ಎನ್. ಜಿ. ಇ. ಎಫ್. ಲೋನ್ಸ್ ೫೪ ಲಕ್ಷ. ಅವರು ಏನು ಡಿವಿಡೆಂಡ್ ಕೊಡಬೇಕಾಗಿತ್ತೋ ಅದನ್ನು ಅವರು ಉಳಿಸಿಕೊಂಡಿದ್ದಾರೆ. ಅದನ್ನು ಅಭಿವೃದ್ಧಿ ಕಾರ್ಯಗಳಿಗೋಸ್ಕರ ಖರ್ಚು ಮಾಡುತ್ತಾರೆ. ಫೋರ್ಜ್ ಪ್ಲಾಂಟ್‌ಗೋಸ್ಕರ ೫೦ ಲಕ್ಷ; ಸಿರಿಕಲ್ಚರ್ ಇಂಡಸ್ಟ್ರೀಸ್‌ಗೆ ೨೩ ಲಕ್ಷ; ಇರಿಗೇಷನ್ ವರ್ಕ್ಸ್‌ಗೆ ೨೫ ಲಕ್ಷ; ಘಟಪ್ರಭಾ ಪ್ರಾಜೆಕ್ಟ್‌ಗೆ ೬೨ ಲಕ್ಷ; ಮಲಪ್ರಭಾ ಪ್ರಾಜೆಕ್ಟಿಗೆ ೩ ಕೋಟಿ ೬೬ ಲಕ್ಷ; ರೂರಲ್ ಕಮ್ಯೂನಿಕೇಷನ್‌ಗೆ ೬೫ ಲಕ್ಷ; ಕುದುರೇಮುಖ ಪ್ರಾಜೆಕ್ಟಿಗೆ ೪೦ ಲಕ್ಷ; ಮತ್ತು ಬೇರೆ ಅಭಿವೃದ್ಧಿ ಕೆಲಸಗಳಿಗೆ ೧ ಕೋಟಿ ೮೦ ಲಕ್ಷ; ಹೀಗೆ ೨೬ ಕೋಟಿ ರೂಪಾಯಿ ಇವುಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗೋಸ್ಕರ ಖರ್ಚಾಗಿದೆ. ಬೇಕಾದರೆ ಈ ಪಟ್ಟಿಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ, ಇದನ್ನು ತಾವು ಬೇಕಾದರೆ ಪರಿಶೀಲಿಸಬಹುದು. ಎಲ್ಲಾ ಸ್ಪಷ್ಟವಾಗಿ ಇದರಲ್ಲಿ ಸೇರಿಸಿದ್ದೇವೆ. ಈ ಪಟ್ಟಿಯನ್ನು ತಾವು ಗಮನ ಕೊಟ್ಟು ನೋಡಿದರೆ ತಮಗೆಲ್ಲಾ ಸ್ಪಷ್ಟವಾಗಿ ಅರ್ಥವಾಗುತ್ತದೆ. ಇದೆಲ್ಲಾ ಅಭಿವೃದ್ಧಿ ಕಾರ್ಯಗಳಿಗೋಸ್ಕರ ಖರ್ಚು ಮಾಡಿರತಕ್ಕದ್ದು. ೩೧ ಕೋಟಿಯಲ್ಲಿ ೨೬ ಕೋಟಿ ಅಭಿವೃದ್ಧಿ ಕೆಲಸಕ್ಕೆ ಖರ್ಚಾಗಿದೆ ಇನ್ನು ಮಿಕ್ಕ ೫ ಕೋಟಿಯಲ್ಲಿ ೫೦ ಲಕ್ಷ ರೂಪಾಯಿ ಪೆನ್‌ಷನ್‌ಗೋಸ್ಕರ ಖರ್ಚು ಮಾಡಿದ್ದೇವೆ. ಈವರೆಗೆ ನಾನು ಹೇಳಿರತಕ್ಕದ್ದು ಯಾವುದೂ ಸತ್ಯಕ್ಕೆ ದೂರವಾದ ಮಾತುಗಳಲ್ಲ. ಇನ್ನೂ ಒಂದು ಉಗ್ರವಾದ ಟೀಕೆಯನ್ನು ನಮ್ಮ ಮಾನ್ಯ ಸದಸ್ಯರು ಮಾಡಿದ್ದಾರೆ. ಡಿಮ್ಯಾಂಡ್ ನಂಬರ್ ೯ರ ಮೇಲೆ ಮಾತನಾಡುತ್ತಾ ಈ ಟೀಕೆಯನ್ನು ಮಾಡಿದರು. ಏನೆಂದರೆ ಹೈಕೋರ್ಟ್ ಆದೇಶದ ಪ್ರಕಾರ ಸರ್ಕಾರದವರು ಕಲೆಕ್ಟ್ ಮಾಡಿದಂತಹ ಎಜುಕೇಷನ್ ಸೆಸ್ಸನ್ನು ವಾಪಸ್ಸು ಕೊಡಬೇಕಾಗಿತ್ತು. ಅದನ್ನು ಕೊಟ್ಟಿರಲಿಲ್ಲ. 'ಇದಕ್ಕೆ ಯಾರು ಜವಾಬ್ದಾರರು ಎಂದು ಮಾನ್ಯ ಸದಸ್ಯರು ಕೇಳಿದ್ದಲ್ಲದೆ ನಿಮ್ಮ ಮೇಲೆ ಈ ಜವಾಬ್ದಾರಿ ಏತಕ್ಕೆ ಹಾಕಬಾರದು' ಎಂಬ ಮಾತನ್ನೂ ಪುಟ್ಟಸ್ವಾಮಿಯವರು ಕೇಳಿದರು. ಇದಕ್ಕೆ ನಾವು ಅಥವಾ ನಮ್ಮ ಸರ್ಕಾರ ಜವಾಬ್ದಾರಿ ಅಲ್ಲ. ಇದು ೧೯೬೮ರಲ್ಲಿ ಇದ್ದಂಥ ಸರ್ಕಾರ ಮಾಡಿದಂತಹ ತಪ್ಪು. ಅದನ್ನು ಈಗ ನಾವು ತುಂಬಬೇಕಾಗಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ, ಯಾವುದೇ ಸರ್ಕಾರ ತಪ್ಪು ಮಾಡಲಿ, ಅಧಿಕಾರಿಗಳ ಮೇಲ್ವಿಚಾರಣೆಯಿಂದ ಮಂತ್ರಿಮಂಡಲ ನಡೆಯಿತು ಅಧಿಕಾರಿಗಳು ಮಂತ್ರಿಮಂಡಲದ ಮೇಲ್ವಿಚಾರಕರು. ಅಧಿಕಾರಿಗಳು ಅವರಿಗೆ ಸಲಹೆಗಾರರು ಈ ೬೦ ಸಾವಿರ ರೂಪಾಯಿ ದೊಡ್ಡದಲ್ಲ. ಆದರೆ ಇದು ಬಡ ಬೋರೇಗೌಡನ ದುಡ್ಡಾದ್ದರಿಂದ ನಾವು ಆಕ್ಷೇಪಣೆ ಮಾಡಿದ್ದೇವೆ. ಆ ಕಾಲದಲ್ಲಿ ಯಾವ ಅಧಿಕಾರಿ ಇದ್ದರೂ ಯಾರು ತಪ್ಪು ಮಾಡಿದರೂ ಅದರ ಜವಾಬ್ದಾರಿ ನೀವು ವಹಿಸಿ ಎಂದು ವಿಜ್ಞಾಪನೆ ಮಾಡಿಕೊಂಡೆ ಸುಮ್ಮನೆ ನಿಮ್ಮ ಸರ್ಕಾರ ಇತ್ತು ಎಂದು ಹೇಳಬೇಡಿ. ಘೋರ್ಪಡೆಯವರ ಮೇಲೆ ನಾನು ಆಪಾದನೆ ಮಾಡಲಿಲ್ಲ ಹಣಕಾಸಿನ ಸಚಿವರ ಮೇಲೆ ಯಾತಕ್ಕೆ ನೇರವಾದ ಅಪಾದನೆ ಹೊರಿಸಬಾರದು ಎಂದು ಹೇಳಿದೆ ಆವತ್ತಿನ ದಿವಸ ಯಾರಿದ್ದರೂ ಅವರ ಮೇಲೆ ಆಗಲೆ ಯಾತಕ್ಕೆ ಆಪಾದನೆ ಮಾಡಬಾರದು ಎಂದು ಹೇಳಿದೆ

SRI M. Y. GHORPADE.—Madam Speaker, this relates to the refund of education cess along with the interest in accordance with the judgement of the High Court in a Writ petiton filed in 1968. The

High Court held that the Karnataka Primary Education Act did not permit the levy of education cess on shop rentals in as it relates only to excise duty. This was challenged. After the decision of the High Court, the Government took the matter to the Supreme Court. The Supreme Court in 1970 did not decide the basic issue. And then an Ordinance was passed which was later given sanction to the levy of the cess. But it was struck down by the High Court. So, from 1968, the education cess on shop rentals was not collected. This refund relates prior to that period. ಅಂದ ಮೇಲೆ ೧೯೬೮ಕ್ಕೆ ಮುಂಚೆ ಸಂಬಂಧಪಟ್ಟಿರತಕ್ಕ ವಿಷಯ. ಈ ವಿಷಯವನ್ನೇ ದೊಡ್ಡದನ್ನಾಗಿ ಮಾಡಬಾರದು. ಅಧಿಕಾರಸ್ಥರು ಎಷ್ಟೇ ಪ್ರಾಮಾಣಿಕತೆಯಿಂದ ಕೆಲಸ ಮಾಡಿದರೂ ಕೂಡ ಒಂದೊಂದು ಸಾರಿ ಅವರು ಮಾಡಿರತಕ್ಕ ಆಜ್ಞೆಗಳನ್ನು ಕೋರ್ಟಿನಲ್ಲಿ ಪ್ರಶ್ನೆ ಮಾಡುವಂತಹ ಪರಿಸ್ಥಿತಿ ಬರುತ್ತದೆ. ನಾವು ಕೋರ್ಟ್ ಆದೇಶಕ್ಕೆ ತಲೆ ಬಾಗಿ ನಡೆದುಕೊಳ್ಳಬೇಕಾಗುತ್ತದೆ, ನಾವೇ ಮಾಡಿರಲಿ, ಹಿಂದಿನ ಸರ್ಕಾರವೇ ಮಾಡಿರಲಿ ಇದರಲ್ಲಿ ದೊಡ್ಡ ಅನಾಹುತ ಅಡಗಿದೆ ಎಂದು ಆ ಧಾಟಿಯಲ್ಲಿ ಭಾಷಣ ಮಾಡುವುದು ಸರಿಯಾದುದಲ್ಲ ಎಂದು ಹೇಳಬೇಕಾಗುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಕೋರ್ಟಿನ ಆದೇಶವನ್ನು ನಿಮ್ಮ ಪಕ್ಷ ಪಾಲನೆ ಮಾಡುವುದಿಲ್ಲ ಎಂಬುದು ದೇಶಕ್ಕೆ ಗೊತ್ತಿದೆ. ಅಲಹಬಾದ್ ಹೈಕೋರ್ಟ್ ನೀಡಿದಂತಹ ಆದೇಶವನ್ನು ಎಷ್ಟರ ಮಟ್ಟಿಗೆ ಪಾಲನೆ ಮಾಡಿದ್ದೀರಿ ಎಂಬುದು ದೇಶಕ್ಕೇ ಗೊತ್ತಿದೆ.

ಅಧ್ಯಕ್ಷರು.—ನನ್ನ ಅನುಮತಿ ಇಲ್ಲದೆ ಮಾತನಾಡಿದರೆ ಅದನ್ನು ರೆಕಾರ್ಡ್ ಮಾಡತಕ್ಕದ್ದಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಟೆಲಿಫೋನ್ ಚಾರ್ಜಸ್ ಜಾಸ್ತಿಯಾಗಿದೆ ಎಂದು ಹೇಳಿದಾರೆ. ಅದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ ಈ ಟೆಲಿಫೋನ್ ಖರ್ಚು ಜಾಸ್ತಿಯಾಗಿದೆ. ಅದನ್ನು ನಾವು ಮುಚ್ಚಿಡುವ ಪ್ರಯತ್ನವನ್ನು ಮಾಡಲಿಲ್ಲ. ಆಗಿರುವ ಖರ್ಚನ್ನು ಸರಿಯಾಗಿ ಹೇಳಿ ಪ್ರಾಮಾಣಿಕತೆಯಿಂದ ಬಜೆಟ್ ಮಾಡುತ್ತಿದ್ದೇವೆ. ನಾನ್ ಪ್ಲಾನ್ಡ್ ಎಕ್ಸ್‌ಪೆಂಡಿಚರನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು ಎಂದು ಹೊರಟಿದ್ದೇವೆ. ಈಗ ಟೈಟ್ ಬಜೆಟ್ ಮಾಡಿದ್ದೇವೆ. ಇದಕ್ಕೆ ಹಣ ಸ್ವಲ್ಪ ಜಾಸ್ತಿ ಖರ್ಚಾದರೆ ಸಪ್ಲಿಮೆಂಟರಿ ಎಸ್ಟಿಮೇಟ್ ಮೂಲಕ ಸಭೆಯ ಗಮನಕ್ಕೆ ತರಬೇಕಾಗುತ್ತದೆ. ಟೆಲಿಫೋನ್ ಎಕ್ಸ್‌ಪೆಂಡಿಚರ್......

ಶ್ರೀ ಕಾಗೋಡು ತಿಮ್ಮಪ್ಪ.—ಟೆಲಿಫೋನ್‌ಗೆ ಹಿಂದೆ ಎಷ್ಟು ಖರ್ಚಾಗಿತ್ತು, ಈಗ ಎಷ್ಟು ಖರ್ಚಾಗಿದೆ? ಚುನಾವಣೆಯಿಂದ ಖರ್ಚು ಜಾಸ್ತಿಯಾಗಿದೆ.

ಶ್ರೀ ಎಂ. ವೈ. ಘೋರ್ಪಡೆ.—ಈ ಸಾರಿ ೫ ಲಕ್ಷ ರೂಪಾಯಿ ಖರ್ಚಾಗಿದೆ. ಇದಕ್ಕೂ ಚುನಾವಣೆಗೂ ಸಂಬಂಧವಿಲ್ಲ. ಇದು ಖರ್ಚಾದುದು ಚುನಾವಣೆಗಿಂತ ಮುಂಚಿತವಾಗಿ. ಚುನಾವಣೆ ನಡೆದಿರುವುದು ಮಾರ್ಚಿಯಲ್ಲಿ. ಇದು ಅದಕ್ಕಿಂತ ಮುಂಚೆ ಆದ ಖರ್ಚು. ಇದರ ಬಗ್ಗೆ ಮಂತ್ರಿಗಳ ಕಚೇರಿಗೆ ಈಗಾಗಲೇ ತಿಳಿಸಿದ್ದೇವೆ. ಇದರ ಬಗ್ಗೆ ಸ್ವಲ್ಪ ನಿಗಾ ಇಡಬೇಕಾಗುತ್ತದೆ. ಎಷ್ಟು ಟೆಲಿಫೋನ್ ಕಾಲ್ ಆಗಿದೆ, ಏತಕ್ಕಾಗಿದೆ, ಯಾರು ಮಾಡಿದ್ದಾರೆ ಎಂಬ ಬಗ್ಗೆ ಮಂತ್ರಿಗಳು ಗಮನ ಕೊಡಬೇಕು ಎಂದೂ ತಿಳಿಸಿದ್ದೇವೆ. ನಮಗೂ ನಿಮ್ಮಷ್ಟೇ ಆಸಕ್ತಿ ಹೆಚ್ಚು ಖರ್ಚಾಗಬಾರದು ಎಂದು ಇದೆ. ಇದೊಂದು ದೊಡ್ಡ ಅನಾಹುತ ಅಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಂತ್ರಿಗಳ ಮನೆಯಲ್ಲಿ ಅವರ ಹೆಂಗಸರು ಮಕ್ಕಳೆಲ್ಲಾ ಟೆಲಿಫೋನ್ ಉಪಯೋಗಿಸುತಾರೆ.

ಶ್ರೀ ಎಂ. ವೈ. ಘೋರ್ಪಡೆ.—ಇದು ಬೇಜವಾಬ್ದಾರಿಯಿಂದ ಖರ್ಚಾಗಿದೆ ಎಂಬ ಮಾತನ್ನು ಒಪ್ಪುವುದಕ್ಕೆ ನಾನು ತಯಾರಿಲ್ಲ. ನಮಗೂ ಆ ಬಗ್ಗೆ ಕಾಳಜಿ ಇದೆ. ಎಸ್ಟಾಬ್ಲಿಷ್‌ಮೆಂಟ್ ಎಕ್ಸ್‌ಪೆಂಡಿಚರ್ ಆಗಲಿ, ಟೆಲಿಫೋನ್ ಎಕ್ಸ್‌ಪೆಂಡಿಚರ್ ಆಗಲಿ........

ಶ್ರೀ ಕಾಗೋಡು ತಿಮ್ಮಪ್ಪ.—ನೀವು ದೆಹಲಿಗೆ ಹೋಗಿ ಬಂದ ಖರ್ಚು ಇನ್ನೂ ಹೇಳಿಲ್ಲ.

ಶ್ರೀ ಎಂ. ವೈ ಘೋರ್ಪಡೆ.—ಅಧಿಕಾರಿಗಳ ಟಿ ಎ ಖರ್ಚು ಕೂಡ ಜಾಸ್ತಿ ಆಗಿದೆ. ಇಪ್ಪತ್ತು ಅಂಶಗಳ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರಬೇಕಾದರೆ ಹಳ್ಳಿ ಹಳ್ಳಿಗೆ ಹೋಗಬೇಕು. ಆದ್ದರಿಂದ ಎಸ್ಟಾಬ್ಲಿಷ್‌ಮೆಂಟ್ ಖರ್ಚು ಜಾಸ್ತಿಯಾಗುತ್ತದೆ ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಹೇಳಬೇಕಾದರೆ ಅದಕ್ಕೆ ಸಂಬಂಧಪಟ್ಟಂತೆ ಟೈಪಿಸ್ಟ್‌ಗಳು ಮತ್ತು ಸರ್ವೇಯರ್ಸ್ ಸಂಖ್ಯೆಯನ್ನು ಜಾಸ್ತಿ ಮಾಡಿದ್ದೇವೆ. ಇನ್ನೂ ಜಾಸ್ತಿ ಮಾಡಬೇಕಾದಲ್ಲಿ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ —ಅಡಿಷನಲ್ ಟ್ರಿಬ್ಯುನಲ್ ಮಾಡಬೇಕು ಎಂದು ಪ್ರೊಪೋಸಲ ಬಂದು ಎಷ್ಟು ದಿವಸವಾಯಿತು ? ಯಾತಕ್ಕೆ ಇನ್ನೂ ಮಾಡಿಲ್ಲ.

ಶ್ರೀ ಎಂ ವೈ. ಘೋರ್ಪಡೆ —ಈಗ ಒಟ್ಟು ೧೨೦ ಕನ್ನಡ ಟೈಪಿಸ್ಟ್ಸ್ ಪೋಸ್ಟ್ ಭರ್ತಿ ಮಾಡಿದ್ದೇವೆ. ವೇಕೆನ್ಸೀಸ್ ಇನ್ನೂ ನಾಲ್ಕು ಇದೆ. ಲ್ಯಾಂಡ್ ರಿಫಾರ್ಮ್ಸ್ ಕೆಲಸಕ್ಕೆ ೧೫೬ ಸರ್ವೆಯರ್‌ಗಳನ್ನು ನೇಮಕ ಮಾಡಿದ್ದೇವೆ. ಇದರಲ್ಲಿ ಇನ್ನು ನಾಲ್ಕೈದು ಪೋಸ್ಟ್ ಮಾತ್ರ ಖಾಲಿ ಇದೆ. ಇನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೩೬ ಪೋಸ್ಟ್ ಬೇಕಾಗಿದೆ. ಅದನ್ನೂ ಕೊಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ —ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಕಳೆದ ಅಧಿವೇಶನದಲ್ಲಿ, ಎಲ್ಲೆಲ್ಲಿ ಅವಶ್ಯಕ ಇದೆಯೋ ಅಂಥ ಕಡೆಗಳಲ್ಲಿ ಅಂದರೆ ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಅಡಿಷನಲ್ ಟ್ರಿಬ್ಯುನಲ್‌ಗಳನ್ನು ಮಾಡುತ್ತೇವೆಂದು ಈ ಸದನದಲ್ಲಿ ಹೇಳಿದ್ದರು. ಆದರೆ ಇದುವರೆಗೆ ಏಕೆ ಮಾಡಿಲ್ಲ?

SRI M. Y. GHORPADE —Land Reforms work as you know is uneven in some districts and it is much more in same districts. The Chief Minister and the concerned Minister has repeatedly said that they will increase the staff to the extent necessary.

ಶ್ರೀ ಕಾಗೋಡು ತಿಮ್ಮಪ್ಪ —ಎಲ್ಲೆಲ್ಲಿ ನೀವು ಮಾಡಿದ್ದೀರಿ ? ನಮ್ಮ ಶಿವಮೊಗ್ಗ ಜಿಲ್ಲೆಯ ಶಿಕಾರಿ ಪುರಕ್ಕೆ ಪ್ರತ್ಯೇಕ ಟ್ರಿಬ್ಯುನಲ್ಲನ್ನು ಕೊಡುತ್ತೇವೆಂದು ಮಾನ್ಯ ರಂಗನಾಥ್‌ರವರು ಅಲ್ಲಿಗೆ ಭೇಟಿ ನೀಡಿದ್ದಾಗ ಹೇಳಿದ್ದರು ಆದರೆ ಅದನ್ನು ಇದುವರೆಗೆ ಕಾರ್ಯಗತ ಮಾಡಲಿಲ್ಲ ಅಂತೆಯೇ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರಕ್ಕೆ, ಉಡುಪಿಗೆ ಮತ್ತು ಮಂಗಳೂರಿಗೆ ಎರಡೆರಡು ಟ್ರಿಬ್ಯುನಲ್‌ಗಳನ್ನು ಕೊಡುತ್ತೇವೆಂದು ಹೇಳಿದ್ದರೂ ಇದುವರೆಗೆ ಕೊಟ್ಟಿಲ್ಲ.

SRI M. Y. GHORPADE.—While discussing the Supplimentary Estimates I can only enunciate the general policy of the Government. As regards the details regarding a particular department the Honourable Member should sit with the concerned Minister and sort out where something is required to be done. I cannot be expected to go into such details. One thing I must say and that is that the intention of Government is to accelerate the land reforms programme. ಆದರೆ ನಾವು ನಿರೀಕ್ಷಿಸಿದಷ್ಟು ಕಾರ್ಯಗತವಾಗಿಲ್ಲ. ಸರ್ವೇಯರ್ಸ್ ಮತ್ತು ಟೈಪಿಸ್ಟ್‌ಗಳನ್ನು ಕೊಡಬಾರದೆಂಬ ಉದ್ದೇಶ ಸರ್ಕಾರಕ್ಕೆ ಖಂಡಿತವಾಗಿ ಇರುವುದಿಲ್ಲ. ನೀವು ಸಂಬಂಧಪಟ್ಟ ಮಂತ್ರಿಗಳೊಡನೆ ಚರ್ಚೆ ಮಾಡಿ ನೇಮಿಸಿಕೊಳ್ಳಬಹುದು.

ಶ್ರೀ ಕೊಣಂದೂರು ಲಿಂಗಪ್ಪ.—ವಿಧಾನ ಮಾಡುವುದರ ಉದ್ದೇಶ ಜನಗಳನ್ನು ಹೆದರಿಸಿ ಓಟು ಪಡೆಯುವುದಕ್ಕೆ ಎಂದು ಕಾಣುತ್ತದೆ.

ಶ್ರೀ ಎಂ. ವೈ ಘೋರ್ಪಡೆ.—ಅಂಥ ಉದ್ದೇಶ ಸರ್ಕಾರಕ್ಕೆ ಇಲ್ಲ ಎಂದು ಹೇಳುತ್ತೇನೆ. ಇನ್ನು ಮಾನ್ಯ ಶಾಮಣ್ಣನವರು ಮಾತನಾಡುತ್ತಾ, ಎಷ್ಟು ಬೋರ್‌ವೆಲ್‌ಗಳನ್ನು ಮಾಡಿದ್ದೀರಿ ಮತ್ತು ಅವುಗಳಲ್ಲಿ ಎಷ್ಟು ಸಫಲ ಆಗಿವೆ ಎಂದು ಕೇಳಿದ್ದರು ೫೦೨೮ ಬೋರ್‌ವೆಲ್‌ಗಳನ್ನು ಮಾಡಿದ್ದರ ಪೈಕಿ ೪೦೧೭ ಸಫಲ ಆಗಿ ೧೦೭೧ ವಿಫಲ ಆಗಿವೆ. ಅವರು ಸ್ಲಮ್ ಕಾರ್ಯಕ್ರಮದ ಬಗ್ಗೆ ಮಾತನಾಡುತ್ತಾ, ಆ ಬಗ್ಗೆ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳಿದರು. ಅದಕ್ಕೆ ನಾನು ಹೇಳುವುದು ಸ್ಲಮ್ ಕಾರ್ಯಕ್ರಮ

ವಾಗಲಿ ಅಥವಾ ಬೇರೆ ಯಾವುದೇ ಕಾರ್ಯಕ್ರಮವಾಗಲಿ ಅದಕ್ಕೆ ಸಂಬಂಧಪಟ್ಟವರೆಲ್ಲ ಜೊತೆಗೂಡಿ ಹೆಚ್ಚಿನ ಗಮನ ಕೊಟ್ಟು ಕೆಲಸ ಮಾಡಿದರೆ ಕಾರ್ಯಕ್ರಮಗಳು ಚೆನ್ನಾಗಿ ನಡೆಯುತ್ತವೆ, ಇಲ್ಲದಿದ್ದರೆ ಅಷ್ಟೊಂದು ತೃಪ್ತಿಕರವಾಗಿ ನಡೆಯುವುದಿಲ್ಲ. ಎಲ್ಲೆಲ್ಲಿ ಪಬ್ಲಿಕ್ ಒಪೀನಿಯನ್ ಚನ್ನಾಗಿ ಇರುತ್ತದೆ, ದಕ್ಷ ಅಧಿಕಾರಿಗಳಿರುತ್ತಾರೆ, ದಕ್ಷ ನಾನ್ ಆಫಿಶಿಯಲ್ಸ್ ಇರುತ್ತಾರೆ ಅಂಥ ಕಡೆಗಳಲ್ಲಿ ಯಾವ ಕಾರ್ಯಕ್ರಮಗಳಾದರೂ ಚೆನ್ನಾಗಿ ನಡೆಯುತ್ತವೆ ಇಂಥ ಒಳ್ಳೆಯ ಕಾರ್ಯಕ್ರಮ ನಮ್ಮ ರಾಜ್ಯದಲ್ಲಿರುವಾಗ ಅದನ್ನು ಚನ್ನಾಗಿ ನಡೆಸಿಕೊಂಡು ಹೋಗತಕ್ಕ ಜವಾಬ್ದಾರಿ ನಮಗೆಲ್ಲರಿಗೂ ಸೇರಿದ್ದು.

ಇನ್ನು ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಒದಗಿಸುವ ಕಾರ್ಯಕ್ರಮ ಬಹಳ ದೊಡ್ಡದು. ಈ ವರ್ಷ ೨೩ ಲಕ್ಷ ಹುಡುಗರಿಗೆ ಪೌಷ್ಟಿಕ ಆಹಾರವನ್ನೊದಗಿಸಬೇಕೆಂದು ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ವರ್ಲ್ಡ್ ಫುಡ್ ಪ್ರೊಗ್ರಾಂ ಅನ್ನು ಸೇರಿಸಿ ಹೇಳುತ್ತಿದ್ದೀರಾ ?

ಶ್ರೀ ಎಂ. ವೈ. ಘೋರ್ಪಡೆ.—ನಮ್ಮ ಹಣದಿಂದಲೇ ೨೩ ಲಕ್ಷ ಹುಡುಗರಿಗೆ ಪೌಷ್ಟಿಕ ಆಹಾರವನ್ನು ಒದಗಿಸಬೇಕೆಂದು ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಬಗ್ಗೆ ನಿಮ್ಮ ಪಕ್ಷ ದೆಹಲಿಯಲ್ಲಿ ಏನು ಹೇಳಿದೆ ಎಂಬುದನ್ನು ನೋಡಿ. ಇದನ್ನೆಲ್ಲ ಸಮಗ್ರವಾಗಿ ಆಲೋಚನೆ ಮಾಡಿ ಮಾತನಾಡಿದ್ದಾರೆ. ವರ್ಲ್ಡ್ ಫುಡ್ ಪ್ರೋಗ್ರಾಂ ಪ್ರಕಾರ ೧೭ ಲಕ್ಷ ಹುಡುಗರಿಗೆ ಪೌಷ್ಟಿಕ ಆಹಾರವನ್ನು ಒದಗಿಸಲಾಗುವುದು ಎಂದು ಹೇಳಿದ್ದಾರೆ, ಅದಕ್ಕೆ ನಿಮ್ಮದು ೨ ಲಕ್ಷ ಸೇರಿಸಿಕೊಟ್ಟರೆ ಒಟ್ಟಿನಲ್ಲಿ ಅವರು ಕೊಡುವ ಕಿರೀಟವನ್ನು ನೀವು ಹಾಕಿಕೊಂಡಂತಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಈ ವರ್ಷ ನಾವು ೧೭ರಿಂದ ೨೩ ಲಕ್ಷಕ್ಕೆ ಏರಿಸಿದ್ದೇವೆ, ಮತ್ತು ಅದಕ್ಕಾಗಿ ೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಆ ಕಾರ್ಯಕ್ರಮವನ್ನು ವ್ಯಾಪಕವಾಗಿ ಬೆಳಸಬೇಕು ಮತ್ತು ಇನ್ನು ೪-೫ ವರ್ಷಗಳಲ್ಲಿ ೫೦-೬೦ ಲಕ್ಷ ಹುಡುಗರಿಗೆ ಪೌಷ್ಟಿಕ ಆಹಾರವನ್ನೊದಗಿಸಬೇಕೆಂದು ಮಾಡಬೇಕೆಂದು ಮಾಡಿದ್ದೇವೆ. ಅದಕ್ಕೆ ನೀವುಗಳು ಸಹಕಾರ ನೀಡುತ್ತೀರೆಂದು ನಂಬಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ನೋಡೋಣ !

ಶ್ರೀ ಎಂ. ವೈ. ಘೋರ್ಪಡೆ.—ಇನ್ನು ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಾ, ಸರ್ವೇಯರ್ಸ್ ನೇಮಕಾತಿ ಬಗ್ಗೆ ಮತ್ತು ಮನೆಗಳ ನಿರ್ಮಾಣದ ಬಗ್ಗೆ ಹೇಳಿದರು ; ಇದು ಯಾವ ರೀತಿ ಸರಿಹೋಗುತ್ತದೋ ಆ ರೀತಿ ಮಾಡುವುದಕ್ಕೆ ಅನುಕೂಲವಿದೆ. ಅಂದರೆ ಶಿವಮೊಗ್ಗ ಜಿಲ್ಲೆಯಲ್ಲಿ ಯಾವುದು ಸರಿಹೋಗುತ್ತದೋ ಅದನ್ನು ಮಾಡಿಸಿಕೊಳ್ಳಬಹುದು. ಇದಕ್ಕೋಸ್ಕರ ಬೇರೆ ಬೇರೆ ತಾಲ್ಲೂಕಿಗೆ ೮ ಕೋಟಿ ರೂಪಾಯಿಗಳನ್ನು ಹಂಚುತ್ತೇವೆ, ಅದನ್ನು ಆಯಾಯ ತಾಲ್ಲೂಕಿನಲ್ಲಿ ಯಾವ ಬಾಬಿಗೆ ಸರಿಹೋಗುತ್ತದೋ ಅದಕ್ಕೆ ಖರ್ಚು ಮಾಡುವುದಕ್ಕೆ ತಮಗೆ ಸ್ವತಂತ್ರವಿರುತ್ತದೆ. ಈ ಬಗ್ಗೆ ತಾವು ಆಸಕ್ತಿ ವಹಿಸಿದರೆ ಅಲ್ಲಿರತಕ್ಕ ಜನಗಳಿಗೆ ಅನುಕೂಲವಾಗುತ್ತದೆ.

ಇನ್ನು ಮೈನರ್ ಇರಿಗೇಷನ್ ಪ್ರೊಗ್ರಾಂಗೆ ತಮಗೆ ಗೊತ್ತಿರುವ ಹಾಗೆ ೧೫ ಕೋಟಿ ರೂಪಾಯಿಗಳನ್ನು ಹೊಸದಾಗಿ ಸೇರಿಸಿದ್ದೇವೆ. ತಮ್ಮ ಜಿಲ್ಲೆಯಲ್ಲಿ ಅಷ್ಟೊಂದು ಫೀಸಿಬಲ್ ಎಸ್ಟಿಮೇಟ್ಸ್ ಸಿಗದೇ ಇರುವ ಕಾರಣ ಲಂಪ್ ಸಮ್ ಪ್ರಾವಿಶನ್ ಮಾಡಿದ್ದೇವೆ ಸಣ್ಣ ಸಣ್ಣ ನೀರಾವರಿ ಕೆಲಸಗಳನ್ನು ನಿಮ್ಮ ಜಿಲ್ಲೆಯಲ್ಲಿ ಮಾಡುವುದಕ್ಕೆ ಅವಕಾಶವಿದೆ. ದಯುವಿಟ್ಟು ಅದನ್ನು ಮಾಡಿಸಿರಿ, ಅದಕ್ಕೆ ಸಾಕಷ್ಟು ಹಣವನ್ನು ಕೊಟ್ಟಿದ್ದೇವೆ. ಹಾಗೆ ಕೊಟ್ಟಿರುವುದರಿಂದ any number of Minor Irrigation works could be completed in your area.

ನಂತರ ಸಹಕಾರಿ ಸಕ್ಕರೆ ಕಾರ್ಖಾನೆಗಳ ಬಗ್ಗೆ ಹೇಳುವುದಾದರೆ ಎಲ್ಲೆಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸುವುದಕ್ಕೆ ಸಾಧ್ಯವಿದೆಯೋ ಅಂಥ ಕಡೆಗಳಲ್ಲಿ ಎನ್‌ಕರೇಜ್ ಮಾಡಬೇಕೆಂಬುದೇ ಸರ್ಕಾರದ ಮುಖ್ಯ ಧೋರಣೆ. ಈ ಬಗ್ಗೆ ಪ್ರತ್ಯೇಕ ಪ್ರಶ್ನೆಗಳನ್ನು ಕೇಳಬೇಕಾದರೆ ಸಂಬಂಧಪಟ್ಟ ಮಂತ್ರಿಗಳನ್ನು ಕೇಳಬೇಕಾಗುತ್ತದೆ. ಈಗ ಅವುಗಳ ಪ್ರಗತಿ ಹೇಗಿದೆ ಎಂಬುದನ್ನು ನಾನು ಇಲ್ಲಿ ಉತ್ತರ ರೂಪದಲ್ಲಿ ಹೇಳುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ, ಕರ್ನಾಟಕ ರಾಜ್ಯದಲ್ಲಿ ಕಬ್ಬು ಸಾಕಷ್ಟು ಬೆಳೆಯುವ ಕಡೆ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಎನ್‌ಕರೇಜ್ ಮಾಡುತ್ತೇವೆ. ಇದಕ್ಕೆ ಎನ್. ಸಿ. ಡಿ. ಸಿ. ಯಿಂದ ಹಣ ಬರಬೇಕಾಗಿದ್ದರೂ ಕೂಡ ನಾವು ಶಕ್ತಿ ಮೀರಿ ಕರ್ನಾಟಕ ರಾಜ್ಯದಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಬೇಕೆಂದಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.— ನೀವು ಹಣಕಾಸಿನ ಸಚಿವರಾಗಿ ಹೇಳುತ್ತಿರುವ ಈ ಮಾತನ್ನು ಒಪ್ಪಲು ಸಾಧ್ಯವಿಲ್ಲ.

SRI M. Y. GHORPADE.—For instance, how much land should be allowed to be leased out? These are matters of details pertaining to each sugar factory. It is not right for me in a general discussion like this to try to answer details regarding a factory. They should be taken up with the concerned Ministers.

ಶ್ರೀ ಕಾಗೋಡು ತಿಮ್ಮಪ್ಪ.—ನೀವು ಈ ವಿತ್ತಂಡ ವಾದವನ್ನು ಇಟ್ಟುಕೊಂಡು ಹೊರಟಿದ್ದೀರಿ. ದಯವಿಟ್ಟು ಅದಕ್ಕೆ ಅವಕಾಶ ಕೊಡದೆ ನಮ್ಮ ಶಿವಮೊಗ್ಗದಲ್ಲಿ ಅಂಥ ಒಂದು ಎಕರೆ ಭೂಮಿ ಇದ್ದರೆ, ಅಥವಾ ಫೀಸಿಬಿಲಿಟಿ ಇದ್ದರೆ ತಮ್ಮ ವತಿಯಿಂದ ಅಭಿಪ್ರಾಯ ಕೊಡಿರಿ, ಇಲ್ಲದಿದ್ದರೆ ನಿಮ್ಮಿಂದ ಬ್ರೇಕ್ ಬಿತ್ತು ಎಂದು ತಿಳಿಯುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ನಾವು ಬ್ರೇಕ್ ಹಾಕುವುದಿಲ್ಲ. ಇನ್ನು ಮಾನ್ಯ ವಿ. ಎನ್. ಪಾಟೀಲರು ರೈತರ ಬಗ್ಗೆ ಮತ್ತು ಜೋಳದ ಬೆಲೆ ಏರಿಕೆ ಬಗ್ಗೆ ಹೇಳಿದರು.

ಶ್ರೀ ಕೆ. ಎಚ್ ರಂಗನಾಥ್.—ಅದು ಮೊನ್ನೆ ಮೊನ್ನೆ ಏರಿದೆ.

ಶ್ರೀ ಎಂ ವೈ. ಘೋರ್ಪಡೆ.— ಇನ್ನು ಮೈಲೋ ಅನ್ನು ೯೫ ಪೈಸೆಗೆ ಕೆ.ಜಿ. ಎಂದು ಹಂಚುತ್ತಿದ್ದೇವೆ ಬ್ಲಾಕ್ ಮಾರ್ಕೆಟಿಯರ್ಸ್, ಸ್ಮಗ್ಲರ್ಸ್ ನಾವು ಪ್ರೊಟೆಕ್ಟ್ ಮಾಡುತ್ತಿಲ್ಲ. ಅವರ ಮೇಲೆ ಕ್ರಮ ತೆಗೆದುಕೊಂಡವರು ಕೇಂದ್ರಸರ್ಕಾರದವರು. ಈ ಕ್ರಮ ತೆಗೆದುಕೊಳ್ಳದಿದ್ದರೆ ದೇಶದಲ್ಲಿ ಇನ್‌ಫ್ಲೇಷನ್ ಕಂಟ್ರೋಲ್ ಆಗಲಿಕ್ಕೆ ಸಾಧ್ಯವಿರಲಿಲ್ಲ. ಹೊಸ ವಾತಾವರಣದಲ್ಲಿ ಅವರು ಬಿಟ್ಟುಬಿಟ್ಟಿದ್ದಾರೆ, ಅದಕ್ಕೋಸ್ಕರ ನಾನು ಏನನ್ನೂ ಹೇಳಲಿಕ್ಕೆ ತಯಾರಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಲೆವಿ ರೇಟಿನಲ್ಲಿ ಭತ್ತ ತಂದು, ಕನ್ಸೂಮರ್ಸ್‌ಗೆ ಹೆಚ್ಚಿನ ರೇಟಿನಲ್ಲಿ ಅಕ್ಕಿಯನ್ನು ನಿಮ್ಮ ಸರ್ಕಾರದವರು ಮಾರಿದ್ದಾರೆ. ಇದು ಪತ್ರಿಕೆಗಳಲ್ಲಿಯೂ ವರದಿಯಾಗಿದೆ. ನಿಮ್ಮ ಸರ್ಕಾರ ವರ್ತಕರಿಗಿಂತ ದುಬಾರಿ ರೇಟಿನಲ್ಲಿ ಪದಾರ್ಥಗಳನ್ನು ಮಾರಿದೆ ಎಂದು ನಿಮ್ಮ ಪಕ್ಷದ ಮಾನ್ಯ ಹನುಮಂತಯ್ಯನವರು ಆಪಾದನೆ ಮಾಡಿದ್ದಾರೆ. ಇದರ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು ಸ್ವಾಮಿ? ನೀವು ಜಾಣತನದ ಜವಾಬನ್ನು ಕೊಡಬೇಡಿ?

ಶ್ರೀ ಎಂ. ವೈ. ಘೋರ್ಪಡೆ.— ಇದು ಸಪ್ಲಿಮೆಂಟರಿ ಎಸ್ಟಿಮೇಟಿಗೆ ಸಂಬಂಧಪಟ್ಟ ವಿಷಯವಲ್ಲ. ಬಾವಿಗಳ ವಿಷಯವಾಗಿ ಮಾನ್ಯ ವಿ.ಎನ್ ಪಾಟೀಲರು ಹೇಳಿದ್ದಾರೆ. ಆ ತಕ್ಷಣ ನಾನು ಡೆಪ್ಯೂಟಿ ಕಮಿಷನರ್ ಅವರಿಗೆ ಫೋನ್ ಮಾಡಿ ಸ್ಪಷ್ಟವಾಗಿ ಸೂಚನೆ ಕೊಟ್ಟಿದ್ದೇನೆ. ಆದ್ದರಿಂದ ಮಾನ್ಯ ಸದಸ್ಯರು ವಿಷಯಗಳನ್ನು ಜನರಲೈಸ್ ಮಾಡಿ ಹೇಳದೆ ಸ್ಪೆಸಿಫಿಕ್ ಆಗಿ ಹೇಳಿದರೆ ನಮಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ

ಶ್ರೀ ಬಿ. ಪುಟ್ಟಸ್ವಾಮಯ್ಯ.— ಅಧ್ಯಕ್ಷರೇ, ತಮ್ಮ ಮುಖಾಂತರ ಸರ್ಕಾರದವರಿಗೆ ಪ್ರಾರ್ಥನೆ ಮಾಡುತ್ತೇನೆ. ತಮಗೆ ಹೃದಯ ಇದ್ದರೆ, ಮಾನವೀಯತೆ ಇದ್ದರೆ ನಿಮ್ಮ ಪಕ್ಷದ ಧುರೀಣರು, ರಾಷ್ಟ್ರ ಮಟ್ಟದ ನಾಯಕರು ತಮ್ಮ ಸರ್ಕಾರದ ಮೇಲೆ ಆಪಾದನೆ ಮಾಡಿದ್ದಾರೆ ಇದರ ಬಗ್ಗೆ ಹೇಳಿ? ಕಾಯಿ ಹಣ್ಣು ಆಗದೇ ಹೋದರೆ ಗುದ್ದಿ ಗುದ್ದಿ ಹಣ್ಣು ಮಾಡಬೇಕಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.— ಗುದ್ದಲಿಕ್ಕೆ ಹೋಗಬಾರದು, ಮಾನ್ಯ ವೀರಭದ್ರಪ್ಪನವರು ಕೆಲವು ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಓಲ್ಡೇಜ್ ಪೆನ್‌ಷನ್ ಬಗ್ಗೆ ಅವರು ಹೇಳಿದ್ದಾರೆ ಅವರು ಹೇಳಿದ ರೀತಿಯಲ್ಲಿ ಕೆಲವು ಕಡೆಗಳಲ್ಲಿ ಆಗುತ್ತಾ ಇರಬಹುದು. ಅವರ ಕ್ಷೇತ್ರದಲ್ಲಿ ಅವರು ಇಂಥಾದ್ದನ್ನು ನೋಡಿದಾಗ ಸರ್ಕಾರದ ಗಮನಕ್ಕೆ ತಂದಿಲ್ಲ ಎನ್ನುವುದನ್ನು ಅವರು ಹಾನೆಸ್ಟ್ ಆಗಿ ಒಪ್ಪಿಕೊಂಡಿದ್ದಾರೆ ಆದರೂ ಕೂಡ ಇಂಥ ಕೆಲಸವನ್ನು ನಾವು ನಿರ್ಭಯವಾಗಿ ಮಾಡಬೇಕಾಗುತ್ತದೆ. ಅಫಿಷಿಯಲ್ಸ್ ಮಾಡಬೇಕಾಗುತ್ತದೆ, ನಾನ್ ಅಫಿಷಿಯಲ್ಸ್ ಮಾಡಬೇಕಾಗುತ್ತದೆ. ಎಲ್ಲಾ ಪಕ್ಷದ ಜನರೂ ಇಂಥ ಕೆಲಸವನ್ನು ಮಾಡಬೇಕಾಗುತ್ತದೆ. ಯಾರಾದರೂ ರೂಲ್ಸ್‌ಗೆ ವಿರೋಧವಾಗಿ ಪೆನ್‌ಷನ್ ಕೊಡಿಸಿದ್ದರೆ ಅದನ್ನು ನಾವು ತಿದ್ದಬೇಕಾಗುತ್ತದೆ. ನಾವು ಚುನಾವಣೆಯ ಕಾಲದಲ್ಲಿ ಕೆಲವು ಕಡೆ

